ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 13 | ಮಾರ್ಚ್ 22–28, 2021 | ಪುಟ 16 | ರೂ. 10

https://janashakthi.word... : js...weekl...@ya...o.com





ಕೇರಳ

ಜನರೊಂದಿಗೆ ಎಲ್‌ಡಿಎಫ್ ಎಲ್‌ಡಿಎಫ್‌ನೊಂದಿಗೆ ಜನರು

ಪಶ್ಚಿಮ ಬಂಗಾಲ ಪರ್ಯಾಯ ಸಾಧ್ಯ





ದೇಶದ ಮಾರಾಟದ ವಿರುದ್ಧ ಸಮರ

ಮೀಸಲಾತಿ: ಬಡತನ ನಿರ್ಮೂಲನಾ ಕಾರ್ಯಕ್ರಮವಲ್ಲ



ಮಾರ್ಚ್ 26 : ಭಾರತ್ ಬಂದ್

ಮಾರ್ಚ್ 28 : ಕರಾಳ ಕಾಯ್ದೆಗಳ ಹೋಳಿ ದಹನ

1991ರ ಪೂಜಾಸ್ಥಳಗಳ ಕಾಯ್ದೆ ಹಾಗೆಯೇ ಉಳಿಯಬೇಕು

ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆಗಳು

ಸುಪ್ರಿಂ ಕೋರ್ಟ್ ಪೂಜಾಸ್ಥಳಗಳು(ವಿಶೇಷ (ವಿಧಿ) ಕಾಯ್ದೆ, 1991ರ ಮರು ಪರೀಕ್ಷಣೆಗೆ ದಾರಿ ಮಾಡಿಕೊಟ್ಟಿರುವುದು ದುರದೃಷ್ಟಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಈ ಕಾಯ್ದೆ ಎಲ್ಲ ಧಾರ್ಮಿಕ ಸ್ಥಳಗಳ ಸ್ವರೂಪವನ್ನು ಆಗಸ್ಟ್ 15, 1947 ರಂದು ಇದ್ದಂತೆ ಕಾಯ್ದುಕೊಳ್ಳಬೇಕು, ಪೂಜಾಸ್ಥಳಗಳ ಸ್ವರೂಪಕ್ಕೆ ಸಂಬಂಧಪಟ್ಟಂತೆ ಯಾವುದೇ ವ್ಯಾಜ್ಯ ಅಥವ ಕಲಾಪ ಯಾವುದೇ ನ್ಯಾಯಾಲಯದಲ್ಲಿ ಇರಬಾರದು ಎಂದು ವಿಧಿಸುತ್ತದೆ.

ಇದು ಆಗಸ್ಟ್ 15, 1947ರಂದು ಇದ್ದ ಪೂಜಾಸ್ಥಳಗಳ ಮೇಲೆ ವಿವಾದಗಳನ್ನು ಎಬ್ಬಿಸುವ ಯಾವುದೇ ಮೊಕದ್ದಮೆಯನ್ನು ನ್ಯಾಯಾಲಯಗಳು ಎತ್ತಿಕೊಳ್ಳದಂತೆ ನಿಷೇಧಿಸುತ್ತದೆ. ಅದಾಗಲೇ ನ್ಯಾಯಾಲಯಗಳಲ್ಲಿ ಇದ್ದ ಇಂತಹ ಮೊಕದ್ದಮೆಗಳು ವಜಾ ಆಗುತ್ತವೆ ಎಂದೂ ಅದು ವಿಧಿಸುತ್ತದೆ.

ಆದರೆ ಈ ಕಾಯ್ದೆ, ಆಗ ವಿವಾದದಲ್ಲಿ ಇದ್ದ ಅಯೋಧ್ಯೆಯಲ್ಲಿನ ಬಾಬ್ರಿ ಮಸೀದಿ/ ರಾಮಜನ್ಮಭೂಮಿಯನ್ನು ಮಾತ್ರವೇ ಇದಕ್ಕೆ ಹೊರತುಪಡಿಸಿತ್ತು. ಈ ವಿನಾಯ್ತಿಯನ್ನು ಉಲ್ಲೇಖಿಸಿ ಸುಪ್ರಿಂ ಕೋರ್ಟ್2019ರ ಅಯೋಧ್ಯಾ ತೀರ್ಪಿನಲ್ಲಿ ಈ ಕಾಯ್ದೆಯಿಂದಾಗಿ ಇದನ್ನು ಇಂತಹ ಬೇರೆ ಪ್ರಕರಣಗಳನ್ನು ಸ್ವೀಕರಿಸುವುದಿಲ್ಲ ಎಂದು ಮತ್ತೊಮ್ಮೆ ದೃಢಪಡಿಸಿತ್ತು ಎಂದು ನೆನಪಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಯಾವ ಆಧಾರಗಳಲ್ಲಿ ಈ ಶಾಸನವನ್ನು ತರಲಾಗಿತ್ತೋ ಅವುಗಳನ್ನು ಮರು ಪರೀಕ್ಷಣೆ ಮಾಡುವ ಅಗತ್ಯವೇನೂ ಇಲ್ಲ ಎಂದು ಮತ್ತೊಮ್ಮೆ ದೃಢೀಕರಿಸಿದೆ.

ಕೇಂದ್ರ ಸರಕಾರ ಈ ಕುರಿತು ಸುಪ್ರಿಂ ಕೋರ್ಟ್ ಅಭಿಪ್ರಾಯವನ್ನು ತಿಳಿಸಬೇಕು ಎಂದು ಕೇಳಿರುವುದಕ್ಕೆ ಉತ್ತರವಾಗಿ ಪೂಜಾ ಸ್ಥಳಗಳ ಕಾಯ್ದೆ, 1991ನ್ನು ಬಲವಾಗಿ ದೃಢೀಕರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಮ್ಯಾನ್ಮಾರ್‌ನಿಂದ ಬರುವವರಿಗೆ ನಿರಾಶ್ರಿತರ ಸ್ಥಾನಮಾನ ಒದಗಿಸಿ

ಮ್ಯಾನ್ಮಾರ್‌ನಿಂದ ದೊಡ್ಡ ಸಂಖ್ಯೆಯಲ್ಲಿ ಜನಗಳು ಬರುತ್ತಿರುವುದನ್ನು ತಡೆಯಬೇಕು ಎಂದು ಈಶಾನ್ಯ ಭಾಗದ ರಾಜ್ಯ ಸರಕಾರಗಳಿಗೆ ಕೇಂದ್ರ ಸರಕಾರ ಸೂಚನೆ ನೀಡಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೋ ಆಳವಾದ ಆತಂಕವನ್ನು ವ್ಯಕ್ತಪಡಿಸಿದೆ. ಗೃಹ ಸಚಿವಾಲಯ ಒಂದು ಪತ್ರದಲ್ಲಿ ರಾಜ್ಯಗಳು "ಕಾನೂನುಬಾಹಿರ ವಲಸೆಗಾರರ'ರನ್ನು ಗುರುತಿಸಬೇಕು, ಹಿಡಿದಿಡಬೇಕು ಮತ್ತು ಗಡಿಪಾರು ಮಾಡುವ ಕ್ರಮವನ್ನು ಆರಂಭಿಸಬೇಕು ಎಂದು ಹೇಳಿದೆ.

ಇದು ಆಂಗ್ ಸಾನ್ ಸೂ ಕ್ಯಿ ನೇತೃತ್ವದ ಚುನಾಯಿತ ಸರಕಾರವನ್ನು ಪದಚ್ಯುತಗೊಳಿಸಿ ಅಧಿಕಾರ ವಶಪಡಿಸಿಕೊಂಡಿರುವ ಮಿಲಿಟರಿ ಆಳರಸರು ನಡೆಸಿರುವ ಹಿಂಸಾಚಾರದಿಂದ ಓಡಿ ಬರುತ್ತಿರುವ ಜನಗಳ ಬಗ್ಗೆ ಒಂದು ಅಮಾನವೀಯ ಮತ್ತು ಪ್ರಜಾಪ್ರಭುತ್ವ–ವಿರೋಧಿ ನಿಲುವು ಎಂದು ಪೊಲಿಟ್ ಬ್ಯುರೊ ಅಭಿಪ್ರಾಯ ಪಟ್ಟಿದೆ.

ಭಾರತೀಯ ಜನತೆ ನೆರೆದೇಶ ಮ್ಯಾನ್ಮಾರ್ ನ ಜನತೆಯ ಬಗ್ಗೆ ಬಹಳ ಸಹಾನುಭೂತಿ ಹೊಂದಿದ್ದಾರೆ, ಮಿಲಿಟರಿ ಆಡಳಿತ ವಹಿಸಿಕೊಂಡಿರುವುದನ್ನು ಧೀರತನದಿಂದ ಪ್ರತಿಭಟಿಸುತ್ತಿರುವವರಿಗೆ ಬೆಂಬಲ ಹೊಂದಿದ್ದಾರೆ.

ಭಾರತದ ಸರಕಾರ ಈ ಸಹಾನುಭೂತಿಯನ್ನು ಬಿಂಬಿಸಬೇಕು, ಜೀವ ಭಯದಿಂದ ಗಡಿದಾಟಿ ಬಂದಿರುವ ಜನಗಳನ್ನು 'ಕಾನೂನುಬಾಹಿರ ವಲಸೆಗಾರರು' ಎಂದು ಕಾಣಬಾರದು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಅವರಿಗೆ ನಿರಾಶ್ರಿತರ ಸ್ಥಾನಮಾನ ನೀಡಬೇಕು ಮತ್ತು ಮಾನವೀಯ ನೆರವನ್ನು ಒದಗಿಸಬೇಕು ಎಂದು ಆಗ್ರಹಿಸಿದೆ.

ಹುತಾತ್ಮರ ನೆನಪಿನ ರೈತ–ಕಾರ್ಮಿಕ ಪಾದಯಾತ್ರೆಗಳು ಮಾ. 23 ಹುತಾತ್ಮ ದಿನದಂದು ದಿಲ್ಲಿ ಗಡಿಗಳಲ್ಲಿ ಸಮಾಗಮ

ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್), ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ (ಎಐಎಡಬ್ಲ್ಯುಯು) ಮತ್ತು ಪ್ರಮುಖ ಕೇಂದ್ರೀಯ ಕಾರ್ಮಿಕ ಸಂಘಟನೆ ಸಿಐಟಿಯು ಮಾರ್ಚ್ 18 ರಿಂದ ಮಾರ್ಚ್ 23ರ ವರೆಗೆ ಶಹೀದ್ ಯಾದ್ಗಾರ್ ಕಿಸಾನ್–ಮಜ್ದೂರ್ ಪದಯಾತ್ರಾ' ನಡೆಸಲು ಕರೆ ನೀಡಿವೆ.



ಪಂಜಾಬ್, ಹರ್ಯಾಣ ಮತ್ತು ಉತ್ತರಪ್ರದೇಶದಿಂದ ಈ ಮೂರು ಪಾದಯಾತ್ರೆಗಳು ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರುರವರನ್ನು ಬ್ರಿಟಿಶ್ ಆಳರಸರು ಗಲ್ಲಿಗೇರಿಸಿದ 90ನೇ ವಾರ್ಷಿಕ ಆಚರಣೆಯ ದಿನವಾದ ಮಾರ್ಚ್ 23 ರಂದು, ರೈತರು ಸುಮಾರು ನಾಲ್ಕು ತಿಂಗಳಿಂದ ಪ್ರತಿಭಟನೆ ನಡೆಸುತ್ತಿರುವ ದಿಲ್ಲಿಯ ಸಿಂಘು, ಟಿಕ್ರಿ ಮತ್ತು ಪಲ್ವಲ್ ಗಡಿಗಳನ್ನು ತಲುಪುತ್ತವೆ.

ಎಲ್ಲ ಕೃಷಿ ಕೂಲಿಕಾರರು, ಕಾರ್ಮಿಕ ಸಂಘಟನೆಗಳು, ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಎಲ್ಲ ವಿಭಾಗಗಳ ಜನರು ಇದರಲ್ಲಿ ಭಾಗವಹಿಸಬೇಕು ಎಂದು ಈ ಮೂರು ಸಂಘಟನೆಗಳು ಜನವರಿ 17 ರಂದು ಒಂದು ಜಂಟಿ ಹೇಳಿಕೆಯಲ್ಲಿ ಕರೆ ನೀಡಿವೆ.

ದೇಶದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳನ್ನು ತರಬೇಕೆಂಬ ಈ ಯುವ ಹುತಾತ್ಮರ ತ್ಯಾಗ–ಬಲಿದಾನಗಳನ್ನು ನೆನಪಿಸಿಕೊಳ್ಳುತ್ತ ಅವರ ಕನಸನ್ನು ನನಸು ಮಾಡುತ್ತೇವೆ ಎಂದು ಈ ದಿನದಂದು ದಿಲ್ಲಿಯ ಈ ಮೂರು ಗಡಿಗಳಲ್ಲಿ ಪ್ರತಿಜ್ಞೆ ಮಾಡಲಾಗುವುದು ಎಂದು ಈ ಜಂಟಿ ಹೇಳಿಕೆ ಹೇಳಿದೆ.

ಬ್ರಿಟಿಶ್ ಸಾಮ್ರಾಜ್ಯದ ಆಳ್ವಿಕೆಯನ್ನು ಬೆಂಬಲಿಸಿದವರು ಈಗ ಅಧಿಕಾರ ಕಬಳಿಸಿರುವುದರಿಂದಾಗಿ ಈ ಯುವ ಹುತಾತ್ಮರ ಕನಸಿನ ಸ್ವಾತಂತ್ರ್ಯ ಅಪಾಯದಲ್ಲಿದೆ ಎಂದು ಅದು ಹೇಳಿದೆ.

ಮೊದಲ ದೊಡ್ಡ ಪಾದಯಾತ್ರೆ ಮಾರ್ಚ್ 18ರಂದು ಹರ್ಯಾಣದ ಹಾನ್ಸಿ ಜಿಲ್ಲೆಯ ಲಾಲ್ ಸಡಕ್ (ಕೆಂಪು ರಸ್ತೆ)ನಿಂದ ಆರಂಭವಾಗಿದೆ. ಇದು ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ 1857ರಲ್ಲಿ ಬಂಡಾಯ ಆರಂಭವಾದ ಒಂದು ಸ್ಥಳ. ಅಲ್ಲಿ ಭಗತ್‌ಸಿಂಗ್‌ರವರ ಸೋದರಸೊಸೆ ಗುರ್ಜಿತ್ ಕೌರ್ ಜಾಥಾವನ್ನು ಉದ್ಘಾಟಿಸಿದರು. ಎಐಕೆಎಸ್‌ನ ಅಧ್ಯಕ್ಷ ಅಶೋಕ ಧವಳೆ ಮತ್ತಿತರ ಮುಖಂಡರು ಹಾಜರಿದ್ದರು.

ಜಿಂದ್‌ನಿಂದ ಬರುವ ಹರ್ಯಾಣದ ರೈತರ ಇನ್ನೊಂದು ಜಾಥಾ ಅದರೊಡನೆ ಸೇರಿಕೊಂಡು ಮಾರ್ಚ್ 23ರಂದು ಟಿಕ್ರಿ ಗಡಿಯನ್ನು ತಲುಪಲಿದೆ. ಈ ಉಪಜಾಥಾದ ಉದ್ಘಾಟನೆಯ ಸಾರ್ವಜನಿಕ ಸಭೆಯಲ್ಲಿ ಸಿಐಟಿಯು ಕಾರ್ಯದರ್ಶಿ ಎ ಆರ್ ಸಿಂಧು, ಎಐಕೆಎಸ್ ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್, ಹಾಗೂ ಹರ್ಯಾಣದ ಸಿಐಟಿಯು, ಎಐಕೆಎಸ್ ಮತ್ತು ಜನವಾದಿ ಮಹಿಳಾ ಸಮಿತಿಯ ಮುಖಂಡರುಗಳು ಮಾತಾಡಿದರು.

ಎರಡನೇ ಪಾದಯಾತ್ರೆಯನ್ನು ಪಂಜಾಬಿನ ರೈತರು ಭಗತ್ ಸಿಂಗ್ ರವರ ಹಳ್ಳಿ ಖಟ್ಕಡ್‌ಕಲಾಂನಿಂದ ' ಆರಂಭಿಸಿದ್ದಾರೆ. ಸಿಐಟಿಯು ರಾಷ್ಟ್ರೀಯ ಅಧ್ಯಕ್ಷರಾದ ಹೇಮಲತಾ, ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂಕೃಷ್ಣನ್ ಮತ್ತು ಎಐಎಡಬ್ಲ್ಯುಯು ಜಂಟಿ ಕಾರ್ಯದರ್ಶಿ ವಿಕ್ರಮ್ ಸಿಂಹ ಬಾವುಟ ತೋರಿಸಿ ಉದ್ಘಾಟಿಸಿದರು. ಅದು ಪಾಣಿಪತ್ ಮೂಲಕ ಸಿಂಘು ಗಡಿಯನ್ನು ತಲುಪುತ್ತದೆ. ಇದರಲ್ಲಿ ಪಂಜಾಬಿನ ರೈತರೊಂದಿಗೆ ಹರ್ಯಾಣದ ರೈತರೂ ಸೇರಿಕೊಳ್ಳುತ್ತಾರೆ.

ಮೂರನೇ ಜಾಥಾದಲ್ಲಿ ಉತ್ತರಪ್ರದೇಶ ಮತ್ತು ಮಧ್ಯಪ್ರದೇಶದ ರೈತರು ಭಾಗವಹಿಸುತ್ತಿದ್ದು ಅದು ಮಥುರಾದಿಂದ ಮಾರ್ಚ್ 19ರಂದು ಹೊರಟು ಮಾರ್ಚ್ 23ರಂದು ಪಲ್ವಲ್ ತಲುಪುತ್ತದೆ.

ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಇದನ್ನು ಉದ್ಘಾಟಿಸುತ್ತಾರೆ. ಉದ್ಘಾಟನಾ ಸಭೆಯಲ್ಲಿ ಎಐಕೆಎಸ್‌ನ ಹಣಕಾಸು ಕಾರ್ಯದರ್ಶಿಯವರಲ್ಲದೆ, ಉತ್ತರಪ್ರದೇಶ ಮತ್ತು ಮಧ್ಯಪ್ರದೇಶದ ಕಿಸಾನ್ ಸಭಾ ರಾಜ್ಯಕಾರ್ಯದರ್ಶಿಗಳು ಮತ್ತಿತರರು ಮಾತಾಡುತ್ತಾರೆ.

ಮೂರೂ ಪಾದಯಾತ್ರೆಗಳು ದಾರಿಯುದ್ದಕ್ಕೂ ಮಾರ್ಚ್ 26 ರ ಭಾರತ್ ಬಂದ್‌ಗೆ ಸಿದ್ಧತೆಯಾಗಿ ಹಲವು ಸಭೆಗಳನ್ನು ನಡೆಸುತ್ತವೆ, ಮೋದಿ–ಷಾ–ಅಂಬಾನಿ–ಅದಾನಿ ಕೂಟದ ಧೋರಣೆಗಳನ್ನು ಬಯಲಿಗೆಳೆಯುತ್ತವೆ ಎಂದು ಎಐಕೆಎಸ್, ಸಿಐಟಿಯು ಹಾಗೂ ಎಐಎಡಬ್ಲ್ಯುಯು ಹೇಳಿವೆ.

ಮೊದಲನೆ ಜಾಥಾ ಭಗತ್‌ಸಿಂಗ್‌ರವರ ಸೋದರಸೊಸೆ ಗುರ್ಜಿತ್ ಕೌರ್‌ರವರಿಂದ ಉದ್ಘಾಟನೆ



ಭಗತ್ ಸಿಂಗ್ ಸ್ವಂತ ಹಳ್ಳಿ ಖಟ್ಕಡ್‌ಕಲಾಂನಲ್ಲಿ ಎರಡನೇ ಜಾಥಾದ ಉದ್ಘಾಟನೆ





ಸಂಪಾದಕೀಯ

ಮೀಸಲಾತಿ ಬಡತನ ನಿರ್ಮೂಲನಾ ಕಾರ್ಯಕ್ರಮವಲ್ಲ

ಪಂಚಾಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗಗಳ 2 ಎ ಪ್ರವರ್ಗಕ್ಕೆ ಸೇರ್ಪಡೆ ಮಾಡಿ ಮೀಸಲಾತಿ ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕೂಡಲ ಸಂಗಮ ಪಂಚಾಮಸಾಲಿ ಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ 64 ದಿನಗಳಿಂದ ನಡೆಯುತ್ತಿದ್ದ ಧರಣಿ ಅಂತ್ಯಗೊಂಡಿದೆ. ಹಿಂದುಳಿದ ವರ್ಗಗಳ ಆಯೋಗ ಹಾಗೂ ಹೈಕೋರ್ಟಿನ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿ ಮುಂದಿನ ಆರೇಳು ತಿಂಗಳಲ್ಲಿ ನೀಡುವ ವರದಿಯ ಆಧಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಧಾನಸಭೆಯಲ್ಲಿ ಭರವಸೆ ನೀಡಿದ ಪ್ರಯುಕ್ತ ಹೋರಾಟವನ್ನು ಸ್ಥಗಿತಗೊಳಿಸಲಾಯಿತು.

ಮುಖ್ಯ ಮಂತ್ರಿಗಳ ಭರವಸೆಯನ್ನು ಆಧರಿಸಿ ಹೋರಾಟವನ್ನು ಕೈಬಿಡಲಾದರೂ ಅದರ ಪರ ಹಾಗೂ ವಿರುದ್ಧದ ಚರ್ಚೆ ಮಾತ್ರ ವ್ಯಾಪಕವಾಗಿ ಮುಂದುವರೆಯುತ್ತಿದೆ.

ವಿವಿಧ ಪ್ರಗತಿಪರ, ದಲಿತ ಹಾಗೂ ಹಿಂದುಳಿದವರ ಸಂಘಟನೆಗಳು ಈಗಾಗಲೇ ಸಭೆ ಸೇರಿ ಬಲಾಢ್ಯ ಸಮುದಾಯಗಳಿಗೆ ಹಿಂದುಳಿದ ವರ್ಗಗಳ ಪ್ರವರ್ಗದ ಪಟ್ಟಿಯಲ್ಲಿ ಮೀಸಲಾತಿ ನೀಡುವುದನ್ನು ಜನ ಹೋರಾಟದ ಮೂಲಕ ವಿರೋಧಿಸಲು ಮತ್ತು ಕಾನೂನು ಹೋರಾಟವನ್ನು ಆರಂಭಿಸಲು ನಿರ್ಧರಿಸಿವೆ. ಇದೊಂದು ಆರೋಗ್ಯಕರ ಬೆಳವಣಿಗೆಯಲ್ಲ. ಜನ ಒಗ್ಗಟ್ಟಾಗಿ ಅನಿಷ್ಟ ಜಾತಿಪದ್ಧತಿಯ ವಿರುದ್ಧ ಹೋರಾಡುವ ಬದಲಾಗಿ ಜಾತಿ ಆಧಾರದಲ್ಲಿ ಛಿದ್ರರಾಗುತ್ತಿದ್ದಾರೆ. 'ಜಾತಿ ವ್ಯವಸ್ಥೆ ಶ್ರಮಿಕರನ್ನು ವಿಭಜಿಸುತ್ತದೆ' ಎಂಬ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮಾತು ಇಲ್ಲಿ ನಿಜವಾಗುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸಂವಿಧಾನದಲ್ಲೇ ಮೀಸಲಾತಿ ಸವಲತ್ತು ನೀಡಲಾಗಿದೆ. ಅವರು ಶತಮಾನಗಳಿಂದ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅವಕಾಶ ವಂಚಿತರು. ಅವರು ಅಸ್ಪೃಶ್ಯತೆ ಹಾಗೂ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದರು. ಶಿಕ್ಷಣದ ಹಕ್ಕು ನಿರಾಕರಿಸಲ್ಪಟ್ಟವರು. ಇವರು ಇತರರೊಂದಿಗೆ ಸಮಾನತೆ ಮತ್ತು ಸ್ವಾಭಿಮಾನದಿಂದ ಬಾಳುವಂತಾಗಲು ಅವರಿಗೆ ಮೀಸಲಾತಿ ಸೌಲಭ್ಯವನ್ನು ಸಂವಿಧಾನದಲ್ಲೇ ಘೋಷಣೆ ಮಾಡಲಾಗಿತ್ತು. ಈ ಮೀಸಲಾತಿ ಸೌಲಭ್ಯ ಬಹುಕಾಲ ಮುಂದುವರೆಯುವ ಅಗತ್ಯವಿಲ್ಲ ಎಂದು ಡಾ॥ ಬಾಬಾಸಾಹೇಬ್ ಅಭಿಪ್ರಾಯಪಟ್ಟಿದ್ದರು. ಆದರೆ ದಶಕಗಳ ನಂತರವೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಪರಿಸ್ಥಿತಿಯಲ್ಲಿ ನಿರೀಕ್ಷಿತ ಬದಲಾವಣೆ ಸಾಧ್ಯವಾಗಿಲ್ಲ, ಅವರು ಇಂದಿಗೂ ಅವಮಾನದ ಬದುಕನ್ನೇ ಬದುಕುತ್ತಿದ್ದಾರೆ. ಆದ್ದರಿಂದ ಅವರ ಮೀಸಲಾತಿ ಸೌಲಭ್ಯ ಮುಂದುವರೆಯಬೇಕು. ಅದರ ಸಮರ್ಪಕ ಅನುಷ್ಠಾನ ಸಾಧ್ಯವಾಗಬೇಕು. ಅವರಿಗೆ ಮೀಸಲಾತಿ ಸೌಲಭ್ಯ ನೀಡುವಾಗ ಅದು ಭಿಕ್ಷೆಯಂತಿರಬಾರದು. ಅದು ಅವರ ಹಕ್ಕಾಗಿ ದೊರೆಯುವಂತಾಗಬೇಕು. ಯಾವ ಕೆನೆಪದರ ಸಿದ್ಧಾಂತವನ್ನು ಅವರಿಗೆ ಅನ್ವಯಿಸಬಾರದು. ಅವರು ಇತರರೊಂದಿಗೆ ಯಾವುದೇ ಬೇಧವಿಲ್ಲದೆ ಸಮಾನತೆಯಲ್ಲಿ ಬಾಳುವುದು ಸಾಧ್ಯವಾಗುವರೆಗೂ ಅವರಿಗೆ ಮೀಸಲಾತಿ ದೊರೆಯಬೇಕು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಗಳಿಗೆ ಸಿಗುವ ಸಂವಿಧಾನಾತ್ಮಕ ಮೀಸಲಾತಿಯಿಂದ ಬಲಾಢ್ಯ ಸಮುದಾಯಗಳ ಕೆಲವರು ಹೊಟ್ಟೆಕಿಚ್ಚು ಪಟ್ಟುಕೊಳ್ಳುತ್ತಿದ್ದಾರೆ. ದಲಿತರನ್ನು ಮೀಸಲಾತಿ ಹಕ್ಕಿನಿಂದ ಮುಕ್ತಗೊಳಿಸಲು ಹೊಂಚುಹಾಕುತ್ತಿದ್ದಾರೆ. ತಮಗೂ ಮೀಸಲಾತಿ ಬೇಕು ಎಂದು ಸರ್ಕಾರಗಳ ಮೇಲೆ ಒತ್ತಡ ಹೇರುತ್ತಾರೆ. ಸರ್ಕಾರ ಪ್ರಬಲ ಜಾತಿ ಜನಗಳ ಕೈಯಲ್ಲೇ ಇರುವುದರಿಂದ ಅವರು ಸಂವಿಧಾನವನ್ನು ತಿದ್ದುಪಡಿ ಮಾಡಿಯಾದರೂ ಸೌಲಭ್ಯವನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಕರ್ನಾಟಕದಲ್ಲಿ ಈಗ ನಡೆದಿರುವುದು ಇದೇ. ಹಿಂದೆ ಉತ್ತರ ಭಾರತದ ಪಾಟಿಗಾರ್, ಜಾಟ್ ಮೊದಲಾದ ಪ್ರಬಲ ಜಾತಿಗಳಿಗೆ ಸೇರಿದವರು ಇದೇ ರೀತಿ ಪ್ರಬಲ ಹೋರಾಟ ನಡೆಸಿದ್ದರು.

ಪ್ರಬಲ ಜಾತಿಗಳ ಮುಖಂಡರು ಮತ್ತು ಕೆಲವು ಮಠಾಧೀಶರು, "ನಮ್ಮ ಜಾತಿಯಲ್ಲೂ ಬಡವರಿದ್ದಾರೆ; ಅವರಿಗೆ ಮೀಸಲಾತಿಯಿಂದ ಅನುಕೂಲವಾಗುತ್ತದೆ" ಎಂಬ ವಾದವನ್ನು ಮುಂದಿಡುತ್ತಾರೆ. ಮೀಸಲಾತಿ ಬಡತನ ನಿರ್ಮೂಲನಾ ಕಾರ್ಯಕ್ರಮವಲ್ಲ. ಏರುತ್ತಿರುವ ಬೆಲೆಗಳನ್ನು ಇಳಿಸುವಂತೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಹೆಚ್ಚು ಹಣವನ್ನು ಸರ್ಕಾರ ಒದಗಿಸುವಂತೆ, ಶಿಕ್ಷಣ, ಆರೋಗ್ಯ, ವಸತಿ ಮೊದಲಾದ ಅಗತ್ಯಗಳಿಗೆ ಹೆಚ್ಚಿನ ಹಣ ಒದಗಿಸುವಂತೆ ಹೋರಾಟ ಮಾಡುವುದು ಬಡತನ ನಿರ್ಮೂಲನೆಗೆ ಸಹಾಯವಾಗುತ್ತದೆ. ಕೇವಲ ಮೀಸಲಾತಿಯಿಂದ ಬಡತನ ನಿರ್ಮೂಲನೆ ಆಗುವುದಿಲ್ಲ. ಎಲ್ಲರಿಗೂ ಶಿಕ್ಷಣ–ಎಲ್ಲರಿಗೂ ಉದ್ಯೋಗ ಸಿಗುವಂತಾಗಲು ಹೋರಾಡಿದರೆ ಮೀಸಲಾತಿಯ ಅಗತ್ಯವೇ ಇರಲಾರದು.

ಎಲ್ಲರಿಗೂ ಶಿಕ್ಷಣ ಸಿಗುವಂತಾಗಬೇಕಾದರೆ ಸರ್ಕಾರಿ ಶಾಲೆಗಳು ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ನೀಡುವಂತಾಗಬೇಕು. ಎಲ್ಲರಿಗೂ ಉದ್ಯೋಗ ಸಿಗುವಂತಾಗಲು ಖಾಸಗೀ ರಂಗದಲ್ಲೂ ಮೀಸಲಾತಿ ಜಾರಿಗೆ ಬರಬೇಕು. ಬಡತನ, ನಿರುದ್ಯೋಗ, ಅನಕ್ಷರತೆ ವಿರುದ್ಧ ಎಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು. ಶಾಶ್ವತ ಪರಿಹಾರ ನೀಡದ ಮೀಸಲಾತಿಗಾಗಿ ಜಾತಿ ಜಾತಿಗಳ ಜನ ಪರಸ್ಪರ ಕಚ್ಚಾಡುತ್ತಿದ್ದರೆ ಶೋಷಕರಿಗೇ ಲಾಭ. ಮೀಸಲಾತಿಯಲ್ಲಿ ಶಾಶ್ವತ ಪರಿಹಾರ ದೊರೆಯದು. ಮೀಸಲಾತಿಯಿಂದ ಬಡತನ ನಿರ್ಮೂಲನೆ ಅಥವ ಬಡವರ ಏಳಿಗೆಯಾಗಲು ಹೇಗೆ ಸಾಧ್ಯ?.

ಮಾರ್ಚ್ 22, 2021 ರ ಬೃಹತ್ ವಿಧಾನಸೌಧ ಚಲೋ ಹೋರಾಟವನ್ನು ಯಶಸ್ವಿಗೊಳಿಸಲು 'ಸಂಯುಕ್ತ ಹೋರಾಟ–ಕರ್ನಾಟಕ' ಕರೆ ನೀಡಿದೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ, ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ, ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನ ಮತ್ತು ಮಹಿಳೆಯರ ಜ್ವಲಂತ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಮಾರ್ಚ್ 22, 2021 ರಂದು "ಬೃಹತ್ ವಿಧಾನಸೌಧ ಚಲೋ" ಹೋರಾಟವನ್ನು "ಸಂಯುಕ್ತ ಹೋರಾಟ–ಕರ್ನಾಟಕ" ಸಂಘಟಿಸುತ್ತಿದ್ದು, ರಾಜ್ಯದ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನರು ಮತ್ತು ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು "ಸಂಯುಕ್ತ ಹೋರಾಟ–ಕರ್ನಾಟಕ" ಮನವಿ ಮಾಡುತ್ತದೆ. ಅಂದು ಬೆಳ್ಳಿಗೆ 11 ಗಂಟೆಗೆ ನಗರ ರೈಲ್ವೇ ನಿಲ್ದಾಣದಿಂದ ಮೆರವಣಿಗೆ ಆರಂಭವಾಗಿ ಫ್ರೀಡಂ ಪಾರ್ಕ್‌ನಲ್ಲಿ ಮದ್ಯಾಹ್ನಾ 1 ಗಂಟೆಗೆ ಬಹಿರಂಗ ಸಭೆಯಾಗಿ ಮಾರ್ಪಡಲಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಹತ್ತಾರು ಸಾವಿರ ಜನರು ಭಾಗವಹಿಸಲಿರುವ ಈ ಬೃಹತ್ ಹೋರಾಟದಲ್ಲಿ ದೆಹಲಿಯ ರೈತ ಹೋರಾಟಗಾರರಾದ ರಾಕೇಶ್ ಸಿಂಗ್ ಟಿಕಾಯತ್, ಡಾ॥ ದರ್ಶನ್ ಪಾಲ್, ಯದ್ಧುವೀರ್ ಸಿಂಗ್ ಹಾಗು "ಸಂಯುಕ್ತ ಹೋರಾಟ–ಕರ್ನಾಟಕ"ದ ಮುಖಂಡರು ಅಲ್ಲದೆ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಣೇಹಳ್ಳಿ ಮಠ, ರೈತ ಮುಖಂಡರಾದ ಬಾಬಗೌಡ ಪಾಟೀಲ್, ಚುಕ್ಕಿ ನಂಜುಂಡಸ್ವಾಮಿ, ಡಾ॥ ಟಿ.ಎನ್. ಪ್ರಕಾಶ್, ಕುರುಬೂರ್ ಶಾಂತಕುಮಾರ್ ಹಾಗು ಬಿ.ಆರ್. ಪಾಟೀಲ್‌ರನ್ನು ಸಹ ಆಹ್ವಾನಿಸಿದೆ.

ರಾಜ್ಯದ ಬಹುತೇಕ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನರು, ಮಹಿಳಾ ಸಂಘಟನೆಗಳನ್ನು ಒಳಗೊಂಡು ರಚನೆಯಾಗಿರುವ "ಸಂಯುಕ್ತ ಹೋರಾಟ–ಕರ್ನಾಟಕ" ಈ ಹೋರಾಟದ ಮೂಲಕ ಮತ್ತಷ್ಟು ಸಂಘಟನೆಗಳನ್ನು ಒಳಗೊಂಡು ಇನ್ನಷ್ಟು ಪ್ರಬಲ ಚಳುವಳಿಯನ್ನು ಸಂಘಟಿಸಲು ಮುಂದಾಗುತ್ತಿದೆ. ಈ ರೈತ ಪರ ಪ್ರಯತ್ನಗಳಿಗೆ ಹಾಗು ಹೋರಾಟಗಳಿಗೆ ರಾಜ್ಯದ ದುಡಿಯುವ ಜನತೆ ಮತ್ತಷ್ಟು ಶಕ್ತಿ ತುಂಬಬೇಕೆಂದು "ಸಂಯುಕ್ತ ಹೋರಾಟ–ಕರ್ನಾಟಕ" ವಿನಂತಿಸಿದೆ.

ತಾನು ಅಧಿಕಾರಕ್ಕೆ ಬಂದರೆ ರೈತರು ಮತ್ತಿತರೆ ದುಡಿಯುವ ಜನರು, ವಿದ್ಯಾರ್ಥಿ, ಯುವಜನ ಮತ್ತು ಮಹಿಳೆಯರ ಸಮಸ್ಯೆಗಳನ್ನು ಇತ್ಯಾರ್ಥ ಪಡಿಸುವುದಾಗಿ ಭರವಸೆಗಳನ್ನು ನೀಡಿದ್ದ ಬಿಜೆಪಿಯು, ಕೇಂದ್ರ ಮತ್ತು ರಾಜ್ಯದಲ್ಲಿ ಕೃಷಿ ಭೂಮಿ, ಕೃಷಿ ಉತ್ಪಾದನೆ, ಕೃಷಿ ಮಾರುಕಟ್ಟೆ, ಚಿಲ್ಲರೆ ವ್ಯಾಪಾರ, ದೇಶದ ಬಾರಿ ದೊಡ್ಡ ಆಸ್ತಿಗಳಾದ ವಿದ್ಯುತ್, ಸಾರ್ವಜನಿಕ ಕ್ಷೇತ್ರದ ಬ್ಯಾಂಕ್, ವಿಮೆ, ರೈಲ್ವೆ, ಬಿ.ಇ.ಎಂ.ಎಲ್. ಇತ್ಯಾದಿಗಳನ್ನು ಮೂರು ಕಾಸಿಗೆ ಕಾರ್ಪೋರೇಟ್ ಕಂಪನಿಗಳಿಗೆ ಮಾರಾಟ ಮಾಡುತ್ತಿದೆ. ಇದಕ್ಕೆ ಪೂರಕವಾಗಿ ಮೂರು ಕೃಷಿ ಕಾಯ್ದೆಗಳು, ವಿದ್ಯುತ್ ಮಸೂದೆ–2020, ಭೂ ಸುಧಾರಣಾ ಕಾಯ್ದೆ ತಿದ್ದುಪಡಿ, ಎಪಿಎಂಸಿ ಕಾಯ್ದೆ ತಿದ್ದುಪಡಿಗಳನ್ನು ಮಾಡಿದೆ. ಇವುಗಳ ಮೂಲಕ ದೇಶದ "ರೈತಾಪಿ ಕೃಷಿ"ಯನ್ನು ನಾಶ ಮಾಡಿ "ಕಂಪನಿ ಕೃಷಿ"ಯನ್ನು ಜಾರಿಗೆ ತರುತ್ತಿದೆ ಮಾತ್ರವಲ್ಲದೇ ಇಡೀ "ಕೃಷಿ" "ಸಾರ್ವಜನಿಕ ಕೇತ್ರ"ವನ್ನು ಕಾರ್ಪೋರೇಟ್ ಕಂಪನಿಗಳಿಗೆ ಧಾರೆ ಎರೆಯುತ್ತಿದೆ.

ಈ ನೀತಿಗಳ ಮುಂದುವರಿದ ಭಾಗವಾಗಿ, ಕಾರ್ಪೋರೇಟ್ ಕಂಪನಿಗಳ ತಮ್ಮ ಲೂಟಿಯನ್ನು ದೊಡ್ಡ ರೀತಿಯಲ್ಲಿ ಮುಂದುವರಿಸಲು ನೂರಾರು ವರ್ಷಗಳ ಧೀಮಂತ ಹೋರಾಟಗಳಿಂದ ಗಳಿಸಿದ್ದ ಕಾರ್ಮಿಕ ಕಾಯ್ದೆಗಳನ್ನು ತಿದ್ದುಪಡಿ ಮಾಡಲಾಗುತ್ತಿದೆ. ಅಸಂಘಟಿತ ವಲಯದಲ್ಲಿ ಕೋಟ್ಯಾಂತರ ಕಾರ್ಮಿಕರಿಗೆ ಕೆಲಸದ ಭದ್ರತೆ, ಕನಿಷ್ಠ ವೇತನದ ಪ್ರಶ್ನೆಗಳನ್ನು ಗಾಳಿಗೆ ತೂರಲಾಗುತ್ತಿದೆ. ಡಿಸೇಲ್, ಪೆಟ್ರೋಲ್ ಬೆಲೆ ಲೀಟರ್‌ಗೆ ನೂರು ರೂ. ಗಳಿಗೆ ಸಮೀಪಿಸಿದೆ. ಅಲ್ಲದೆ ಸಾಮಾನ್ಯ ಜನರು ಬಳಸುವ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿಪರೀತವಾಗಿ ಜನರು ತತ್ತರಿಸುತ್ತಿದ್ದಾರೆ.

ಇಂತಹ ನೀತಿಗಳಿಂದ ಆಕ್ರೋಷಗೊಂಡಿರುವ ಜನರ ಗಮನವನ್ನು ಬೇರೆಡೆ ತಿರುಗಿಸಲು ಗೋಹತ್ಯೆ ನಿಷೇದ ಕಾಯ್ದೆ, ರಾಮಮಂದಿರ ನಿರ್ಮಾಣದ ಪ್ರಶ್ನೆ ಇತ್ಯಾದಿ ಬಾವನಾತ್ಮಕ ವಿಷಯಗಳನ್ನು ದೊಡ್ಡ ಪ್ರಮಾಣದಲ್ಲಿ ಎತ್ತಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಸುಮಾರು ನಾಲ್ಕು ತಿಂಗಳುಗಳಿಂದ ದೆಹಲಿಯಲ್ಲಿ ನಡೆಯುತ್ತಿರುವ ಹೋರಾಟದ ಭಾಗವಾಗಿ, ರಾಷ್ಟ್ರದ ಪ್ರಶ್ನೆಗಳ ಜೊತೆಗೆ ರಾಜ್ಯದ ಪ್ರಶ್ನೆಗಳನ್ನು ಆಧಾರಿಸಿ ಈ ಹೋರಾಟ ನಡೆಯುತ್ತಿದೆ.

ಮಾರ್ಚ್ 26, 2021, "ಭಾರತ್ ಬಂದ್"

ದೆಹಲಿಯ ರೈತ ಹೋರಾಟಕ್ಕೆ ಮಾರ್ಚ್ 26, 2021 ಕ್ಕೆ ನಾಲ್ಕು ತಿಂಗಳು ತುಂಬಲಿದೆ. ರೈತರ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಕೇಂದ್ರ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮಾರ್ಚ್ 26, 2021 ಕ್ಕೆ "ಭಾರತ್ ಬಂದ್"ಗೆ ದೆಹಲಿಯ "ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ)" ಕರೆ ನೀಡಿದೆ.

ಈ ಬಗ್ಗೆ ಮಾರ್ಚ್ 22, 2021 ರ "ವಿಧಾನ ಸೌಧ ಚಲೋ" ಹೋರಾಟದ ಸಂದರ್ಭದಲ್ಲಿ ರಾಷ್ಟ್ರ ನಾಯಕರೊಂದಿಗೆ ಸಮಾಲೋಚಿಸಿ, "ಭಾರತ್ ಬಂದ್" ಭಾಗವಾಗಿ "ಕರ್ನಾಟಕ ಬಂದ್" ಮಾಡುವುದರ ಬಗ್ಗೆ ಅಂತಿಮ ಘೋಷಣೆಯನ್ನು ಮಾಡಿದೆ.

"ರೈತಾಪಿ ಕೃಷಿ"ಯನ್ನು ಉಳಿಸುವ, ದೇಶದ ಅಮೂಲ್ಯ ಆಸ್ತಿಗಳಾದ "ಸಾರ್ವಜನಿಕ ಉದ್ದಿಮೆ"ಗಳನ್ನು ರಕ್ಷಿಸುವ, ಆ ಮೂಲಕ ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಯನ್ನು ಬಲಪಡಿಸುವ ಈ ದೇಶಪ್ರೇಮಿ ಹೋರಾಟವನ್ನು ಎಲ್ಲಾ ದೇಶ ಪ್ರೇಮಿಗಳು ಬೆಂಬಲಿಸಿ ಭಾಗವಹಿಸಬೇಕೆಂದು "ಸಂಯುಕ್ತ ಹೋರಾಟ–ಕರ್ನಾಟಕ" ಮನವಿ ಮಾಡಿದೆ.

ಎಲ್ಐಸಿ, ಬ್ಯಾಂಕ್ ನೌಕರರಿಂದ ಖಾಸಗೀಕರಣದ ವಿರುದ್ಧ ಮುಷ್ಕರ

ವರದಿ:
ವಾ. ಉಚ್ಚಿಲ್

ಬ್ಯಾಂಕುಗಳ ಖಾಸಗೀಕರಣವನ್ನು ವಿರೋಧಿಸಿ ಬ್ಯಾಂಕ್ ನೌಕರರ ಸಂಘಟನೆಗಳ ಸಂಯುಕ್ತ ಸಂಘಟನೆ (ಯುಎಫ್‌ಬಿಯು) ಕರೆಯ ಮೇರೆಗೆ ಮಾರ್ಚ್ 15 ಮತ್ತು 16 ರಂದು ಮಂಗಳೂರು ಮತ್ತು ಉಡುಪಿಗಳಲ್ಲಿ ಬ್ಯಾಂಕು ನೌಕರರು ಮುಷ್ಕರವನ್ನು ನಡೆಸಿದರು. ಇದರಿಂದ ಸರಕಾರೀ ಸ್ವಾಮ್ಯದ ಬ್ಯಾಂಕುಗಳು ದ.ಕ. ಮತ್ತು ಉಡುಪಿ ಎರಡೂ ಜಿಲ್ಲೆಗಳಲ್ಲೂ ಪೂರ್ಣವಾಗಿ ಮುಚ್ಚಿದ್ದವು.

ಮಂಗಳೂರಿನಲ್ಲಿ ಮಾರ್ಚ್ 15 ರಂದು ಮಿನಿ ವಿಧಾನಸೌಧದ ಎದುರು ನಡೆದ ಧರಣಿ ಸತ್ಯಾಗ್ರಹವನ್ನುದ್ದೇಶಿಸಿ ಯುಎಫ್‌ಬಿಯು ಸಂಚಾಲಕ ವಿನ್ಸೆಂಟ್ ಡಿಸೋಜ, ಬ್ಯಾಂಕ್ ಅಧಿಕಾರಿಗಳ ಸಂಘದ ಪರವಾಗಿ ಸತೀಶ್ ಶೆಟ್ಟಿ (ಐಬೊಕ್), ಕೆ.ರಾಘವ(ಎಐಬಿಒಎ), ಟಿ.ಆರ್.ಭಟ್, ಬ್ಯಾಂಕ್ ನೌಕರರ ಸಂಘಟನೆಗಳ ಪರವಾಗಿ ಬಿ.ಎಂ. ಮಾದವ(ಬಿಇಎಫ್ಐ), ಪುರುಷೋತ್ತಮ (ಬಿಇಎಫ್ಐ), ವಿಶ್ವನಾಥ ಪೈ (ಎನ್‌ಒಬಿಡಬ್ಲ್ಯು), ಕಾರ್ಮಿಕ ಸಂಘಟನೆಗಳ ಪರವಾಗಿ ಎಚ್.ವಿ.ರಾವ್(ಐಟಕ್), ಸುನಿಲ್ ಕುಮಾರ್ ಬಜಾಲ್ (ಸಿಐಟಿಯು) ಮಾತನಾಡಿದರು.

ಉಡುಪಿಯಲ್ಲಿ ಮಾರ್ಚ್ 15 ರಂದು ಉಡುಪಿ ನಗರದ ಕೋರ್ಟ್ ರೋಡ್ ಕೆನರಾ ಬ್ಯಾಂಕ್ ಆವರಣದಲ್ಲಿ ಉಡುಪಿ ಜಿಲ್ಲಾ ಬ್ಯಾಂಕ್ ನೌಕರ ಸಂಘಟನೆಗಳ ಸದಸ್ಯರು ಪ್ರತಿಭಟನಾ ಪ್ರದರ್ಶನ ನಡೆಸಿದರು. ಉಡುಪಿ ಜಿಲ್ಲಾ ಯುಎಫ್‌ಬಿಯು ಸಂಚಾಲಕ ಹೆರಾಲ್ಡ್ ಡಿಸೋಜ, ವಿವಿಧ ಬ್ಯಾಂಕ್ ನೌಕರ ಸಂಘಟನೆಗಳ ಮರಿಯೋ ಮಥಾಯಸ್, ರಮೇಶ್ (ಎಐಬಿಇಎ), ಅಶೋಕ್ ಕೋಟ್ಯಾನ್ (ಎಐಬಿಒಸಿ), ಸುಪ್ರಿಯಾ (ಎನ್‌ಸಿಬಿಇ), ರವಿಶಂಕರ್ (ಎಐಬಿಒಎ), ರವೀಂದ್ರ (ಬಿಇಎಫ್ಇ), ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ರಾಮಮೋಹನ್, ಸಿಐಟಿಯು ಉಡುಪಿ ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಮಂಗಳೂರಿನಲ್ಲಿ ಮೊಂಬತ್ತಿ ಬೆಳಗಿಸಿ ಎಲ್ಐಸಿ ನೌಕರರಿಂದ ಪ್ರತಿಭಟನೆ:



ಎಲ್ಐಸಿ ಶೇರು ವಿಕ್ರಯ ಹಾಗೂ ಬ್ಯಾಂಕ್ ಖಾಸಗೀಕರಣವನ್ನು ವಿರೋಧಿಸಿ ಎಲ್ಐಸಿ ಬ್ಯಾಂಕ್ ನೌಕರರ ಹಾಗೂ ಜನಪರ ಸಂಘಟನೆಗಳ ಜಂಟಿ ಆಶ್ರಯದಲ್ಲಿ ಮಾರ್ಚ್ 12 ರಂದು ಸಾಯಂಕಾಲ ಮಂಗಳೂರಿನ ಆರ್‌ಟಿಒ ವೃತ್ತದ ಬಳಿ ಸಾರ್ವಜನಿಕರು ಮೊಂಬತ್ತಿ ಬೆಳಗಿಸಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಅಖಿಲ ಭಾರತ ವಿಮಾ ನೌಕರರ ಸಂಘದ ನಾಯಕರಾದ ಡೆರೆಕ್ ಲೋಬೋ, ಬ್ಯಾಂಕ್ ನೌಕರರ ಸಂಘ (ಬಿಇಎಫ್ಐ) ಮುಖಂಡರಾದ ಬಿ.ಎಂ.ಮಾಧವ, ಬ್ಯಾಂಕ್ ಅಧಿಕಾರಿಗಳ ಸಂಘದ ಕೆ.ರಾಘವ, ವಿಮಾ ಪ್ರತಿನಿಧಿಗಳ ಸಂಘಟನೆಯ ರಮೇಶ್ ಕುಮಾರ್, ಎಐಟಿಯುಸಿಯ ಬಿ.ಶೇಖರ್, ಇಂಟಕ್‌ನ ಲಾರೆನ್ಸ್ ಡಿಸೋಜ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ವಿಮಾ ನೌಕರರ ಮುಖಂಡರಾದ ಪ್ರಭಾಕರ ಕುಂದರ್, ವಿಶ್ವನಾಥ್, ರಾಘವೇಂದ್ರ ರಾವ್, ಬಿ.ಎನ್.ದೇವಾಡಿಗ, ಆಲ್ವಿನ್ ಮಸ್ಕರೇನಸ್, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ನವೀನ್ ಕೊಂಚಾಡಿ, ದಸಂಸ ರಾಜ್ಯ ಸಂಘಟನಾ ಸಂಚಾಲಕ ಎಂ.ದೇವದಾಸ್, ಸಮುದಾಯದ ವಾಸುದೇವ ಉಚ್ಚಿಲ್, ಸಿಐಟಿಯುನ ರಾಮಣ್ಣ ವಿಟ್ಲ, ರವಿಚಂದ್ರ ಕೊಂಚಾಡಿ ವಹಿಸಿದ್ದರು. ಹಲವರು ಸಾಮಾಜಿಕ ಕಾರ್ಯಕರ್ತರೂ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬ್ಯಾಂಕ್, ವಿಮಾ ಕಂಪೆನಿಗಳ ಖಾಸಗೀಕರಣಕ್ಕೆ ವಿರೋಧ ಮೊಂಬತ್ತಿ ಬೆಳಕಿನಲ್ಲಿ ಪ್ರತಿಭಟನೆ:

ಎಲ್ಐಸಿ ಶೇರು ವಿಕ್ರಯ, ರಾಷ್ಟ್ರೀಕೃತ ಬ್ಯಾಂಕ್ ಮತ್ತು ರಾಷ್ಟ್ರೀಕೃತ ಸಾಮಾನ್ಯ ವಿಮಾ ಕಂಪನಿಗಳ ಖಾಸಗೀಕರಣ ವಿರೋಧಿಸಿ ಉಡುಪಿ ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ನೇತೃತ್ವದಲ್ಲಿ ದಿ: 8 ರಂದು ಉಡುಪಿಯಲ್ಲಿ ಸಂಜೆ ಮೊಂಬತ್ತಿ ಬೆಳಕಿನಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಉಡುಪಿಯ ಅಜ್ಜರಕಾಡಿನಲ್ಲಿರುವ ಎಲ್‌ಐಸಿ ಉಡುಪಿ ವಿಭಾಗ ಕಚೇರಿ ಆವರಣದಲ್ಲಿ ಪ್ರತಿಭಟನಾ ಮೆರವಣಿಗೆಗೆ ಸಿಐಟಿಯು ಮುಖಂಡ ವಿಶ್ವನಾಥ ರೈ ಚಾಲನೆ ನೀಡಿದರು.

ಎಐಬಿಇಎಯ ರಾಜ್ಯ ಸಮಿತಿ ಸದಸ್ಯ ಕೆನರಾ ಬ್ಯಾಂಕಿನ ರಮೇಶ್ ಕೆ, ಸಿಐಟಿಯು ಮುಖಂಡ ಬಾಲಕೃಷ್ಣ ಶೆಟ್ಟಿ, ಬಿಇಎಫ್‌ಐಯ ರವೀಂದ್ರ, ವಿಮಾ ನೌಕರರ ಸಂಘ ಉಡುಪಿ ವಿಭಾಗದ ಪ್ರಧನ ಕಾರ್ಯದರ್ಶಿ ಪ್ರಭಾಕರ ಬಿ.ಕುಂದರ್, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಸಂಚಾಲಕ ಕೆ.ಶಂಕರ್ ಮಾತನಾಡಿದರು.

ಪ್ರತಿಭಟನೆಯಲ್ಲಿ ವಿಮಾ ನೌಕರರ ಸಂಘ ಉಡುಪಿ ವಿಭಾಗದ ಅಧ್ಯಕ್ಷ ಕೆ.ವಿಶ್ವನಾಥ್, ವಿವಿಧ ಸಂಘಟನೆಗಳ ಮುಖಂಡರಾದ ರಮೇಶ್ ಆಚಾರ್ಯ, ಸಂತೋಷ್ ಶೆಟ್ಟಿ, ನಾಗೇಶ್ ನಾಯಕ್, ಪ್ರೇಮನಾಥ ಪೂಜಾರಿ ಮೊದಲಾದವರು ಉಪಸ್ಥಿತರಿದ್ದರು.

ಕೋಸ್ಟಲ್ ಬರ್ತ್ ಯೋಜನೆ ವಿರೋಧಿಸಿ ಬೆಂಗರೆಯಲ್ಲಿ ಧರಣಿ

ಮುಸ್ಲಿಮರ ದಫನ ಭೂಮಿ, ಬೆಂಗ್ರೆಯ ಮೀನುಗಾರರು, ಸರಕಾರಿ ಶಾಲೆಯ ಭೂಮಿ ಮತ್ತು ಗ್ರಾಮಸ್ಥರ ಬದುಕು ಏಕಕಾಲಕ್ಕೆ ಕಬಳಿಸುತ್ತಿರುವ ಆರೋಪ ಹೊತ್ತಿರುವ ಸಾಗರ ಮಾಲಾ ಯೋಜನೆಯ ಕೋಸ್ಟಲ್ ಬರ್ತ್ ಯೋಜನಾ ಸ್ಥಳದ ಬಳಿ ಬೆಂಗರೆ ಜಮಾಅತ್ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಸಹಭಾಗಿತ್ವದಲ್ಲಿ ದಿ: 8 ರಂದು ಗ್ರಾಮಸ್ಥರು ಮಂಗಳೂರು ಬೆಂಗರೆಯಲ್ಲಿ ಧರಣಿ ನಡೆಸಿದರು.

ಧರಣಿಯನ್ನುದ್ದೇಶಿಸಿ ಮಾತನಾಡಿದ ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಮಂಗಳೂರು ಹಳೇ ಬಂದರಿನ ಧಾರಣಾ ಸಾಮರ್ಥ್ಯಕ್ಕಿಂತ ಅಧಿಕ ಯೋಜನೆಗಳನ್ನು ಹಳೆ ಬಂದರಿನ ಸುತ್ತಮುತ್ತಲಿನ ನದಿ ದಂಡೆಗಳ ಮೇಲೆ ತಂದು ಹಾಕಲಾಗುತ್ತದೆ. ಇದರಿಂದಾಗಿ ಮೀನುಗಾರಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಸಾಂಪ್ರದಾಯಕ ನಾಡದೋಣಿ ಮೀನುಗಾರರು ಸಂಕಷ್ಟಕ್ಕೆ ಒಳಗಾಗಲಿದ್ದಾರೆ ಎಂದರು.

ಮನಪಾ ಸ್ಥಳೀಯ ಕಾರ್ಪರೇಟರ್ ಮುನೀಬ್ ಬೆಂಗ್ರೆ, ನಾಡದೋಣಿ ಮೀನುಗಾರರ ಸಂಘದ ಮುಖಂಡ ತಯ್ಯೂಬ್ ಬೆಂಗ್ರೆ, ಬಿಲಾಲ್ ಮೊಯ್ದಿನ್, ಡಿವೈಎಫ್ಐ ಬೆಂಗ್ರೆ ಗ್ರಾಮ ಸಮಿತಿ ಕಾರ್ಯದರ್ಶಿ ರಿಝ್ವಾನ್ ಇತರರಿದ್ದರು.

ಬೆಳ್ತಂಗಡಿಯಲ್ಲಿ ಮಹಿಳಾ ದಿನಾಚರಣೆ:

ಜನವಾದಿ ಮಹಿಳಾ ಸಂಘಟನೆಯ ಬೆಳ್ತಂಗಡಿ ತಾಲೂಕು ಘಟಕದ ನೇತೃತ್ವದಲ್ಲಿ ಹಲವಾರು ಸಂಘಟನೆಗಳು ಸೇರಿಕೊಂಡು ಮಾರ್ಚ್ 9 ರಂದು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಿದರು.

ಕಾರ್ಮಿಕ ಕಲ್ಯಾಣ ಮಂಡಳಿ ಬೆಂಗಳೂರು, ಎಕೆಜಿ ಬೀಡಿ ಕಾರ್ಮಿಕರ ಗೃಹ ನಿರ್ಮಾಣ ಸಹಕಾರಿ ಸಂಘ, ಭಾರತೀಯ ರೆಡ್‌ಕ್ರಾಸ್ ಸೊಸೈಟಿ, ಅಳದಂಗಡಿ ತೋಟಗಾರಿಕಾ ರೈತ ಉತ್ಪಾದಕರ ಕಂಪೆನಿ, ಶ್ರಮಶಕ್ತಿ ಸ್ವಸಹಾಯ ಗುಂಪುಗಳ ಒಕ್ಕೂಟ ಇವುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವು. ಅಲ್ಲದೆ ಈ ಸಂದರ್ಭದಲ್ಲಿ ಉಚಿತ ವೈದ್ಯಕೀಯ ಶಿಬಿರವನ್ನು ಕೂಡಾ ಏರ್ಪಡಿಸಲಾಗಿತ್ತು.

ಕಾರ್ಮಿಕ ಕಲ್ಯಾಣ ಮಂಡಳಿಯ ವೈದ್ಯಾಧಿಕಾರಿ ಡಾ.ಭಾಗ್ಯಲಕ್ಷ್ಮಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಜೆಎಂಎಸ್ ಜಿಲ್ಲಾಧ್ಯಕ್ಷೆ ಜಯಂತಿ ಬಿ.ಶೆಟ್ಟಿಯವರು ವಿಶ್ವ ಮಹಿಳಾ ದಿನಾಚರಣೆಯ ಮಹತ್ವವನ್ನು ತಿಳಿಸಿ, ಭಾರತದಲ್ಲಿ ಮಹಿಳೆಯರು ಇಂದಿಗೂ ವಿಶೇಷವಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ, ಆದುದರಿಂದ ಮಹಿಳೆಯರು ಜೆಎಂಎಸ್ ಅಡಿಯಲ್ಲಿ ಒಗ್ಗಟ್ಟಾಗಿ ಮಹಿಳಾ ಹಕ್ಕುಗಳ ರಕ್ಷಣೆಗಾಗಿ ಹೋರಾಡಬೇಕಾಗಿದೆ ಎಂದು ಹೇಳಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಬೀಡಿ ಕಾರ್ಮಿಕ ಕಲ್ಯಾಣ ಮಂಡಳಿಯ ವೈದ್ಯಾಧಿಕಾರಿ ಡಾ.ಚಂದ್ರಮತಿ, ಅಖಿಲ ಭಾರತ ನ್ಯಾಯವಾದಿಗಳ ಸಂಘದ ದ.ಕ. ಜಿಲ್ಲಾಧ್ಯಕ್ಷ ಯಶವಂತ ಮರೋಳಿ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು. ನ್ಯಾಯವಾದಿ ಸುಕನ್ಯಾ ಎಚ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜೆಎಂಎಸ್ ತಾಲೂಕು ಅಧ್ಯಕ್ಷೆ ಜಯಂತಿ ನೆಲ್ಲಿಂಗೇರಿ, ನ್ಯಾಯವಾದಿ ಶಾಲಿನಿ ಮಂಗಳೂರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಗೃಹ ನಿರ್ಮಾಣ ಸಹಕಾರಿ ಸಂಘದ ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು.

ಜನವಾದಿ ಮಹಿಳಾ ಸಂಘಟನೆ ದ.ಕ.ಜಿಲ್ಲಾ ಸಮಿತಿ ವತಿಯಿಂದ ಇಂದು ಮಂಗಳೂರಿನ ಬೋಳಾರದ ಎಕೆಜಿ ಭವನದಲ್ಲಿ ಮಹಿಳಾ ದಿನಾಚರಣಾ ಕಾರ್ಯಕ್ರಮ ನಡೆಯಿತು. ಈ ಸಮಾರಂಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷರಾದ ದೇವಿ ಅವರು ಭಾಗವಹಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ದುಡಿಯುವ ಮಹಿಳೆಯರ ಒಕ್ಕೂಟದ ಸಂಚಾಲಕಿ ಪದ್ಮಾವತಿ ಶೆಟ್ಟಿ ವಹಿಸಿದ್ದರು.

ವೇದಿಕೆಯಲ್ಲಿ ಜೆಎಂಎಸ್ ಜಿಲ್ಲಾ ಅಧ್ಯಕ್ಷೆ ಜಯಂತಿ ಬಿ.ಶೆಟ್ಟಿ ಉಪಾಧ್ಯಕ್ಷೆ ರಮಣಿ, ಜಿಲ್ಲಾ ಕಾರ್ಯದರ್ಶಿ ಭಾರತಿ ಬೋಳಾರ್, ಜಿಲ್ಲಾ ನಾಯಕಿ ರಾಧಾ, ಹೇಮಲತಾ, ಶಾಲಿನಿ ವಕೀಲರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ವಿಲಾಸಿನಿ ತೊಕ್ಕೊಟ್ಟು, ಗಿರಿಜಾ, ನಳಿನಾಕ್ಷಿ, ಜಯಲಕ್ಷ್ಮಿ, ಸಿಐಟಿಯು ಮುಖಂಡರಾದ ವಸಂತ್ ಆಚಾರಿ, ಬಾಲಕೃಷ್ಣ ಶೆಟ್ಟಿ, ಬಾಬು ಪಿಲಾರ್, ಡಿವೈಎಫ್ಐ ಜಿಲ್ಲಾ ಸಮಿತಿ ಸದಸ್ಯ ಅಶ್ರಫ್ ಕೆ.ಸಿ. ರೋಡ್ ಪಾಲ್ಗೊಂಡರು.

ಉಡುಪಿಯಲ್ಲಿ ಅಂಗನವಾಡಿ ನೌಕರರಿಂದ ಧರಣಿ:

ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ಅಂಗನವಾಡಿ ನೌಕರರ ಬೇಡಿಕೆಗಳನ್ನು ಪರಿಶೀಲಿಸುವಂತೆ ಆಗ್ರಹಿಸಿ, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ಉಡುಪಿ ಜಿಲ್ಲಾ ಸಮಿತಿ ವತಿಯಿಂದ ಮಾರ್ಚ್ 15 ರಂದು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು.

ಧರಣಿಯನ್ನುದ್ದೇಶಿಸಿ ಸಿಐಟಿಯು ಉಡುಪಿ ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಶೀಲಾ ನಾಡ ಮಾತನಾಡಿದರು.

ಎಂಆರ್‌ಪಿಎಲ್ ಮಾಲಿನ್ಯದ ವಿರುದ್ಧ ಜೋಕಟ್ಟೆ ನಾಗರಿಕರ ಪ್ರತಿಭಟನೆ:

ಎಂಆರ್‌ಪಿಎಲ್ ತೈಲ ಸ್ಥಾವರದಿಂದ ಜೋಕಟ್ಟೆ, ಕಳವಾರು, ಕೆಂಜಾರು ಜನವಸತಿ ಪ್ರದೇಶಗಳಲ್ಲಿ ಕೋಕ್, ಸಲ್ಫರ್ ಮಾಲಿನ್ಯ ಉಂಟಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಂಆರ್‌ಪಿಎಲ್ ಸಂಸ್ಥೆಯು ಸರಕಾರೀ ಆದೇಶದಂತೆ ಹಸಿರುವಲಯವನ್ನು ನಿರ್ಮಿಸಲು ಹಿಂದೇಟು ಹಾಕುತ್ತಿರುವುದನ್ನು ಖಂಡಿಸಿ ಜೋಕಟ್ಟೆ ನಾಗರಿಕ ಹೋರಾಟ ಸಮಿತಿ ನೇತೃತ್ವದಲ್ಲಿ ಮಾರ್ಚ್ 15 ರಂದು ಎಂಆರ್‌ಪಿಎಲ್ ಪ್ರಧಾನ ದ್ವಾರದ ಬಳಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನು ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಉದ್ಘಾಟಿಸಿ ಮಾತನಾಡಿದರು. ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಶ್ರೀನಾಥ್ ಕಾಟಿಪಳ್ಳ, ಹೋರಾಟ ಸಮಿತಿಯ ಮುಖಂಡರು ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಬಜೆಟ್ ನಲ್ಲಿ ನಿರ್ಲಕ್ಷ್ಯ: ರಾಜ್ಯವ್ಯಾಪಿ ಅಂಗನವಾಡಿ ನೌಕರರಿಂದ ಉಪವಾಸ ಸತ್ಯಾಗ್ರಹ

ಈ ಸಾಲಿನ ರಾಜ್ಯ ಬಜೆಟ್‌ನಲ್ಲಿ ಅಂಗನವಾಡಿ ನೌಕರರನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿ ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯವ್ಯಾಪಿ ತಾಲ್ಲೂಕು ಕೇಂದ್ರಗಳಲ್ಲಿ 15 ಮಾರ್ಚ್ 2021 ರಂದು ಉಪವಾಸ ಸತ್ಯಾಗ್ರಹ ನಡೆಸಿದರು.

'ಸೇವಾ ಜೇಷ್ಠತೆಯ ಆಧಾರದಲ್ಲಿ ಗೌರವಧನ ಹೆಚ್ಚಳಕ್ಕಾಗಿ ರೂ. 153.25 ಕೋಟಿ, ಮಿನಿ ಅಂಗನವಾಡಿ ಕೇಂದ್ರಗಳ ಸಹಾಯಕಿಯರ ನೇಮಕಾತಿಗಾಗಿ ರೂ. 6.99 ಕೋಟಿ, ಅಂಗನವಾಡಿ ಸಹಾಯಕಿಯರಿಗೆ ಸಂಬಳದ ವ್ಯತ್ಯಾಸ ಮೊತ್ತ ರೂ. 131.42 ಕೋಟಿ ಹಾಗೂ ನಿವೃತ್ತಿ ಸೌಲಭ್ಯಕ್ಕಾಗಿ ರೂ. 47.82 ಕೋಟಿ ಸೇರಿದಂತೆ ಒಟ್ಟು ರೂ. 339.38 ಕೋಟಿ ಹಣವನ್ನು ಬಜೆಟ್‌ನಲ್ಲಿ ಮೀಸಲಿಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಮನವಿ ಮಾಡಲಾಗಿತ್ತು. ಆದರೆ, ಸರ್ಕಾರ ಇದನ್ನು ಪರಿಗಣಿಸಿಲ್ಲ. ಈ ಹಣ ಬಿಡುಗಡೆ ಮಾಡಿದ್ದರೆ, 1.30 ಲಕ್ಷ ಕುಟುಂಬಗಳಿಗೆ ಅನುಕೂಲವಾಗುತ್ತಿತ್ತು' ಎಂದು ನಿರಶನ ನಿರತರು ಹೇಳಿದರು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರ ಸಂಘಟನೆಯ ರಾಜ್ಯಾಧ್ಯಕ್ಷರಾದ ಎಸ್. ವರಲಕ್ಷ್ಮಿ ಮಾತನಾಡಿ, ಅಂಗನವಾಡಿ ನೌಕರರು ಕಡಿಮೆ ಸವಲತ್ತುಗಳಿಗೆ ದುಡಿಯುತ್ತಿದ್ದರೂ ಕೂಡಾ ಕೊರೋನಾ ಸಂದರ್ಭದಲ್ಲಿ ಸರ್ಕಾರ ಸೂಚನೆ ಕೊಟ್ಟ ಕೂಡಲೇ ಯಾವುದೇ ಷರತ್ತುಗಳಿಲ್ಲದೇ ಕೆಲಸವನ್ನು ನಿರ್ವಹಿಸಿದ್ದಾರೆ. ಈ ಕೆಲಸ ಮಾಡುವಾಗ ಕೆಲಸ ಒತ್ತಡದಿಂದ 35 ಜನ, ಕೊರೋನಾ ಕೆಲಸ ಮಾಡುವ 28 ಜನರು ತಮ್ಮ ಜೀವನಗಳನ್ನೇ ಮುಡುಪಾಗಿಟ್ಟು ಬಲಿಯಾಗಿದ್ದಾರೆ. 173 ಜನರಿಗೆ ಕೊರೋನಾ ಬಂದು ಆ ದಿನಗಳಲ್ಲಿ ತಮ್ಮ ಕುಟುಂಬದ ಆದಾಯವನ್ನು ಕಳೆದುಕೊಂಡಿದ್ದಾರೆ. ರಾಜ್ಯದ ಹೈಕೋರ್ಟ್ ಕೊರೋನಾ ಸಂದರ್ಭದಲ್ಲಿ ಮಕ್ಕಳಿಗೆ, ಮಹಿಳೆಯರ ಅಪೌಷ್ಟಿಕೆಯನ್ನು ತಡೆಯಲು ಎಚ್ಚರಿಕೆಯನ್ನು ಕೊಟ್ಟಿತ್ತು. ಅಂತಹ ಎಲ್ಲಾ ದೂರುಗಳಿಂದ ಎಚ್ಚರಿಕೆಗಳಿಂದ ಸರ್ಕಾರದ ಘನತೆಯನ್ನು ಕಾಪಾಡಿದ್ದು ಇದೇ ಅಂಗನವಾಡಿ ನೌಕರರು. 2016 ರಿಂದ 7304 ಜನ ನಿವೃತ್ತಿಯಾಗಿದ್ದಾರೆ. ಅವರಿಗೆ ಇಡಗಂಟನ್ನು ಕೂಡಾ ಸರ್ಕಾರ ಪರಿಗಣನೆ ಮಾಡಿಲ್ಲ. ಮಾರ್ಚ್ 4 ರಂದು ಅಂಗನವಾಡಿ ನೌಕರರು ಬಜೆಟ್ ಅಧಿವೇಶನ ಚಲೋ ನಡೆಸಿದಾಗ ಸಚಿವೆ ಶಶಿಕಲಾ ಜೊಲ್ಲೆಯವರು ಸ್ಥಳಕ್ಕೆ ಆಗಮಿಸಿ ಈ ಬಜೆಟ್‌ನಲ್ಲಿ ಬೇಡಿಕೆಗಳನ್ನು ಪರಿಗಣಿಸುವುದಾಗಿ ಭರವಸೆ ನೀಡಿದ್ದರು. ಆದರೆ ಇದೀಗ ಆ ಭರವಸೆಯನ್ನು ಹುಸಿ ಮಾಡಲಾಗಿದೆ ಎಂದು ಆರೋಪಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್. ಎಸ್. ಸುನಂದಾ ಮಾತನಾಡಿ, 'ಕೋವಿಡ್ ಸಂದರ್ಭದಲ್ಲಿ ಮಕ್ಕಳಿಗೆ, ಮಹಿಳೆಯರಿಗೆ ಪೌಷ್ಟಿಕ ಆಹಾರ ತಲುಪಿಸುವುದನ್ನು ಖಾತ್ರಿ ಪಡಿಸಬೇಕೆಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಎಚ್ಚರಿಕೆ ಕೊಟ್ಟಿತ್ತು. ಈ ಸಂದರ್ಭದಲ್ಲಿ ಸರ್ಕಾರದ ಘನತೆ ಕಾಪಾಡಿದ್ದು ಅಂಗನವಾಡಿ ನೌಕರರು. ಕೋವಿಡ್ ಸಂದರ್ಭದಲ್ಲೂ ಮಲೆನಾಡು, ಗುಡ್ಡಗಾಡು, ಕೊಳಚೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಕುಟುಂಬದ ವಾಹನಗಳನ್ನು ಬಳಸಿ ಆಹಾರ ಸಾಮಗ್ರಿಗಳುನ್ನು ಮನೆ ಮನೆಗೆ ಹಂಚಿದ್ದು, ಕ್ವಾರಂಟೈನ್ ಆದವರಿಗೆ ಮಾಸ್ಕ್, ಸ್ಯಾನಿಟೈಸರ್, ಮಾತ್ರೆಗಳನ್ನು ತಮ್ಮ ಸ್ವಂತ ಖರ್ಚಿನಿಂದ ಪೂರೈಸಿದ್ದಾರೆ. ಸಾರ್ವಜನಿಕರಿಂದ ಹಲ್ಲೆಗಳೊಗಾದರೂ ಎದೆಗುಂದದೆ ಕೆಲಸ ಮಾಡಿದ್ದಾರೆ. ಇಷ್ಟೆಲ್ಲ ಮಾಡಿದರೂ ಸರ್ಕಾರ ಅಂಗನವಾಡಿ ನೌಕರರಿಗೆ ಬಜೆಟ್‌ನಲ್ಲಿ ಅನುಕೂಲ ಕಲ್ಪಿಸಿಲ್ಲ' ಎಂದು ಆರೋಪಿಸಿದರು.



ವಿವಿಧ ಕೆಲಸಗಳ ಬಹಿಷ್ಕಾರ:

'ಸೇವಾ ಜ್ಯೇಷ್ಠತೆ ಆಧಾರದಲ್ಲಿ ಗೌರವ ಧನ ಹೆಚ್ಚಳ, ಮಿನಿ ಅಂಗನವಾಡಿ ಕೇಂದ್ರಗಳಿಗೆ ಸಹಾಯಕಿಯರ ನೇಮಕ, ಸಹಾಯಕಿಯರಿಗೆ ಸಂಬಳದ ವ್ಯತ್ಯಾಸ ಮೊತ್ತ ಹಾಗೂ ನಿವೃತ್ತಿ ಸೌಲಭ್ಯ ನೀಡುವವರೆಗೆ ಹೆಚ್ಚುವರಿ ಕೆಲಸಗಳಾದ ಇ-ಸರ್ವೆ, ಆರ್‌ಡಿಪಿಆರ್ ನಿಂದ ಕೊಟ್ಟಿರುವ ಸರ್ವೆ, ಬಿಪಿಎಲ್ ಕಾರ್ಡ್ ಆರ್‌ಸಿಎಚ್ ಸರ್ವೆ, ಭಾಗ್ಯಲಕ್ಷ್ಮಿ, ಮಾತೃವಂದನಾ, ಮಾತೃಶ್ರೀ, ಸ್ತ್ರೀ ಶಕ್ತಿ, ಚುನಾವಣಾ ಕೆಲಸಗಳನ್ನು ಬಹಿಷ್ಕರಿಸಲು ನಾವು ನಿರ್ಧರಿಸಿದ್ದೇವೆ ಎಂದು ಕೊಪ್ಪದ ಶಿಕ್ಷಕಿ ಆಶಾ ಸಾಲಿಯಾನ್ ತಿಳಿಸಿದ್ದಾರೆ.

ಮಿನಿ ಅಂಗನವಾಡಿ ಕೇಂದ್ರಗಳಿಗೆ ಸಹಾಯಕಿಯನರನ್ನು ನೀಡುವವರೆಗೆ ಅಡುಗೆ ಮಾಡುವುದಿಲ್ಲ' ಎಂದು ಗಂಗಾತಿಯ ಅಂಗನವಾಡಿ ಶಿಕ್ಷಕಿ ದುರ್ಗಾ ರವರು ತಿಳಿಸಿದ್ದಾರೆ.

100 ಕ್ಕೂ ಹೆಚ್ಚು ತಾಲ್ಲೂಕ ಕೇಂದ್ರಗಳಲ್ಲಿ 20 ಸಾವಿರಕ್ಕೂ ಹೆಚ್ಚು ಅಂಗನವಾಡಿ ಶಿಕ್ಷಕರು ಮತ್ತು ಕಾರ್ಯಕರ್ತೆಯವರು ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದಾರೆ ಎಂದು ರಾಜ್ಯ ಮುಖಂಡರಾದ ಟಿ. ಲೀಲಾವತಿ ತಿಳಿಸಿದ್ದಾರೆ.

ಬೈಂದೂರು: ಸಿಪಿಐ(ಎಂ) ಕಚೇರಿ ಉದ್ಘಾಟನೆ



ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೈಂದೂರು ವಲಯ ಸಮಿತಿ ಕಚೇರಿಯನ್ನು ಬೈಂದೂರು ರಾಷ್ಟ್ರೀಯ ಹೆದ್ದಾರಿಯ ಸಿಐಟಿಯು ಕಚೇರಿಯ ಬಳಿ ಆರಂಭಿಸಲಾಗಿದೆ. ಸಿಪಿಐ(ಎಂ) ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ್‌ರವರು ಕಚೇರಿ ಉದ್ಘಾಟನೆಯನ್ನು ನೆರವೇರಿಸಿ ಸಭೆಯನ್ನುದ್ದೆಶಿಸಿ ಮಾತನಾಡುತ್ತಾ, ರಾಜಕೀಯ, ಪ್ರಜಾಪ್ರಭುತ್ವ ನಮ್ಮ ಉಸಿರು ಕಾರ್ಮಿಕ ವರ್ಗಕ್ಕೆ ತನ್ನದೇ ಆದ ರಾಜಕೀಯ ಪಕ್ಷ ಅಗತ್ಯವಾಗಿ ಬೇಕು ಎಂದು ಹೇಳಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವೆಂಕಟೇಶ ಕೋಣಿ ಪ್ರಾಸ್ತಾವಿಕ ಭಾಷಣ ಮಾತನಾಡಿ, ಬೈಂದೂರು ತಾಲೂಕಿನಲ್ಲಿ ದುಡಿಯುವ ವರ್ಗವಾದ ರೈತ, ಕೃಷಿ ಕೂಲಿ, ಕಾರ್ಮಿಕರ ವರ್ಗ ರಾಜಕೀಯ ಹೋರಾಟ ಚಟುವಟಿಕೆಯ ಕೇಂದ್ರವಾಗಿ ಈ ಕಚೇರಿ ಬೆಳೆದು ಬರಲಿ ಎಂದು ಶುಭ ಹಾರೈಸಿದರು. ಸಿಐಟಿಯು ತಾಲೂಕು ಸಂಚಾಲಕ ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಡಿವೈಎಫ್ಐ ಮಾಜಿ ಮುಖಂಡ ಬಿ. ಶ್ರೀನಿವಾಸ ಹಳವಳ್ಳಿ, ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಮಂಜುನಾಥ ಹೆಬ್ಬಾರ್ ಕಾಲ್ತೋಡು, ಸಿಪಿಐ(ಎಂ) ಪಕ್ಷದ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದು ಶುಭ ಕೋರಿ ಮಾತನಾಡಿದರು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ರಾಜೀವ ಪಡುಕೋಣೆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂ)ಮುಖಂಡ ಕಂಭದಕೋಣೆ ರಾಮ ಧನ್ಯವಾದ ಮುಂತಾದವರಿದ್ದರು.



ಎಲ್‌ಐಸಿ ಖಾಸಗೀಕರಣ ವಿರೋಧಿಸಿ ವಿಮಾ ನೌಕರರ ದೇಶವ್ಯಾಪಿ ಮುಷ್ಕರ

ಜನರಿಗೆ ಉತ್ತಮ ಸೇವೆ ನೀಡುತ್ತಿರುವ ಎಲ್‌ಐಸಿ ಯನ್ನು ಖಾಸಗೀಕರಣ ಮಾಡಲು ಹೊರಟಿರುವ ಭಾರತ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಇಂದು ನಗರದ ಎಲ್‌ಐಸಿ ಆಫೀಸ್ ಮುಂಭಾಗ ಭಾರತೀಯ ಜೀವ ವಿಮಾ ನಿಗಮದ ಉದ್ಯೋಗಿಗಳು, ಅಧಿಕಾರಿಗಳು ಮತ್ತು ಅಭಿವೃದ್ಧಿ ಅಧಿಕಾರಿಗಳು ಮುಷ್ಕರ ನಡೆಸಿದರು.

ಮುಷ್ಕರವನ್ನು ಉದ್ದೇಶಿಸಿ ಎಐಐಇಎ ಸಂಘಟನೆಯ ಬೆಂಗಳೂರು ವಿಭಾಗ-1 ರ ಪ್ರಧಾನ ಕಾರ್ಯದರ್ಶಿ ಎಸ್.ಕೆ. ಗೀತಾ ಮಾತನಾಡುತ್ತಾ ಲಾಭದಾಯಕವಾಗಿರುವ ಎಲ್.ಐ.ಸಿ ಯನ್ನು ಖಾಸಗೀಕರಣ ಮಾಡುವ ಉದ್ದೇಶವನ್ನು ನಾವು ವಿರೋಧಿಸುತ್ತೇವೆ, ದೇಶದ ಜನತೆಯ ಉಳಿತಾಯಕ್ಕೆ ಭದ್ರತೆ ನೀಡುವುದು ಮತ್ತು ದೇಶ ನಿರ್ಮಾಣಕ್ಕೆ ಅಗತ್ಯ ಬಂಡವಾಳ ಕ್ರೋಢಿಕರಿಸುವ ಅವಳಿ ಉದ್ದೇಶವನ್ನು ಎಲ್‌ಐಸಿ ಸಂಪೂರ್ಣವಾಗಿ ನೇರವೇರಿಸಿದೆ. ವಿಮಾ ಕ್ಷೇತ್ರದಲ್ಲಿ ವಿದೇಶೀ ನೇರ ಬಂಡವಾಳವನ್ನು ಶೇ. 19 ರಿಂದ ಶೇ. 74 ಕ್ಕೇರಿಸುವುದನ್ನು ಮತ್ತು ಸಾರ್ವಜನಿಕ ವಲಯದ ಒಂದು ಸಾಮಾನ್ಯ ವಿಮಾ ಸಂಸ್ಥೆಯ ಖಾಸಗೀಕರಣದಂತಹ ಕ್ರಮಕ್ಕೆ ಮುಂದಾಗಿದೆ. ಇದು ಸರಿಯಾದ ಕ್ರಮವಲ್ಲ ಈ ಆದೇಶವನ್ನು ಈ ಕೂಡಲೇ ಹಿಂಪಡೆಯಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

ಎಐಐಇಎ ಸಂಘಟನೆಯ ಬೆಂಗಳೂರು ವಿಭಾಗ -2 ರ ಪ್ರಧಾನ ಕಾರ್ಯದರ್ಶಿ ಕೆ. ಗೋಪಾಲ್ ಮಾತನಾಡುತ್ತಾ ಎಲ್‌ಐಸಿ ಯಲ್ಲಿ ಒಟ್ಟು 42 ಕೋಟಿ ಪಾಲಿಸಿದಾರರಿದ್ದು, ಅದರಲ್ಲಿ 3.68 ಕೋಟಿ ಬಡ ಮತ್ತು ದುರ್ಬಲ ವರ್ಗದವರಿಗೆ ಸಾಮಾಜಿಕ ಸುರಕ್ಷತೆ ನೀಡಲಾಗುತ್ತಿದೆ. 2019 ರಲ್ಲಿ ಅದು 2.16 ಕೋಟಿ ದಾವೆಗಳನ್ನು ಇತ್ಯರ್ಥ ಮಾಡಿದ್ದು ಪಾವತಿ ಮಾಡಿರುವ ಮೊತ್ತ 1,59,769 ಕೋಟಿ ರೂ. ಸರ್ಕಾರ ಆರಂಭದಲ್ಲಿ ತೊಡಗಿಸಿದ 5 ಕೋಟಿ ರೂ ಪ್ರತಿಯಾಗಿ ಅದು ಒಟ್ಟು ರೂ 32 ಲಕ್ಷ ಕೋಟಿ ಮೌಲ್ಯದ ಆಸ್ತಿ ನಿರ್ಮಾಣಮಾಡಿದೆ. ದೇಶದ ಆರ್ಥಿಕತೆಯಲ್ಲಿ ಅದು ಹೂಡಿರುವ ಮೊತ್ತ 30.70 ಲಕ್ಷ ಕೋಟಿ ರೂ. ವಿವಿಧ ದೇಶ ನಿರ್ಮಾಣ ಯೋಜನೆಗಳಲ್ಲಿ ಅದು ತೊಡಗಿಸಿರುವ ಮೊತ್ತ 24 ಲಕ್ಷ ಕೋಟಿ ರೂ. ಇಲ್ಲಿಯವರೆಗು ಸರ್ಕಾರಕ್ಕೆ ನೀಡಿರುವ ಒಟ್ಟು ಲಾಭಾಂಶ 28000 ಕೋಟಿ ರೂ. 2019-20 ಒಂದು ವರ್ಷದಲ್ಲಿ ರೂ 2698 ಕೋಟಿ ರೂ ನೀಡಿದೆ. ಇಂತಹ ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಸಂಸ್ಥೆಯನ್ನು ಕಾಸಗೀಕರಣ ಮಾಡುವುದೂ ಒಂದು ದೇಶದ ಹಿತಾಶಕ್ತಿ ವಿರೋಧಿ ಕ್ರಮವಾಗಿದೆ. ಈ ಸಂಸ್ಥೆಗಳನ್ನು ಖಾಸಗೀಕರಗೊಳಿಸುವ ಬದಲಿಗೆ ಅವುಗಳನ್ನು ಕ್ರೋಢಿಕರಿಸಿ ಇನ್ನಷ್ಟು ಸ್ಪರ್ಧಾತ್ಮಕಗೊಳಿಸಬೇಕು ಎಂದರು.

ಈ ಪ್ರತಿಭಟನೆಯಲ್ಲಿ ಎಐಐಇಎ ಸಂಘಟನೆಯ ಅಖಿಲ ಭಾರತ ಮಾಜಿ ಅಧ್ಯಕ್ಷರಾದ ಅಮಾನುಲ್ಲಾ ಖಾನ್, ಎಎಲ್‌ಐಸಿಐಇಎಫ್ ಸಂಘಟನೆಯ ಮುಖಂಡರಾದ ಬಿ.ಎಸ್ ಸಾಧನ, ಎಲ್‌ಐಸಿ ಸಿಎಲ್ 1 ಆಫೀಸರ್ಸ್ ಅಸೋಶಿಯಷೇನ್ ಸಂಘಟನೆಯ ಮುಖಂಡರಾದ ಪ್ರಸಾದ್, ಎನ್‌ಎಫ್‌ಐಎಫ್‌ಡಬ್ಲ್ಯೂಐ ಸಂಘಟನೆಯ ಮುಖಂಡರಾದ ಗಿರೀಶ್ ಮೂರ್ತಿ ಮಾತನಾಡಿದರು. ■

ಸಾರ್ವಜನಿಕ ರಂಗ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

ಯಾವುದೇ ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಣ ಮಾಡಬಾರದು ಎಂದು ಒತ್ತಾಯಿಸಿ ಸಾರ್ವಜನಿಕ ಸಂಸ್ಥೆಗಳ ಕಾರ್ಮಿಕರು ನೌಕರರು ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್ ತನಕ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಕೇಂದ್ರ ಸರ್ಕಾರವು ಅತ್ಯಂತ ಲಾಭದಾಯಕ ಸಾರ್ವಜನಿಕ ಸಂಸ್ಥೆಗಳಾದ ಬ್ಯಾಂಕ್, ವಿಮೆ, ರಕ್ಷಣೆ, ರೈಲ್ವೆ, ನವರತ್ನ, ಮಿನಿರತ್ನಗಳಾದ ಬಿಇಎಂಎಲ್, ಹೆಚ್‌ಎಎಲ್, ಬಿಇಎಲ್, ಬಿಹೆಚ್‌ಇಎಲ್, ವಿದ್ಯುತ್‌ಚ್ಛಕ್ತಿ, ಅನಿಲ, ಗ್ಯಾಸ್, ಬಂದರು, ವಿಮಾನ, ದೂರ ಸಂಪರ್ಕ, ಬಿಎಸ್‌ಎನ್‌ಎಲ್ ರಾಜ್ಯದಲ್ಲಿರುವ ಮೈಶುಗರ್, ಜಲಮಂಡಲಿಗಳನ್ನು ಮತ್ತು ಇತರ ಲಾಭದಾಯಕವಾಗಿ ನೂರಾರು ಸಂಸ್ಥೆಗಳನ್ನು ಖಾಸಗೀಕರೀಸಲು ಮುಂದಾಗಿದೆ ಎಂದು ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯಕಾರ್ಯದರ್ಶಿ ಮೀನಾಕ್ಷಿಸುದಂರಂ ಸಾರ್ವಜನಿಕ ಆಸ್ತಿಗಳನ್ನು ಖಾಸಗೀಕರಣಗೊಳಿಸುವುದರಿಂದ ಖಾಸಗೀಯವರ ಕೈಯಲ್ಲಿ ಆರ್ಥಿಕ ಅಧಿಕಾರದ ಕೇಂದ್ರೀಕರಣವಾಗುತ್ತದೆ. ಇದರಿಂದ ಶ್ರೀಮಂತರ ಆಸ್ತಿ ಮತ್ತಷ್ಟು ಹೆಚ್ಚಾಗುತ್ತಿದೆ ಮತ್ತು ಆರ್ಥಿಕ ಶಕ್ತಿಗಳನ್ನು ಬಳಸಿ ಗ್ರಾಹಕರನ್ನು, ಕಾರ್ಮಿಕರನ್ನು ಶೋಷಿಸಲು ಇದು ಕಾರಣವಾಗುತ್ತದೆ. ಅಲ್ಲದೆ ಸಾರ್ವಜನಿಕ ಭೂಮಿಯ ಮಾರಾಟದ ಮೂಲಕ ಆರ್ಥಿಕತೆಯನ್ನು ಕಟ್ಟಲು ಸಾಧ್ಯವಿಲ್ಲ, ಆದಾಯ ಮತ್ತು ಸಂಪತ್ತಿನಲ್ಲಿ ಅಸಮಾನತೆಗಳು ಹೆಚ್ಚುತ್ತದೆ ಆದ್ದರಿಂದ ಅನೇಕ ರೀತಿಯ ತೊಂದರೆಗಳಿಗೆ ಈ ಖಾಸಗೀಕರಣ ಕಾರಣವಾಗುತ್ತದೆ ಎಂದು ತಿಳಿಸಿದರು.

ರಾಜ್ಯ ಬಜೆಟ್ ಅಧಿವೇಶನದಲ್ಲಿ ರಾಜ್ಯ ಸರಕಾರವು ಖಾಸಗೀಕರಣದ ವಿರುದ್ಧ ನಿರ್ಣಯ ತೆಗೆದುಕೊಳ್ಳುವ ತನಕ ನಿರಂತರವಾಗಿ ಹೋರಾಟವನ್ನು ಹಮ್ಮಿಕೊಳ್ಳಲಾಗುವುದೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ, ಬಿ.ಎಸ್.ಎನ್.ಎಲ್, ಬೆಮೆಲ್, ಹೆಚ್‌ಎಎಲ್, ಬ್ಯಾಂಕ್ ಸೇರಿದಂತೆ ಅನೇಕ ಸಂಘಟನೆಗಳ ಮುಖಂಡರಿದ್ದರು. ■

ದೆಹಲಿ ರೈತ ಬಂಡಾಯ ಕಣದಲ್ಲಿ ಎರಡು ದಿನಗಳ ಒಕ್ಕಲು...

(ಸಿಂಗು ಮತ್ತು ಗಾಜೀಪುರ್ ಗಡಿಯಿಂದ)

ಕೆ.ಮಹಾಂತೇಶ, ಸೈಯದ್ ಮುಜೀಬ್



ಸಂಗೊಳ್ಳಿ ರಾಯಣ್ಣ ಸಿಂಧೂರ ಲಕ್ಷ್ಮಣ್ಣ
ಬಂಡು ಹೂಡ್ಯಾರೋ ನಾಡಗ
ಬಂಡು ಹೂಡ್ಯಾರೋ ನಾಡಗ ಅಣ್ಣ
ಕೆಂಪು ದೀವಟಿಗೆ ಉರಿದಾವೋ
ಕೆಂಪು ದೀವಟಿಗೆ ಉರಿದಾವೋ..

ಸ್ವಾತಂತ್ರ ಚಳವಳಿಯ ದಿನಮಾನಗಳಲ್ಲಿ ಬ್ರಿಟಿಷರ ಕಣ್ಣು ಕೆಂಪಾಗಿಸಿ ಅವರ ನರನಾಡಿಗಳಲ್ಲಿ ದುಸಪ್ನವಾಗಿ ಕಾಡಿದ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಲೇ ಬೆಳಗಾವಿಯ ನಂದಗಡದಲ್ಲಿ ಬ್ರಿಟಿಷರ ನೇಣುಗಂಭವೇರಿದ ಅಪ್ರತಿಮ ಬಂಡಾಯಗಾರರಾದ ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ್ಣ ಅವರ ಸಾಹಸ ಕುರಿತಾಗಿ ಹೆಣೆಯಲ್ಪಟ್ಟ ಕನ್ನಡ ಲ್ಯಾವಣಿ ಪದವಿದು.

ದೆಹಲಿಯ ಸುತ್ತಮುತ್ತಲಿನ ನಾಲ್ಕಾರು ಗಡಿಗಳಲ್ಲಿ ಕಳೆದ ನೂರಾ ಹದಿನೈದು ದಿನಗಳಿಂದ ಬೀಡುಬಿಟ್ಟಿರುವ 'ರೈತ ಬಂಡಾಯಗಾರರನ್ನು' ನೋಡಿದಾಗ ಕನ್ನಡ ನಾಡಿನ ಜನಪದರು ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷಣನ ಬಂಡಾಯದ ಕುರಿತಾಗಿ ಹೆಣೆದ ಹಾಡು ನಿಮಗೆ ಕಾಡದೇ ಇರದು.

ಮಾರ್ಚ 15 ರಂದು ನವದೆಹಲಿಯಲ್ಲಿ ನಿಗದಿಯಾಗಿದ್ದ ಒಂದು ರಾಷ್ಟ್ರಮಟ್ಟದ ಸಭೆಗೆ ಹೋಗಲು ತೀರ್ಮಾನವಾದಾಗಲೇ ಮಾರ್ಚ 13 ಮತ್ತು 14 ರಂದು ದೆಹಲಿಯಲ್ಲಿನ ರೈತ ಬಂಡಾಯದ ಕೆಲವು ಪ್ರದೇಶಗಳಿಗಾದರೂ ಪ್ರತ್ಯಕ್ಷವಾಗಿ ಭೇಟಿ ನೀಡಬೇಕೆಂದು ನಾವು ನಿರ್ಧರಿಸಿದ್ದೆವು. ಬಳಿಕ ನಮ್ಮ ಕಚೇರಿ ಸಿಬ್ಬಂದಿಯಿಂದ ರೈತರು ಬಿಡಾರ ಹುಡಿರುವ 'ಟಿಕ್ರಿ' ಬಾರ್ಡರ್ ಗೆ ತಲುಪಲು ಇರುವ ದಾರಿಗಳ ವಿವರ ಪಡೆದುಕೊಂಡು ಕಾಶ್ಮೀರಿ ಗೇಟ್ ನಿಂದ ಮೆಟ್ರೊ ಹತ್ತಲು ಅವಸರಲ್ಲಿ ಆಟೋ ಒಂದನ್ನು ಹತ್ತಿ ಕುಳಿತೆವು.

ನಾವು ಹತ್ತಿದ ಆಟೋ ಡ್ರೈವರ್ 70 ವರ್ಷದವ. ನಾವು ರೈತರ ಹೋರಾಟದ ಸ್ಥಳಕ್ಕೆ ಹೊರಟಿರುವ ಸಂಗತಿ ಅವನ ಕಿವಿಗೆ ಬೀಳುತ್ತಿದ್ದಂತೆ, 'ನೀವು ಮೇಟ್ರೋ, ಬಸ್ ಅಂತೆಲ್ಲಾ ಸುತ್ತಾಡಿ ಟೈಂ ಕಳೆದುಕೊಳ್ಳುತ್ತೀರಿ, ನಾನೂರು ರೂಪಾಯಿ ಕೊಟ್ರೇ ನಾನೇ ಅಲ್ಲಿಗೆ ನಿಮ್ಮನ್ನು ಬಿಡುತ್ತೇನೆ' ಎಂದು ಚೌಕಾಸಿ ಆರಂಭಿಸಿದ. ಕೊನೆಗೆ ಆಯ್ತು ಅಂತಾ ಒಪ್ಪಿದೆವು.

ಆದರೆ ಅವನ ಬಳಿ ನಾವು 'ಟಿಕ್ರೀ' ಟಿಕ್ರೀ ಗಡಿಗ್ಹೋಗಬೇಕು ಅಂತಿದ್ರೇ...ಅವ ಮಾತ್ರ 'ಸಿಂಗು.. ಸಿಂಗು...ಗಡಿ' ಅಂತಾನೇ ಅಂತಿಮವಾಗಿ ದೆಹಲಿಯಿಂದ ಸುಮಾರು ಮುವತ್ತು ಕಿ.ಮೀ ದೂರದ 'ಸಿಂಗು' ಗಡಿಗೆ ಸರಿಸುಮಾರು ಮಧ್ಯಾಹ್ನ 3 ಗಂಟೆ ಹೊತ್ತಿಗೆ ತಲುಪಿಸಿ ನಾನೂರು ರೂಪಾಯಿ ನಮ್ಮಿಂದ ಕಿತ್ತು ಮರೆಯಾದ..!

ಪೊಲೀಸರ ಸರ್ಪಗಾವಲು

ಅದು ಚಂಡೀಗಡ್ ರಾಷ್ಟ್ರೀಯ ಹೆದ್ದಾರಿ. ದೆಹಲಿಯಿಂದ ಚಂಡೀಗಡಕ್ಕೆ ಹೋಗುವ ಈ ರಾಷ್ಟ್ರೀಯ ಹೆದ್ದಾರಿಯನ್ನು ಹೋರಾಟ ನಿರತ ಪಂಜಾಬ್ ಮತ್ತು ಹರಿಯಾಣ ರೈತರು ಕಳೆದ ನೂರಾ ಹದಿನೈದು ದಿನಗಳಿಂದ ಬಂದ್ ಮಾಡಿದ್ದಾರೆ. ಅತ್ತ ದೆಹಲಿ ತಲುಪುವ ಮುವತ್ತು ಕಿ.ಮೀ ಮುಂಚೆಯೇ ಇಡೀ ನಾಲ್ಕು ಲೇನ್‌ಗಳನ್ನು ಪೊಲೀಸರು ಬ್ಯಾರೀಕೇಡ್‌ಗಳನ್ನು, ಮುಳ್ಳು ತಂತಿಗಳನ್ನು ಹಾಕಿ ರೈತರ ಹೋರಾಟದ ಒಂದು ಕಿ.ಮೀ ದೂರದಲ್ಲೇ ಪಹರೆ ನಡೆಸುತ್ತಾ ಬಂದ್ ಮಾಡಿದ್ದಾರೆ.

ನಮಗೇ ರೈತರ ಹೋರಾಟದ ಸ್ಥಳಕ್ಕೇ ಹೋಗುವುದ್ಹೇಗೆ ಅನ್ನೋ ಚಿಂತಿ ಶುರುವಾಗಿತ್ತು ಅದರ ಜೊತೆ ಹೊಟ್ಟೆ ಬೇರೆ ಚುರುಗುಟ್ತಾಯಿತ್ತು. ನಾವು ರೋಟಿ ತಿಂದ ಡಾಬಾ ಹಿಂದುಗಡೆ ಒಂದು ಕೈಗಾರಿಕೆಗಳಿಂದ ಹೊರ ಬರುವ ಕೊಳಚೆ ನೀರಿನ ಕಾಲುವೆ. ಆ ಕಡೆ ಜಮೀನುಗಳು ಮತ್ತು ಅದಕ್ಕೆ ಹೊಂದಿಕೊಂಡು ಕಸ ಆಯುವ ನೂರಾರು ಕುಟುಂಬಗಳು ಅದೇ ಕೊಳಚೆ ಪ್ರದೇಶದಲ್ಲಿ ರಾಶಿ ರಾಶಿಯಾಗಿ ಬಿದ್ದ ಕಸದ ಜೊತೆಗೆ ಕಟ್ಟಿಕೊಂಡಿರುವ ಅಮಾನವೀಯ ಬದುಕು. ಅದರ ಪಕ್ಕದಲ್ಲೇ ಒಂದು ಕಿ.ಮೀ ಮಣ್ಣು ಧೂಳು ರಸ್ತೆಯಲ್ಲಿ ಸಾಗಿದರೆ ರೈತರು ಬಂಡಾಯ ಹೂಡಿರುವ ಹೋರಾಟದ ಕಣ. ಅಂತಹ ದಾರಿಯಲ್ಲೇ ಸಾಗಿದ ನಾವು ಅಂತಿಮವಾಗಿ 'ಸಿಂಗು' ರೈತ ಬಂಡಾಯದ ಜಾಗ ತಲುಪಿದೆವು.

ಸಾಂಸ್ಥಿಕ ರೂಪ ಪಡೆದ ರೈತ ಚಳವಳಿ

ನಾವು ಅಲ್ಲಿಗೆ ಭೇಟಿ ನೀಡಿದಾಗ ರೈತ ಚಳವಳಿ ನೂರಾ ಒಂಬತ್ತು ದಿನಕ್ಕೆ ಕಾಲಿಟ್ಟಿತ್ತು. 2020 ನವೆಂಬರ್ 26 ರಂದು ಆರಂಭಗೊಂಡಿರುವ ರೈತ ಆಂದೋಲನ ಇದೀಗ ಬಹುತೇಕ ಒಂದು ಸಾಂಸ್ಥಿಕ ರೂಪ ಪಡೆದು ಮುನ್ನಡೆಯುತ್ತಿದೆ. ಸಿಂಗು ಗಡಿಯಲ್ಲಿ ನಾವು ಓಡಾಡಿದ ಐದಾರು ಕಿ.ಮೀ ಉದ್ದಕ್ಕೂ ಇದು ಸ್ಪಷ್ಟವಾಗಿ ಕಂಡು ಬಂತು. ಒಟ್ಟಾರೆ ಇಲ್ಲಿನ ಸುತ್ತ ಮುತ್ತಲಿನ ಸುಮಾರು ಐದಿನೈದು ಕಿ.ಮೀ ಉದ್ದಕ್ಕೂ ವಿಶೇಷವಾಗಿ ಪಂಜಾಬ್ ಹರಿಯಾಣ ರಾಜ್ಯದ ರೈತರು, ರೈತಮಹಿಳೆಯರು, ಅವರ ಮಕ್ಕಳು ಮೊಮ್ಮಕ್ಕಳಾದಿಯಾಗಿ ಈ ಪ್ರತಿಭಟನೆಯಲ್ಲಿ ಭಾಗವಹಿರುವುದು ಇದರ ವಿಶೇಷ.

ನಾವು ಅಲ್ಲಿ ಮಾತನಾಡಿಸಿದ ಪ್ರತಿಯೊಬ್ಬ ರೈತ ಹೋರಾಟಗಾರ ಹಾಗೂ ಅದಕ್ಕೆ ಬೆಂಬಲಿಸಿ ಬಂದಿರುವ ಮತ್ತು ಅದರ ಯಶಸ್ವಿಗಾಗಿ ಹಗಲು ರಾತ್ರಿಗಳನ್ನು ಒಂದಾಗಿಸಿ ದುಡಿಯುತ್ತಿರುವ ವಿದ್ಯಾರ್ಥಿಗಳು, ಮಹಿಳೆಯರು, ಔಷಧಿ ಪ್ರತಿನಿಧಿಗಳು, ವೈದ್ಯರು, ಸಾಮಾಜಿಕ ಕಾರ್ಯಕರ್ತರುಗಳು ಈ ಚಳವಳಿ ಭಾರತದ ಇತಿಹಾಸದಲ್ಲಿ ಬಹುಕಾಲ ಮುನ್ನಡೆಯುವ ಆಂದೋಲನವೆಂದು ಸ್ಪಷ್ಟವಾಗಿ ಹೇಳುತ್ತಾರೆ.

ಹಸಿವಾದರೆ ಊರೊಳಗೆ ಭಿಕ್ಷಾನ್ನಂಗಳುಂಟು
ತೃಷೆಯಾದರೆ ಕೆರೆ ಬಾವಿ ಹಳ್ಳಗಳುಂಟು
ಶಯನಕ್ಕೆ ಹಾಳು ದೇಗುಲವುಂಟು
ಚೆನ್ನ ಮಲ್ಲಿಕಾರ್ಜುನಯ್ಯ ಆತ್ಮ ಸಂಗಾತಕ್ಕೆ
ನೀನೆನಗುಂಟು

ಇದು 12 ನೆ ಶತಮಾನದ ಶರಣೆ ಹಾಗೂ ವಚನಗಾರ್ತಿ ಅಕ್ಕಮಹಾದೇವಿಯ ಪ್ರಸಿದ್ಧವಾದ ವಚನ. ಇದು ಅಕ್ಷರಶ: ಸಿಂಗು ರೈತ ಹೋರಾಟದಲ್ಲಿ ಸಾಕಾರಗೊಂಡಿದೆ ಎನ್ನುವುದನ್ನು ಯಾವ ಅನುಮಾನವಿಲ್ಲದೆ ಹೇಳಬಹುದು.

ಹಸಿವಾದಡೆ ದಾಸೋಹಗಳುಂಟು
ನಿರಡಿಕೆಯಾದರೆ ಮಜ್ಜಿಗೆ ಪಾನಕಗಳುಂಟು
ಅರಿವ ಹೆಚ್ಚಿಸಲು ಸಾಲುಸಾಲು
ಭಾಷಣಗಳುಂಟು
ಗ್ರಂಥ ಭಂಡಾರಗಳುಂಟು
ಮಕ್ಕಳ ಅಭ್ಯಾಸಕ್ಕೆ ಶಾಲೆಗಳ ಜೊತೆ
ಶಿಕ್ಷಕರುಂಟು
ಕಾಯಿಲೆಯಾದರೆ ಆಸ್ಪತ್ರೆ, ಔಷಧಿಗಳುಂಟು
ಶಯನಕ್ಕೆ ಲಂಗರುಗಳುಂಟು
ಮನರಂಜನೆಗೆ ಹಾಡು, ನಾಟಕಗಳುಂಟು
ಮೈ ದಣಿವಾದರೆ ಮಸಾಜ್
ಪಾರ್ಲರ್‌ಗಳುಂಟು
ಸ್ನಾನಕ್ಕೆ ನೀರುಂಟು, ಬಹಿರ್ದೆಶೆಗೆ
ಶೌಚಗಳುಂಟು
ಬಟ್ಟೆ ಕೊಳೆಯಾದರೆ ವಾಷಿಂಗ್
ಮಿಷನ್‌ಗಳುಂಟು.....

.... ಹೀಗೆ ಸಾಗುತ್ತಲೇ ಇವೆ ಇಲ್ಲಿ ಏನೇನುಂಟು ಎನ್ನುವ ಉಚಿತ ಸೌಲಭ್ಯಗಳ ಪಟ್ಟಿ!. ದೆಹಲಿ ರೈತ ಚಳವಳಿಯಲ್ಲಿ ಅಳವಡಿಸಲಾದ ಈ ವ್ಯವಸ್ಥೆಗಳನ್ನು ಕಂಡಾಗ ಇದೊಂದು ದೀರ್ಘಕಾಲಿಕವಾಗಿ ಇನ್ನೂ ಕನಿಷ್ಟ ಒಂದು ವರ್ಷವಾದರೂ ನಡೆಯುವ ಆಂದೋಲನವೆಂದು ಖಚಿತವಾಗಿ ಹೇಳಬಹುದು ಅದಕ್ಕೆ ಇಂಬು ಕೊಡುವಂತೆ ರಾಶಿರಾಶಿಯಾಗಿ ಪೇರಿಸಿರುವ ದವಸಧಾನ್ಯ ಆಹಾರ ಸಾಮಗ್ರಿಗಳು, ಕುಡಿಯುವ ನೀರು, ನಿರಂತರ ತರಕಾರಿ ಹಾಲು ಹಣ್ಣುಗಳ ಹರಿವು ಮತ್ತು ಅದಕ್ಕೆಲ್ಲ ಮೇಲುಗೈಯಾಗಿರುವುದು ಸಿಖ್ ಧರ್ಮದ ಗುರುನಾನಕ್‌ರಾದಿಯಾಗಿ ಅವರ ಉತ್ತರಾಧಿಕಾರಿಗಳು ಆರಂಭಿಸಿದ ಸೇವಾ ಪರಂಪರ. ಇವು ಈ ಚಳವಳಿಯನ್ನು ಮುನ್ನಡೆಸುವ ಸ್ಫೂರ್ತಿಗಳಾಗಿವೆ.

ಎರಡು ದಿನಗಳ ಹಿಂದಷ್ಟೇ ಅಖಿಲ ಭಾರತ ಕಿಸಾನ್ ಸಭಾದಿಂದ ಸಾಜಾನ್ಪುರ್ ಗಡಿಯಲ್ಲಿ ಹೋರಾಟನಿರತ ರೈತರಿಗೆ ಸುಮಾರು ಐದು ಲಕ್ಷ ರೂಪಾಯಿಗಳ ಆಹಾರ ಧಾನ್ಯ ತರಕಾರಿ ಇತ್ಯಾದಿ ಅಗತ್ಯ ವಸ್ತುಗಳನ್ನು ಹೋರಾಟದ ಕಣಕ್ಕೆ ಪೂರೈಸಿ ಈ ಹೋರಾಟದ ಮುನ್ನಡೆಗೆ ಸಹಕರಿಸಲಾಗಿದೆ ಎನ್ನುತ್ತಾರೆ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ಡಾ ವಿಜು ಕೃಷ್ಣನ್.

ಸ್ವಾತಂತ್ರ್ಯ ಚಳವಳಿಯ ಕೊಂಡಿ

1905–07 ಸುಮಾರಿನಲ್ಲಿ ಭಗತಸಿಂಗ್ ಅವರ ಚಿಕ್ಕಪ್ಪ ಅಜಿತ್‌ಸಿಂಗ್ ಪಂಜಾಬ್ ನಲ್ಲಿ ಬ್ರಿಟಿಷರ ಭೂಕಂದಾಯ ಮತ್ತು ರೈತ ವಿರೋಧಿ ನೀತಿಗಳ ವಿರುದ್ಧ ಕಟ್ಟಿದ ಆಂದೋಲನವು ಇಲ್ಲಿ ಭಾಗವಹಿಸಿದ್ದ ಬಹುತೇಕ ಪಂಜಾಬ್ ರೈತ ಕಾರ್ಯಕರ್ತರ ಮನದಲ್ಲಿ ಈಗಲೂ ರೋಮಾಂಚಕಾರಿಯಾಗಿ ನೆಲೆಗೊಂಡಿದೆ ಆ ಚಳವಳಿ ಬಳಿಕ ನಡೆಯುತ್ತಿರುವ ಬಹುದೊಡ್ಡ ಆಂದೋಲನವಿದು. ನಾವು ಪಂಜಾಬಿಗಳು ಈ ದೇಶಕ್ಕಾಗಿ ಸಾಕಷ್ಟು ಬಲಿದಾನ ಮಾಡಿದ್ದೇವೆ ನಮ್ಮ ತಾತ ಮುತ್ತಾತರು ನಮ್ಮ ತಂದೆ ತಾಯಿಗಳು ತೀರ ಕಷ್ಟಪಟ್ಟು ಬದುಕು ಕಟ್ಟಿಕೊಟ್ಟಿದ್ದಾರೆ. ಇಂತಹ ನಮ್ಮಯ ಬದುಕನ್ನು ನಾಶಪಡಿಸುವ ಈ ಕೃಷಿ ಕಾನೂನುಗಳನ್ನು ಜಾರಿ ಮಾಡಿದರೆ ಇಡೀ ದೇಶದ ರೈತಸಂಕುಲವೇ ಅಳಿಯಲಿದೆ.

ಆದ್ದರಿಂದ ಈಗ ಆರಂಭಿಸಿಲಾಗಿರುವ ಈ ಚಳವಳಿ ಗೆಲ್ಲುವವರೆಗೂ ಮುನ್ನಡೆಯಬೇಕು. ಇದು ಕೇವಲ ನಮ್ಮ ಹೋರಾಟವಲ್ಲ. ಇಡೀ ಭಾರತದ ಜನತೆಯು ಒಂದಾಗಿ ನಡೆಸುವ ಹೋರಾಟ. ಇದರ ಯಶಸ್ವಿಗೆ ನಾವು ಎಂತಹ ತ್ಯಾಗಕ್ಕಾದರೂ ಸಿದ್ಧವಿದ್ದೇವೆ. ನೀವು ದಕ್ಷಿಣ ಭಾರತದ ರೈತರು ನಾಗರೀಕರು ಈ ಹೋರಾಟ ಗೆಲ್ಲಲು ಸಹಾಯ ಮಾಡಬೇಕು. ನೀವು ಅಲ್ಲಿ ಇಂತಹುದೇ ಚಳವಳಿಯನ್ನು ಆರಂಭಿಸಿ ಎನ್ನುತ್ತಾರೆ ಸ್ವತಃ ಫಾರ್ಮಾಸಿಸ್ಟ್ ಆಗಿ ಕೆಲಸ ಮಾಡುತ್ತಿರುವ ಒಬ್ಬ ಮಧ್ಯಮ ವರ್ಗದ ಕಾರ್ಯಕರ್ತ. ಅವರು ಇಲ್ಲಿ ಆರಂಭಗೊಂಡಿರುವ ಲೈಫ್ ಕೇರ್ ನ ಹತ್ತು ಹಾಸಿಗೆಗಳ ಮತ್ತು ಒಂದು ಶಾಶ್ವತವಾದ ಆಸ್ಪತ್ರೆ ಮುನ್ನಡೆಸುತ್ತಿದ್ದಾರೆ. ಇಲ್ಲಿ ಓಪಿಡಿ ವ್ಯವಸ್ಥೆ ಇದೆ. ಐದಾರು ಜನ ವೈದ್ಯರು ಕೆಲಸ ಮಾಡುತ್ತಿದ್ದಾರೆ. ಇಲ್ಲಿಗೆ ಆಗಮಿಸುವ ಪ್ರತಿಯೊಬ್ಬರಿಗೂ ಉಚಿತವಾದ ವೈದ್ಯಕೀಯ ನೆರವು ಮತ್ತು ಔಷಧೋಪಚಾರ ಸಿಗುತ್ತದೆ. ಇಂತಹ ಕನಿಷ್ಟ ಐದು ಕೇಂದ್ರಗಳು ನಾವು ಓಡಾಡಿದ ಐದಾರು ಕಿ.ಮೀ ದೂರದಲ್ಲಿ ಕಾರ್ಯನಿರ್ವಹಿಸುತ್ತಿವೆ.

ನಮ್ಮ ಚಳವಳಿಗೆ ಸರ್ಕಾರ ಮಣಿಯದ ಹೊರತು ನಾವು ನಮ್ಮ ಚಳವಳಿಯನ್ನು ಹಿಂಪಡೆಯುವುದಿಲ್ಲ ಎನ್ನುವುದು ಇಲ್ಲಿ ನಮ್ಮೊಂದಿಗೆ ಮಾತನಾಡಿದ ಪ್ರತಿಯೊಬ್ಬರ ಅಚಲವಾದ ದೃಢವಾದ ತೀರ್ಮಾನ. ಅದಕ್ಕೆ ನಾವು ನಮನ ಸಲ್ಲಿಸಿ 'ಸಿಂಗು' ಗಡಿಯಿಂದ ದೆಹಲಿ ತಲುಪಿದೆವು.

ಗಾಜಿಪುರ್ : ಹೆದ್ದಾರಿ ತಡೆಗೋಡೆಗಳೇ ರೈತರ ಮೆಟ್ಟಿಲುಗಳು....

ಎರಡನೇ ದಿನ ನಮ್ಮ ಪಯಣ ಗಾಜಿಪುರ ರೈತರ ಹೋರಾಟದತ್ತ ಸಾಗಿತು. ಇದು ಉತ್ತರ ಪ್ರದೇಶದ ಮೀರತ್ ತಲುಪುವ ರಾಷ್ಟ್ರೀಯ ಹೆದ್ದಾರಿ. ಇಲ್ಲಿ ಎರಡು ಕಿ.ಮೀ ದೂರದವರೆಗೂ ರೈತ ಹೋರಾಟದ ಲಂಗರುಗಳು ವಿಸ್ತರಿಸಿಕೊಂಡಿವೆ. ಸಿಂಗು ಗಡಿಗೆ ಹೋಲಿಸಿದರೆ ಕಡಿಮೆ. ಇಲ್ಲಿ ಮುಖ್ಯವಾಗಿ ಉತ್ತರ ಪ್ರದೇಶದ ರೈತರದ್ದೇ ಪಾರುಪತ್ಯ. ಗಾಜಿಪುರ ರಾಷ್ಟೀಯ ಹೆದ್ದಾರಿ ರೈತ ಹೋರಾಟದ ತುಂಬೆಲ್ಲ ಭಗತಸಿಂಗ್, ರಾಜಗುರು ಸುಖದೇವ ಹಾಗೂ ಚಂದ್ರಶೇಖರ ಅಜಾದ್, ಸುಭಾಶ್ ಚಂದ್ರ ಭೋಸ್, ಮಹೇಂದ್ರಸಿಂಗ್ ಟಿಕಾಯತ್ ಭಾವಚಿತ್ರಗಳೇ. ಅವರೇ ಇಲ್ಲಿನ ಹೋರಾಟದ ಸ್ಫೂರ್ತಿಯ ಸಂಕೇತಗಳು. ದೆಹಲಿ–ಮೀರತ್ ರಾಷ್ಟೀಯ ಹೆದ್ದಾರಿಗಳನ್ನು ನೋಯ್ಡದ ಬಳಿ ತಡೆದು ತಮ್ಮ ಹೋರಾಟದ ಲಂಗರುಗಳನ್ನು ನಿರ್ಮಿಸಿರುವ ರೈತರು ಎಂಟು ಪಥಗಳ ಹೆದ್ದಾರಿಗಳ ಪೈಕಿ ನಾಲ್ಕು ಪಥಗಳನ್ನು ವಶಪಡಿಸಿಕೊಂಡು ಹೋರಾಟ ಮುಂದುವರೆಸಿದ್ದಾರೆ.

ಇಲ್ಲಿ ಹೋರಾಟನಿರತ ರೈತರು ಹೆದ್ದಾರಿ ತಡೆಗೋಡೆಗಳನ್ನೇ ತಮ್ಮ ಓಡಾಟಕ್ಕೆ ಮೆಟ್ಟಿಲುಗಳಾಗಿ ಪರಿರ್ತಿಸಿಕೊಂಡಿದ್ದಾರೆ. ಸಿಂಗು ಗಡಿಯಂತೆ ಇಲ್ಲೂ ಉಚಿತ ಔಷಧಿ ಕೇಂದ್ರಗಳು, ಮಲಗಲು ಲಂಗರುಗಳು, ಶೌಚಾಲಯಗಳು, ಓದಲು ಅಗತ್ಯವಿರುವ ಪುಸ್ತಕಗಳು, ಪತ್ರಿಕೆಗಳು ಜೊತೆಗೆ ನೂರಾರು ಸ್ವಯಂಸೇವಕರು, ಭೋಜನ ಕೇಂದ್ರಗಳು. ಇಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೂ ನಿರಂತರ ಭಾಷಣಗಳ ನಡುವೆ ಚಾ, ತಿಂಡಿ ಮಧ್ಯಾಹ್ನ ಊಟ ರಾತ್ರಿ ಊಟ. ಒಂದಷ್ಟು ಓದು, ಮನರಂಜನೆ, ಸ್ನಾನ, ಬಟ್ಟೆ ತೊಳೆಯುವುದು, ಅಡಿಗೆ ಮಾಡುವುದು ಬಂದವರಿಗೆ ಸಂತೋಷದಿಂದ ಬಡಿಸುವುದು, ಪರಿಸರ ಸ್ವಚ್ಚವಾಗಿಡುವುದು, ಹಾಡು, ಕುಣಿತ ಸಂಗೀತ ಹೀಗೆ ತರತರದ ಹವ್ಯಾಸಗಳು.

ಒಟ್ಟಿನಲ್ಲಿ ನೂರು ದಿನಗಳನ್ನು ಪೂರೈಸಿದ್ದರೂ ದಣಿವೆಂಬುದಿಲ್ಲ, ಬದಲಾಗಿ ಹೋರಾಟದ ಉತ್ಸಾಹ ಬದಲಾಗಿ ದಿನೇ ದಿನೇ ಹಿಮ್ಮಡಿಸುತ್ತಲೇ ಇದೆ ಎಂಬುದು ನಮಗೆ ಪ್ರತ್ಯಕ್ಷ ದರ್ಶನವಾಗಿತ್ತು.

ಅಕ್ಷರದವ್ವ ಸಾವಿತ್ರಿಭಾಯಿಪುಲೇ ಶಾಲೆ

ರೈತ ಹೋರಾಟದ ಅಂಗಳದಿ ಇದೊಂದು ವಿಶೇಷ ಶಾಲೆ ಮಕ್ಕಳಿಗಾಗಿ ಆರಂಭಗೊಂಡಿದೆ. ಅದು ಈ ದೇಶದ ಪ್ರಥಮ ಶಿಕ್ಷಕಿ ಅಕ್ಷರದವ್ವ ಸಾವಿತ್ರಿಭಾಯಿ ಪುಲೆ ಹೆಸರಿನದ್ದು. ರೈತರು ಹೋರಾಟ ಮಾತ್ರ ಮಾಡುತ್ತಿಲ್ಲ ಜೊತೆಗೆ ಶಿಕ್ಷಣವನ್ನು ಅರಿವನ್ನು ಹೆಚ್ಚಿಸುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂಬುದಕ್ಕೆ ಇದೊಂದು ಉತ್ತಮ ಮಾದರಿ.

ಇಲ್ಲಿ ನಿರ್ಮಿಸಿದ ಒಂದು ಹೋರಾಟದ ಟೆಂಟ್ ನಲ್ಲಿ ಸುಮಾರು ಮುವತ್ತರಿಂದ ನಲವತ್ತು ಮಕ್ಕಳಿಗೆ ಬೆಳಿಗ್ಗೆಯಿಂದ ಸಂಜೆವರೆಗೂ ಈ ಅನೌಪಚಾರಿಕ ಶಿಕ್ಷಣದ ಶಾಲೆಯನ್ನು ಸ್ವಯಂಸೇವಾ ಸಂಸ್ಥೆಯೊಂದು ಕಳೆದ ಜನವರಿಯಿಂದಲೇ ನಡೆಸುತ್ತಿದೆ ಎಂದು ಹೇಳುತ್ತಾರೆ. ಅದನ್ನು ನಡೆಸುತ್ತಿರುವ ಶಿಕ್ಷಕರು. ಗಾಜಿಪುರ ಹೋರಾಟದ ಸುತ್ತಮುತ್ತಲಿನ ಬಡ ಕೂಲಿಕಾರರು ಮತ್ತು ಕಾರ್ಮಿಕರ ಮಕ್ಕಳು ಇಲ್ಲಿಯ ಶಾಲೆಯ ವಿದ್ಯಾರ್ಥಿಗಳು. ಅವರಿಗೆ ಹೋರಾಟದ

ಪುಟ 14 ಕ್ಕೆ



ದೇಶ ಮಾರಾಟದ ಈ ಪರಿಯ ತಡೆಯೋಣ

ಮಾರ್ಚ್ 15–16 ರಂದು ಬ್ಯಾಂಕ್‌ಗಳ, 17 ರಂದು ಸಾಮಾನ್ಯ ವಿಮಾವಲಯದ ಮತ್ತು 18 ರಂದು ಎಲ್‌ಐಸಿ ನೌಕರರು ಮತ್ತು ಅಧಿಕಾರಿಗಳು ಖಾಸಗೀಕರಣದ ವಿರುದ್ಧ ಮುಷ್ಕರ ನಡೆಸಿದ್ದಾರೆ. ಇದುವರೆಗೆ ಸಮಾಜ ಮತ್ತು ಸರ್ಕಾರದ ನಿಯಂತ್ರಣದಲ್ಲಿದ್ದ ಜನರ ಉಳಿತಾಯ ಹಾಗೂ ಸಾರ್ವಜನಿಕ ಸಂಪನ್ಮೂಲಗಳನ್ನು ಹಿಡಿಯಷ್ಟು ಹಣಕಾಸು–ಕಾರ್ಪೊರೇಟ್‌ಗಳ ಕೂಟದ ಕೈಗೆ ಮೋದಿ ಸರಕಾರ ಒಪ್ಪಿಸಹೊರಟಿರುವುದನ್ನು ಪ್ರತಿಭಟಿಸಿ ಅವರು ಈ ಹೋರಾಟ ನಡೆಸುತ್ತಿದ್ದಾರೆ. ಮಾರ್ಚ್ 15ರಂದು ರೈತರು ಮತ್ತು ಇತರ ಕಾರ್ಮಿಕರೂ ಖಾಸಗೀಕರಣ–ವಿರೋಧಿ ದಿನಾಚರಣೆ ನಡೆಸಿದ್ದಾರೆ. ಖಾಸಗೀಕರಣದ ವಿರುದ್ಧದ ಈ ಸಂಘರ್ಷವು ಜನತೆಯ ಪ್ರಶ್ನೆಯಾಗಿ ಮೇಲೆದ್ದು ಬರಬೇಕು.



* ಪ್ರಕಾಶ್ ಕಾರಟ್

ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಖಾಸಗೀಕರಣ ವಿರೋಧಿಸಿ ಸುಮಾರು ಹತ್ತು ಲಕ್ಷ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ಮಾರ್ಚ್ 15 ಮತ್ತು 16 ರಂದು ದೇಶವ್ಯಾಪಿ ಮುಷ್ಕರ ನಡೆಸಿದರು. ಮಾರ್ಚ್ 17 ರಂದು ಸಾಮಾನ್ಯ ವಿಮಾ ನೌಕರರು, 18 ರಂದು ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ನೌಕರರು ರಾಷ್ಟ್ರವ್ಯಾಪಿ ಮುಷ್ಕರ ನಡೆಸಿದರು. ಹೀಗೆ ಸತತ ನಾಲ್ಕು ದಿನ ಹಣಕಾಸು ವಲಯದ ಉದ್ಯೋಗಿಗಳು ಮತ್ತು ಅಧಿಕಾರಿಗಳು ಹೋರಾಟದ ಕಣಕ್ಕೆ ಇಳಿದಿದ್ದಾರೆ.

ಫೆಬ್ರವರಿ 1 ರಂದು ಮಂಡಿಸಿದ ಕೇಂದ್ರ ಬಜೆಟ್‌ನಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣದ ಘೋಷಣೆ ಮಾಡಲಾಗಿದ್ದು ಅದಕ್ಕೆ ಪ್ರತಿಕ್ರಿಯೆಯಾಗಿ ಈ ಸಂಪುಗಳು ನಡೆದಿವೆ. ಈ ಹಣಕಾಸು ವರ್ಷದೊಳಗೆ ಸಾರ್ವಜನಿಕ ವಲಯದ ಎರಡು ಬ್ಯಾಂಕ್‌ಗಳನ್ನು ಖಾಸಗೀಕರಿಸಲಾಗುವುದೆಂದು ಹಣಕಾಸು ಸಚಿವೆ ಬಜೆಟ್ ಭಾಷಣದಲ್ಲಿ ಹೇಳಿದ್ದರು. ಇದೇ ಮೊದಲ ಬಾರಿಗೆ ಖಾಸಗೀಕರಣ ಪದವನ್ನು ಬಳಸಲಾಗಿದೆ. ನಾಲ್ಕು ಸಾಮಾನ್ಯ ವಿಮಾ ಕಂಪೆನನಿಗಳಲ್ಲಿ (ಜನರಲ್ ಇನ್ಸೂರೆನ್ಸ್) ಒಂದನ್ನು ಮಾರಲಾಗುತ್ತದೆಂದೂ ಅವರು ಹೇಳಿದ್ದರು. ಎಲ್‌ಐಸಿಯಲ್ಲಿ ಸರ್ಕಾರ ಹೊಂದಿರುವ ಷೇರುಗಳನ್ನು ಮಾರಲು ಷೇರುಗಳ ಐಪಿಒ ಉದ್ದೇಶವನ್ನೂ ಸಚಿವೆ ಹೊರಹಾಕಿದ್ದರು. ಇದರೊಂದಿಗೆ ವಿಮಾ ವಲಯದಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಪ್ರಮಾಣವನ್ನು ಶೇಕಡ 74ಕ್ಕೆ ಏರಿಸಲಾಗುತ್ತದೆ. ಈ ಸಂಬಂಧದ ಕಾನೂನನ್ನು ಕೇಂದ್ರ ಸಚಿವ ಸಂಪುಟ ಅನುಮೋದಿಸಿದ್ದು ಸಂಸತ್ತಿನಲ್ಲಿ ಮಂಡಿಸಲಾಗಿದೆ. ಈ ಎಲ್ಲ ಕ್ರಮಗಳೊಂದಿಗೆ, ಹಣಕಾಸು ಕ್ಷೇತ್ರದ ಉದಾರೀಕರಣ ಪ್ರಕ್ರಿಯೆ ಒಂದು ತಿರುವು ಬಿಂದನ್ನು ತಲುಪಿದೆ. 1991ರಲ್ಲಿ ಉದಾರೀಕರಣದ ಅಲೆ ಆರಂಭವಾದಾಗಿನಿಂದ ಹಣಕಾಸು ವಲಯವೇ ಅದರ ಒಂದು ದೊಡ್ಡ ಗುರಿಯಾಗಿತ್ತು. ನವ–ಉದಾರವಾದಿ ಆಡಳಿತಗಾರರಿಗಂತೂ ಬ್ಯಾಂಕ್‌ಗಳು ಸಾರ್ವಜನಕ ಒಡೆತನ ಹೊಂದಿರುವುದು ಬೇಕಾಗಿಯೇ ಇಲ್ಲ.

ಭಾರತದಲ್ಲಿ 1961ರಲ್ಲಿ 14 ಪ್ರಮುಖ ಖಾಸಗಿ ಬ್ಯಾಂಕ್‌ಗಳನ್ನು ರಾಷ್ಟ್ರೀಕರಿಸಲಾಗಿತ್ತು. ಇದು ಬ್ಯಾಂಕಿಂಗ್ ಜಾಲದ ವಿಸ್ತರಣೆಗೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹರಡಲು ಹಾದಿ ಮಾಡಿಕೊಟ್ಟಿತ್ತು.

ಅಭಿವೃದ್ಧಿ ಪಥದ ಒಟ್ಟಾರೆ ಬಂಡವಾಳಶಾಹಿ ಪ್ರವೃತ್ತಿಯನ್ನು ಪರಿಗಣಿಸಿದಾಗ ಬ್ಯಾಂಕ್ ರಾಷ್ಟ್ರೀಕರಣವು ನಿಜವಾಗಿಯೂ ಸಾಲ ಲಭ್ಯತೆಯ ಪ್ರಜಾಪ್ರಭುತ್ವೀಕರಣ ಎಂದೇನೂ ಆಗಿರಲಿಲ್ಲ. ಆದರೂ ಕೃಷಿ ಕ್ಷೇತ್ರ ಮತ್ತು ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ಯಮಗಳಿಗೆ ಸಾಲ ಲಭ್ಯವಾಗುವ ಮೂಲಕ ಅದು ಬಂಡವಾಳಶಾಹಿ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಿತು.

ಹಣಕಾಸು ವ್ಯವಸ್ಥೆಯನ್ನು ರಕ್ಷಿಸಿದ ಚಳವಳಿ

1991ರಿಂದಲೂ ಕೇಂದ್ರದಲ್ಲಿ ಅಧಿಕಾರಕ್ಕೆ ಬರುತ್ತಿರುವ ಸರ್ಕಾರಗಳು ಬ್ಯಾಂಕ್‌ಗಳನ್ನು ಖಾಸಗಿಗೆ ಮುಕ್ತಗೊಳಿಸಬೇಕೆಂಬ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡಕ್ಕೆ ಒಳಗಾಗುತ್ತಲೇ ಬಂದಿವೆ. ಸರ್ಕಾರಗಳು ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಷೇರುಗಳನ್ನು ಹಿಂಪಡೆಯಲು ಖಾಸಗಿ ಬ್ಯಾಂಕ್‌ಗಳ ಆರಂಭಕ್ಕೆ ಮತ್ತು ವಿದೇಶಿ ಬ್ಯಾಂಕ್‌ಗಳ ಕಾರ್ಯಾಚರಣೆಗೆ ಅವಕಾಶ ನೀಡಲು ಆರಂಭಿಸಿದ್ದವು. ಯುಪಿಎ–1 ಮತ್ತು ಯುಪಿಎ–2 ಅಧಿಕಾರಾವಧಿಯಲ್ಲಿ ಸರ್ಕಾರದ ಈ ನಿಟ್ಟಿನ ಪ್ರತಿಯೊಂದು ಕ್ರಮವನ್ನೂ ಬ್ಯಾಂಕಿಂಗ್ ಯೂನಿಯನ್‌ಗಳು, ದುಡಿಯುವ ವರ್ಗದ ಚಳವಳಿ ಮತ್ತು ಎಡ ಪಕ್ಷಗಳು ಪ್ರಬಲವಾಗಿ ಪ್ರತಿರೋಧಿಸಿದ್ದವು.

ಈ ಪ್ರತಿರೋಧ'ದಿಂದಾಗಿ ಹಣಕಾಸು ಕ್ಷೇತ್ರವನ್ನು ವಿದೇಶಿ ಬಂಡವಾಳಕ್ಕೆ ಮುಕ್ತಗೊಳಿಸಲು ಸಾಧ್ಯವಾಗಿರಲಿಲ್ಲ. ಇಂಥ ಪ್ರಬಲ ಪ್ರತಿರೋಧವು, 2008ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ವೇಳೆ ಭಾರತೀಯ ಹಣಕಾಸು ವ್ಯವಸ್ಥೆಯನ್ನು ರಕ್ಷಿಸುವಲ್ಲಿ ಮಹತ್ವದ ಪಾತ್ರ ವಹಿಸಿತ್ತು.

ಯುಪಿಎ–2 ಅವಧಿಯಲ್ಲಿ ವಿಮಾ ಕ್ಷೇತ್ರವನ್ನು ಖಾಸಗಿಗೆ ಮುಕ್ತಗೊಳಿಸುವ ಪ್ರಕ್ರಿಯೆ ಆರಂಭವಾಗಿತ್ತು. ವಿಮಾ ವಲಯದಲ್ಲಿ ಶೇಕಡ 26 ಎಫ್‌ಡಿಐ ಹೂಡಿಕೆಗೆ ಅನುಮತಿ ನೀಡಲು ಸರ್ಕಾರ ಮುಂದಾಗಿತ್ತು. ಆದರೆ, ಎಡ ಪಕ್ಷಗಳ ವಿರೋಧದಿಂಆಗಿ ಅದು ಅನುಷ್ಠಾನಕ್ಕೆ ಬರಲಿಲ್ಲ. 1999ರಲ್ಲಿ ವಾಜಪೇಯಿ ಸರ್ಕಾರ ಅಧಿಕಾರದಲ್ಲಿದ್ದಾಗ ವಿಮಾ ಕ್ಷೇತ್ರದಲ್ಲಿ ಶೇ. 26 ಎಫ್‌ಡಿಐಗೆ ಅನುಮತಿ ನೀಡಲಾಯಿತು. 2015ರಲ್ಲಿ ಮೋದಿ ಸರ್ಕಾರ ಅದನ್ನು ಶೇ. 49ಕ್ಕೆ ಏರಿಸಿತು.

* ಎನ್‌ಪಿಎ ಏರಿಕೆ: ಸರ್ಕಾರಿ ವಲಯದ ಬ್ಯಾಂಕ್‌ಗಳ ಉಸ್ತಿಯಾದ ಆಸ್ತಿಗಳು(ಎನ್.ಪಿ.ಎ– ಮರಳಿ ಬಾರದ ಸಾಲಗಳು) ಒಂದೇ ಸಮನೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗುತ್ತಿವೆ. ಎನ್‌ಪಿಎ ಮೊತ್ತ 2021ರಲ್ಲಿ ಬ್ಯಾಂಕ್‌ಗಳ ಒಟ್ಟು ಆಸ್ತಿಯ ಶೇಕಡ 13.5 ಆಗುವ ನಿರೀಕ್ಷೆಯಿದೆ. ಯುಪಿಎ ಸರ್ಕಾರದ ಕಾಲದಿಂದಲೂ ಅನುಸರಿಸಿಕೊಂಡು ಬಂದ ನೀತಿಗಳ ಫಲವಾಗಿ ಎನ್‌ಪಿಎ ಹೊರೆ ಹೆಚ್ಚಾಗಿದೆ. ಮೋದಿ ಸರ್ಕಾರದ ಕಾಲದಲ್ಲಿ ಅದು ಇನ್ನಷ್ಟು ಉಲ್ಬಣಿಸಿದೆ. ಮೂಲಸೌಕರ್ಯ ಕ್ಷೇತ್ರದಲ್ಲಿ ಹೂಡಿಕೆಯ ನೆಪದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಕಾರ್ಪೊರೇಟ್ ಕಂಪೆನಿಗಳಿಗೆ ದೊಡ್ಡ ಪ್ರಮಾಣದ ಸಾಲವನ್ನು ನೀಡುವಂತೆ ಮಾಡಲಾಯಿತು. ಅದರಲ್ಲಿ ಬಹಳಷ್ಟು ಸಾಲಗಳು ಮರಳಿ ಬಾರದ ಸಾಲಗಳಾಗುತ್ತಿವೆ (ಬ್ಯಾಡ್ ಡೆಟ್). ಅಂಥ ಶೇಕಡ 75ಕ್ಕೂ ಅಧಿಕ ಸಾಲ ಕಾರ್ಪೊರೇಟ್‌ಗಳಿಗೆ ನೀಡಿದ್ದಾಗಿದೆ.

ಲೂಟಿ ಮಾಡಿದವರ ಕೈಗೇ ನಿಯಂತ್ರಣ

ಮೋದಿ ಸರ್ಕಾರ 2014ರಿಂದ ಇದುವರೆಗೆ ಇಂಥ 6.6 ಲಕ್ಷ ಕೋಟಿ ರೂಪಾಯಿ ಸಾಲವನ್ನು ವಜಾ ಮಾಡಿದೆ. ಇದೀಗ ಬ್ಯಾಂಕ್‌ಗಳನ್ನು ಖಾಸಗೀಕರಿಸಿದರೆ ಸರ್ಕಾರಿ ಬ್ಯಾಂಕ್‌ಗಳನ್ನು ಲೂಟಿ ಮಾಡಿದವರೇ ಅವುಗಳ ನಿಯಂತ್ರಣ ಸಾಧಿಸಲು ನೆರವಾಗುತ್ತದೆ.

ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರವನ್ನು ಖಾಸಗೀಕರಿಸಲು ಮೋದಿ ಸರ್ಕಾರ ಇನ್ನಿಲ್ಲದ ಪ್ರಯತ್ನ ಮಾಡುತ್ತಿದೆ. ದೇಶದ ಆರ್ಥಿಕತೆಯ ವಿವಿಧ ವಲಯಗಳ ಸರ್ಕಾರಿ ಉದ್ದಿಮೆಗಳನ್ನು ಖಾಸಗೀಕರಿಸುವ ಸರ್ಕಾರದ ಮಹತ್ವಾಕಾಂಕ್ಷೆಯ ಭಾಗವಾಗಿ ಇದನ್ನು ನೋಡಬೇಕು. ನರೇಂದ್ರ ಮೋದಿ ಸರ್ಕಾರದ ಖಾಸಗೀಕರಣದ ಧಾವಂತವು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಅಮೆರಿಕದ ಷರತ್ತುಗಳಿಗೆ ನಾಚಿಕೆಗೇಡಿನ ಶರಣಾಗತಿಯಾಗಿದೆ. ಬ್ಯಾಂಕ್‌ಗಳನ್ನು ಖಾಸಗೀಕರಿಸುವಂತೆ, ಹಣಕಾಸು ಕ್ಷೇತ್ರವನ್ನು ಖಾಸಗಿಗೆ ಮುಕ್ತಗೊಳಿಸುವಂತೆ ಮತ್ತು ಸಾರ್ವಜನಿಕ ಕ್ಷೇತ್ರವನ್ನೇ ಇಡಿಯಾಗಿ ಕಳಚಿ ಹಾಕುವಂತೆ ಅವು ಸತತವಾಗಿ ಒತ್ತಾಯಿಸುತ್ತಿವೆ.

ಇದುವರೆಗೆ ಸಮಾಜ ಮತ್ತು ಸರ್ಕಾರದ ನಿಯಂತ್ರಣದಲ್ಲಿದ್ದ ಜನರ ಉಳಿತಾಯ ಹಾಗೂ ಸಾರ್ವಜನಿಕ ಸಂಪನ್ಮೂಲಗಳನ್ನು ಹಿಡಿಯಷ್ಟು ಹಣಕಾಸು–ಕಾರ್ಪೊರೇಟ್‌ಗಳ ಕೂಟದ ಕೈಗೆ ಮೋದಿ ಸರಕಾರ ಒಪ್ಪಿಸುತ್ತಿದೆ. ಕಾರ್ಪೊರೇಟ್‌ಗಳು ಬ್ಯಾಂಕ್‌ಗಳನ್ನು ಆರಂಭಿಸಲು ಅನುಮತಿ ನೀಡಬಹುದೆಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಆಂತರಿಕ ಸಮಿತಿಯೊಂದು ಕೆಲವು ತಿಂಗಳ ಹಿಂದೆ ಶಿಫಾರಸು ಮಾಡಿತ್ತು

ನೌಕರರ ಮುಂದೆ ಈಗ ಅತಿ ದೊಡ್ಡ ಸವಾಲು

ಬಂಡವಾಳ ಹಿಂತೆಗೆತ ಮತ್ತು ಖಾಸಗೀಕರಣದ ವಿರುದ್ಧ ಬ್ಯಾಂಕ್ ಮತ್ತು ವಿಮಾ ಕ್ಷೇತ್ರದ ನೌಕರರು ಕಳೆದ ಮೂರು ದಶಕಗಳಿಂದ ಧೀರೋದಾತ್ತ ಹೋರಾಟ ನಡೆಸುತ್ತಿದ್ದಾರೆ. ಈ ಪ್ರತಿರೋಧದಿಂದಾಗಿ ಉದಾರೀಕರಣದ ವೇಗ ತಗ್ಗಿತ್ತು. ಆದರೆ ಈಗ ಖಾಸಗೀಕರಣದ ಹೊಸ ಉಪಕ್ರಮಗಳನ್ನು ಸಂಸತ್ತಿನಲ್ಲಿ ಅಂಗೀಕರಿಸುವ ರಾಜಕೀಯ ಪ್ರಾಬಲ್ಯ ಹೊಂದಿರುವ ಸರ್ಕಾರ ಇರುವುದೇ ಈ ನೌಕರ ವರ್ಗ ಎದುರಿಸಬೇಕಾದ ಅತಿ ದೊಡ್ಡ ಸವಾಲಾಗಿದೆ.

ಆದ್ದರಿಂದ, ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರದ ನೌಕರರು ತಮ್ಮ ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ ಹಾಗೂ ಅದನ್ನು ಸಾರ್ವಜನಿಕ ವಲಯದ ಇತರ ಸಂಸ್ಥೆಗಳ ಖಾಸಗೀಕರಣದ ವಿರುದ್ಧ ನಡೆಯುವ ವ್ಯಾಪಕ ಹೋರಾಟದ ಭಾಗವಾಗಿ ಜೋಡಿಸಬೇಕು.

ಖಾಸಗೀಕರಣ–ವಿರೋಧಿ ದಿನ

ಖಾಗೀಕರಣ ಹುನ್ನಾರ ಮತ್ತು ಹೊಸ ಕೃಷಿ ಕಾನೂನುಗಳ ವಿರುದ್ಧ ಕೇಂದ್ರೀಯ ಟ್ರೇಡ್ ಯೂನಿಯನ್‌ಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಕರೆ ಮೇರೆಗೆ ಮಾರ್ಚ್ 15ರಂದು ರೈಲ್ವೆ ಸ್ಟೇಷನ್‌ಗಳ ಹೊರಗೆ ಪ್ರದರ್ಶನಗಳು ನಡೆದಿವೆ. ಖಾಸಗೀಕರಣದ ವಿರುದ್ಧದ ಸಂಘರ್ಷವು ಜನತೆಯ ಪ್ರಶ್ನೆಯಾಗಿ ಮೇಲೆದ್ದು ಬರಬೇಕು. ಹಾಗೂ ಎಲ್ಲ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಪ್ರತಿಪಕ್ಷಗಳು ಅದನ್ನು ರಾಜಕೀಯವಾಗಿ ಕೈಗೆತ್ತಿಕೊಳ್ಳಬೇಕು.

ಲಕ್ಷಾಂತರ ಬ್ಯಾಂಕ್ ಮತ್ತು ವಿಮಾ ನೌಕರರು ಹೋರಾಟವನ್ನು ಮುಂದುವರಿಸುವ ಜೊತೆಜೊತೆಯಲ್ಲೇ, ವಿಶ್ವಾಸದ್ರೋಹಕ್ಕಾಗಿ ಬಿಜೆಪಿಯು ರಾಜಕೀಯ ಬೆಲೆ ತೆರುವಂತೆ ಮಾಡುವುದನ್ನು ಖಾತರಿಪಡಿಸಬೇಕು. ಅವರು ಮತ್ತು ಕುಟುಂಬ ಸದಸ್ಯರು –ಅವರಲ್ಲಿ ಹಲವರು 2019ರ ಲೋಕಸಭೆ ಚುನಾವಣೆಗಳಲ್ಲಿ ಮೋದಿಯವರ ರಾಷ್ಟ್ರವಾದಿ ಅಬ್ಬರಗಳಿಗೆ ಮಾರು ಹೋಗಿ ಬಿಜೆಪಿ ಪರವಾಗಿ ಮತ ನೀಡಿದ್ದಿರಬಹುದು– ಇತರರೂ ಬೀದಿಗೆ ಬರುವಂತೆ ಅಣಿನೆರೆಯಿಸಬೇಕು ಹಾಗೂ ಮುಂಬರುವ ಅಸೆಂಬ್ಲಿ ಚುನಾವಣೆಗಳಲ್ಲಿ ಬಿಜೆಪಿ ವಿರುದ್ಧ ಮತ ಹಾಕುವಂತೆ ಮಾಡಬೇಕು.

ಹಿಂದುತ್ವ–ರಾಷ್ಟ್ರೀಯವಾದಿ ಪ್ರಚಾರ ಅಬ್ಬರದ ಹುಸಿತನವನ್ನು ಬಯಲು ಮಾಡಲು ಪರಿಣಾಮಕಾರಿ ರಾಜಕೀಯ ಪ್ರಚಾರವನ್ನು ನಡೆಸುವುದು ಅಗತ್ಯ. ದೇಶದ ಅಮೂಲ್ಯ ರಾಷ್ಟ್ರೀಯ ಸಂಪತ್ತು ಮತ್ತು ಸಂಪನ್ಮೂಲಗಳನ್ನು ಮಾರಾಟ ಮಾಡುವುದರಿಂದ ರಾಷ್ಟ್ರೀಯ ಸಾರ್ವಭೌಮತೆ ಅಪಾಯಕ್ಕೆ ಸಿಲುಕುತ್ತದೆ. ಸ್ವಾತಂತ್ರ್ಯವನ್ನು ಮೊಟಕುಗೊಂಡಂತಾಗುತ್ತದೆ. ಅಲ್ಲದೆ ಜನರನ್ನು ಇನ್ನಷ್ಟು ಆರ್ಥಿಕ ಶೋಷಣೆಗೆ ತಳ್ಳಿದಂತಾಗುತ್ತದೆ.

ಆತ್ಮನಿರ್ಭರ ಭಾರತದ ಬಗ್ಗೆ ಮಾತನಾಡುತ್ತಲೇ ದೇಶವನ್ನು ದೊಡ್ಡ ಕಾರ್ಪೊರೇಟ್‌ಗಳು ಮತ್ತು ಅವರ ವಿದೇಶಿ ಹಣಕಾಸು ಶಾಮೀಲುಕೋರರ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ಅವುಗಳಿಗೆ ದಾಸರಾಗುವಂತೆ ಮಾಡುವ ಸರ್ಕಾರವೊಂದು ಭಾರತದಲ್ಲಿದೆ. ಇದಲ್ಲವೇ ಮಹಾ ದುರಂತ?.

ಅನು: ವಿಶ್ವ



ಎಲ್ಲ ಬ್ಯಾಂಕುಗಳನ್ನೇನೂ ಖಾಸಗೀಕರಿಸುತ್ತಿಲ್ಲ ಎಂದಿದ್ದಾರೆ ಹಣಕಾಸು ಮಂತ್ರಿಗಳು!
ವ್ಯಂಗ್ಯಚಿತ್ರ: ಸತೀಶ ಆಚಾರ್ಯ

'ಸಾರ್ವಜನಿಕ ವಲಯದ ಬ್ಯಾಂಕುಗಳು ಬಹುಪಾಲು ಕಾರ್ಪೊರೇಟ್‌ಗಳ ಸಾಲಬಾಕಿಗಳಿಂದ ನರಳುತ್ತಿವೆ.....'

ಯುರೇಕಾ! ಈ ಬ್ಯಾಂಕುಗಳನ್ನು ಕಾರ್ಪೊರೇಟ್‌ಗಳಿಗೇ ಮಾರಿ ಬಿಡೋಣ!
ವ್ಯಂಗ್ಯಚಿತ್ರ: ಅಲೋಕ್ ನಿರಂತರ್





“ಎಲ್‌ಡಿಎಫ್ ಸದಾ ಜನಗಳ ಜತೆಯಿದೆ ಜನಗಳು ಸದಾ ಎಲ್‌ಡಿಎಫ್ ಜತೆಗಿದ್ದಾರೆ”

ದಾಖಲೆ ನಿರ್ಮಿಸುವ ನಿರೀಕ್ಷೆಯಲ್ಲಿ ಕೇರಳ ಎಲ್‌ಡಿಎಫ್

“ಎಲ್‌ಡಿಎಫ್ ಯಾವಾಗಲೂ ಜನರ ಜೊತೆಗಿರುತ್ತದೆ ಮತ್ತು ಜನಗಳು ಯಾವಾಗಲೂ ಎಲ್‌ಡಿಎಫ್ ಜತೆಗಿದ್ದಾರೆ. ಈ ಸರಕಾರ ನೀಡಿರುವ ಆಶ್ವಾಸನೆಗಳನ್ನು ಈಡೇರಿಸಿದೆ. ಮತ್ತು ಮುಂದೆಯೂ ಈಡೇರಿಸಬಹುದಾದ ಆಶ್ವಾಸನೆಗಳನ್ನೇ ಕೊಡುತ್ತದೆ. ಈ ರಾಜ್ಯಕ್ಕೆ ಜನರ ಕಷ್ಟಗಳಿಗೆ ಸ್ಪಂದಿಸದೇ ಇರುವ ಸರಕಾರ ಬೇಕಿಲ್ಲ. ಈಗ ರಾಜ್ಯದ ಜನತೆಗೆ ಬಿಕ್ಕಟ್ಟಿನ ಸಮಯದಲ್ಲಿ ಎಲ್‌ಡಿಎಫ್ ಸರಕಾರದ ಕಾರ್ಯನಿರ್ವಹಣೆಯ ಬಗ್ಗೆ ತೀರ್ಪು ನೀಡುವ ಅವಕಾಶ ಬಂದಿದೆ. ಜನತೆ ಹಲವು ಬಾರಿ ತೀರ್ಪು ನೀಡಿದ್ದಾರೆ. ಅವರ ತೀರ್ಪು ಈ ಬಾರಿಯೂ ಸಕಾರಾತ್ಮಕವಾಗಿರುತ್ತದೆ ಎಂದು ನಿರೀಕ್ಷಿಸುತ್ತೇವೆ. ನಾವು ಯುಡಿಎಫ್ ಮತ್ತು ಬಿಜೆಪಿ ನಡೆಸಿರುವ ದ್ವೇಷಪೂರ್ಣ ಪ್ರಚಾರದ ಬಗ್ಗೆ ತಲೆಕಡಿಸಿಕೊಳ್ಳುವದಿಲ್ಲ. ಜನತೆ ಇಂತಹ ಬಲೆಯಲ್ಲಿ ಬೀಳುವುದಿಲ್ಲ”

ಇದು ವಿಧಾನಸಭಾ ಚುನಾವಣೆಗೆ ಸಿದ್ಧತೆಯಾಗಿ ನಡೆದ ಎರಡು ರಾಜ್ಯವ್ಯಾಪಿ “ವಿಕಾಸನ ಮುನ್ನಟ್ಟ ಜಾಥಾ’(ಅಭಿವೃದ್ಧಿಯನ್ನು ಮುಂದೊಯ್ಯುವ ಜಾಥಾ’ ಗಳ ಕೊನೆಯಲ್ಲಿ ಕೇರಳದ ಎಲ್.ಡಿ.ಎಫ್ ಸರಕಾರದ ಮುಖ್ಯಸ್ಥರಾಗಿರುವ ಪಿಣರಾಯಿ ವಿಜಯನ್ ಹೇಳಿರುವ ಮಾತುಗಳು.

ಕಳೆದ ಐದು ವರ್ಷಗಳಲ್ಲಿ ಒಂದಾದ ಮೇಲೊಂದರಂತೆ ಓಕಿ ಸುಂಟರಗಾಳಿ, ಎರಡೆರಡು ಪ್ರವಾಹಗಳು ಮತ್ತು ಕೊರೊನ ಮಹಾಸೋಂಕು ಇವನ್ನೆಲ್ಲ ಎದುರಿಸಬೇಕಾಗಿ ಬಂದರೂ ವಿವಿಧ ರಂಗಗಳಲ್ಲಿ, ಮೂಲರಚನೆ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಸಾಮಾಜಿಕ ಕಲ್ಯಾಣ, ಮಾಹಿತಿ ತಂತ್ರಜ್ಞಾನದ ವಿಸ್ತರಣೆ, ಉದ್ಯೋಗಾವಕಾಶ ನಿರ್ಮಾಣ, ಸಾರ್ವಜನಿಕ ವಲಯದ ಘಟಕಗಳ ಪುನರುಜ್ಜೀವನ, ನಿರ್ವಸಿತರಿಗೆ ಮನೆಗಳು, ಕಸನಿರ್ವಹಣೆ, ಮತ್ತು ಪರಿಸರ ನಿರ್ವಹಣೆ – ಹೀಗೆ ಎಲ್ಲ ರಂಗಗಳಲ್ಲೂ ಕಳೆದ ಬಾರಿಯ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ 600 ಆಶ್ವಾಸನೆಗಳಲ್ಲಿ 580ನ್ನು ಈಡೇರಿಸಿರುವ ಸಂತೃಪ್ತಿಯೊಂದಿಗೆ ಪಿಣರಾಯಿ ವಿಜಯನ್ ನೇತೃತ್ವದ ಎಲ್.ಡಿ.ಎಫ್. ಮತ್ತೆ ಅಧಿಕಾರಕ್ಕೆ ಏರುವ ಭರವಸೆ ಹೊಂದಿದೆ.

ಅತ್ತ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೆ ಏರಲು ತೀವ್ರ ಕಸರತ್ತು ನಡೆಸುತ್ತಿದೆ. ಆದರೆ ಕೇರಳದ ಜನತೆ ಬಾರಿಬಾರಿಗೆ ಸರಕಾರದ ಸೂತ್ರ ಹಿಡಿಯುವವರನ್ನು ಬದಲಿಸಿದ್ದಾರೆ ಎಂಬೊಂದು ಆಸೆಯನ್ನು ಬಿಟ್ಟರೆ ಬೇರೇನೂ ಇಲ್ಲದ ಸನ್ನಿವೇಶದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಇದೆ.

ಕಳೆದ ಬಾರಿ ಒಂದು ಸೀಟನ್ನು ಪಡೆಯುವಲ್ಲಿ ‘ಯಶಸ್ವಿ’ಯಾದ ಬಿಜೆಪಿ ಹೇಗಾದರೂ ತನ್ನ ಶಕ್ತಿ ಬೆಳೆಸಿಕೊಳ್ಳಲು ಸಂಘ ಪರಿವಾರದ ನೇತೃತ್ವದಲ್ಲಿ ಶತಪ್ರಯತ್ನ ನಡೆಸಿದೆ.

ಕೇರಳದ ರಾಜಕೀಯ ದೇಶದ ಇತರೆಲ್ಲ ರಾಜ್ಯಗಳಿಗಿಂತ ವಿಭಿನ್ನವಾಗಿದೆ. ಇಲ್ಲಿ ಎರಡು ಮೈತ್ರಿಕೂಟಗಳು 80 ರ ದಶಕದಿಂದಲೂ ಆಡಳಿತ ನಡೆಸುತ್ತಿವೆ. 1982 ರಿಂದ ಈಚೆಗೆ, ಸಿಪಿಐ(ಎಂ) ನೇತೃತ್ವದ ಎಡಪ್ರಜಾಪ್ರಭುತ್ವ ರಂಗ ಮತ್ತು ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಜಾಪ್ರಭುತ್ವ ರಂಗ ಸತತ ಅವಧಿಗೆ ಆಡಳಿತ ನಡೆಸಿಲ್ಲ. ಆದರೆ ಅತಿ ಹೆಚ್ಚು ಬಾರಿ ಎಲ್.ಡಿ.ಎಫ್. ಆಡಳಿತವನ್ನು ನಡೆಸಿದೆ.

ಕೇರಳ ವಿಧಾನ ಸಭೆಯು ಒಟ್ಟು 140 ಸ್ಥಾನಗಳನ್ನು ಹೊಂದಿದೆ. ಆಡಳಿತವನ್ನು ನಡೆಸಬೇಕಾದರೆ 71 ಸ್ಥಾನಗಳನ್ನು ಗೆಲ್ಲಬೇಕು. 2016 ರ ಚುನಾವಣೆಯಲ್ಲಿ ಎಲ್ ಡಿ ಎಫ್ 91, ಯುಡಿಎಫ್ 47, ಎನ್.ಡಿ.ಎ 1 ಸ್ಥಾನದಲ್ಲಿ ಗೆಲುವನ್ನು ಸಾಧಿಸಿತ್ತು. ಸಿಪಿಐ(ಎಂ) ನೇತೃತ್ವದ ಎಲ್.ಡಿ.ಎಫ್. ನಲ್ಲಿ ಸಿಪಿಐ, ಜನತಾದಳ (ಎಸ್), ಎನ್‌ಸಿಪಿ, ಕೇರಳ ಕಾಂಗ್ರೆಸ್ (ಸ್ಕರಿಯಾ ಥಾಮಸ್), ಜನಾಧಿಪತ್ಯ ಕೇರಳ ಕಾಂಗ್ರೆಸ್, ಇಂಡಿಯನ್ ನ್ಯಾಷನಲ್ ಲೀಗ್, ಕೇರಳ ಕಾಂಗ್ರೆಸ್ (ಬಿ), ಲೋಕತಾಂತ್ರಿಕ ಜನತಾದಳ,ಕಾಂಗ್ರೆಸ್(ಸೆಕ್ಯುಲರ್) ಇವೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಲ್ಲಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್, ಕೇರಳ ಕಾಂಗ್ರೆಸ್ (ಜೋಸೆಫ್), ಆರ್.ಎಸ್.ಪಿ. ಫಾರ್ವರ್ಡ್ ಬ್ಲಾಕ್ ಸೇರಿದಂತೆ 9 ಪಕ್ಷಗಳಿವೆ.

ಬಿಜೆಪಿ ನೇತೃತ್ವದ ಎನ್.ಡಿಎ ಮೈತ್ರಿಕೂಟದಲ್ಲಿ ಭಾರತ್ ಧರ್ಮ ಜನಸೇನೆ ಅಂದರೆ ಬಿಡಿಜೆಎಸ್, ಕೇರಳ ಕಾಂಗ್ರೆಸ್‌ನ ಎರಡು ಬಣಗಳು, ಜನಾಧಿಪತ್ಯ ರಾಷ್ಟ್ರೀಯ ಸಭಾ, ಜೆಎಸ್‌ಎಸ್ ಮುಂತಾದ ಸುಮಾರು 20 ಸಣ್ಣ ಪುಟ್ಟ ಪಕ್ಷಗಳು ಸೇರಿವೆ.

ಈಗಾಗಲೆ ಮೂರು ರಂಗಗಳು ಟಿಕೇಟ್ ಗಳನ್ನು ಘೋಷಿಸಿ ಪ್ರಚಾರವನ್ನು ನಡೆಸುತ್ತಿವೆ.

ಎಲ್.ಡಿ.ಎಫ್.ನ ನೇತೃತ್ವದಲ್ಲಿರುವ ಸಿಪಿಐ(ಎಂ) ಈಗ 86 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಇವುಗಳಲ್ಲಿ 9 ಕ್ಷೇತ್ರಗಳಲ್ಲಿ ಸ್ವತಂತ್ರ ಅಭ್ಯರ್ಥಿಗಳಿಗೆ ಅವಕಾಶ ನೀಡಿದೆ. ಸಿಪಿಐ(ಎಂ)ನ 77 ಅಭ್ಯರ್ಥಿಗಳಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 12. ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳಿಂದ 13 ಅಭ್ಯರ್ಥಿಗಳಿದ್ದಾರೆ. 40ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಸಂಖ್ಯೆ 12.



ಸಿಪಿಐ(ಎಂ) ರಾಜ್ಯ ಸಮಿತಿ ಸತತ ಎರಡು ಬಾರಿ ಶಾಸಕರಾಗಿದ್ದವರನ್ನು ಸ್ಪರ್ಧೆಗೆ ಇಳಿಸಬೇಕಾಗಿಲ್ಲ ಎಂಬ ಮಹತ್ವದ ನಿರ್ಧಾರವನ್ನು ತೆಗದುಕೊಂಡಿದೆ. ಇದರ ಪ್ರಕಾರ ಐವರು ಮಂತ್ರಿಗಳು, 33 ಹಾಲಿ ಶಾಸಕರು ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ.


ಯುಡಿಎಫ್ ನಲ್ಲಿ ’ ಕಾಂಗ್ರೆಸ್ ಪಕ್ಷವು 86 ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಘೋಷಣೆ ಮಾಡಿ ಇತರ ಸ್ಥಾನಗಳನ್ನು ಮಿತ್ರ ಪಕ್ಷಗಳಿಗೆ ಬಿಟ್ಟು ಕೊಟ್ಟಿದೆ. ಮಹಿಳಾ ಅಭ್ಯರ್ಥಿಗಳಿಗೆ ಹೆಚ್ಚಿನ ಟಿಕೆಟ್ ನೀಡಿಲ್ಲ ಎಂಬ ಆರೋಪಗಳನ್ನು ಕಾಂಗ್ರೆಸ್ ಎದುರಿಸುತ್ತ ಇದೆ. ಮಹಿಳಾ ವಿಭಾಗದ ಮುಖ್ಯಸ್ಥರೊಬ್ಬರು ತಮ್ಮನ್ನು ಅಭ್ಯರ್ಥಿಯೆಂದು ಘೋಷಣೆ ಮಾಡದಿರುವುದನ್ನು ಪ್ರತಿಭಟಿಸಿದ್ದಾರೆ. ಮತ್ತು ಪಕ್ಷಕ್ಕೆ ರಾಜಿನಾಮೆ ನೀಡಿದ್ದಾರೆ.


ಕಾಂಗ್ರೆಸ್ ಪಕ್ಷಕ್ಕೆ ಮತ್ತೊಂದು ಅಘಾತ ಉಂಟಾಗಿದೆ. ದಶಕಗಳ ಕಾಲ ಕಾಂಗ್ರೆಸ್ ಪಕ್ಷದಲ್ಲಿ ಹಲವು ಪ್ರಮುಖ ಸ್ಥಾನಗಳನ್ನು ಅಲಂಕರಿಸಿದ್ದ ಪಿಸಿ ಚಾಕೋ ಮತ್ತು ವಿಜಯನ್ ಥೋಮಸ್ ಕಾಂಗ್ರೆಸ್ ತೊರೆದಿದ್ದಾರೆ. ಚಾಕೋ ಎನ್‌ಸಿಪಿ ಸೇರಿ ಎಲ್‌ಡಿಎಫ್ ಪರ ಪ್ರಚಾರ ನಡೆಸುವುದಾಗಿ ಹೇಳಿದ್ದಾರೆ.

ಕಾಂಗ್ರೆಸ್ ನಲ್ಲಿ ಎರಡು ಗುಂಪುಗಳಿದ್ದು ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಮತ್ತು ಪ್ರತಿಪಕ್ಷದ ಮುಖಂಡ ರಮೇಶ್ ಚೆನ್ನಿತಲ ಅವರ ಗುಂಪುಗಾರಿಕೆಯಿಂದ ಕೇರಳದ ಕಾಂಗ್ರೆಸ್ ನಲ್ಲಿ ಹಲವು ನಾಯಕರಲ್ಲಿ ಅಸಮಾಧಾನದ ಹೊಗೆಯಾಡುತ್ತಿದೆ. ಅಧಿಕಾರಕ್ಕೆ ಬರಲು ಹವಣಿಸುತ್ತಿರುವ ಯುಡಿಎಫ್ ಗೆ ಇದು ಭಾರಿ ಪೆಟ್ಟು ನೀಡಲಿದೆ ಎಂಬುದು ಯುಡಿಎಫ್ ಬೆಂಬಲಿಗರಿಗೂ ಕಸಿವಿಸಿಯಾಗಿದೆ.

ಕೇಂದ್ರದಲ್ಲಿ ಅಧಿಕಾರವನ್ನು ನಡೆಸುತ್ತಿರುವ ರಾಜ್ಯದಲ್ಲೂ, ಈಗ ಒಂದೇ ಸ್ಥಾನ ಹೊಂದಿದ್ದರೂ ಯೇನಕೇನ ಪ್ರಕಾರೇಣ ಅಧಿಕಾರ ಹಿಡಿಯುವ

ಪುಟ 10 ನೋಡಿ





ವ್ಯಂಗ್ಯಚಿತ್ರಗಳು: ಪಿ.ಮಹಮ್ಮದ್, ವಾರ್ತಾಭಾರತಿ



ಪಶ್ಚಿಮ ಬಂಗಾಳ-ಪರ್ಯಾಯ ಸಾಧ್ಯವಿದೆ

ಕೊಲ್ಕತಾ ಬ್ರಿಗೇಡ್ ಮೈದಾನ ಸಂಯುಕ್ತ ಮೋರ್ಚಾ ರ‍್ಯಾಲಿಯ ನಿರೀಕ್ಷೆಗೂ ಮೀರಿದ ಯಶಸ್ಸು ಈಗ ಕೆಲವು 'ಆಸ್ಥಾನ' ಮಾಧ್ಯಮಗಳನ್ನು ಬಿಟ್ಟರೆ ಬಹಳಷ್ಟು ಮುಖ್ಯಧಾರೆಯ ಮಾಧ್ಮಮಗಳೂ ಪಶ್ಚಿಮ ಬಂಗಾಲದಲ್ಲಿ ಚುನಾವಣಾ ಸಮರ ಬಿಜೆಪಿ–ಟಿಎಂಸಿ ಸಮರವಾಗಿ ಉಳಿದಿಲ್ಲ ಎಂದು ಗಮನಿಸುವಂತೆ ಮಾಡಿದೆ.

ಈ ರ‍್ಯಾಲಿಗಿಂತ ಮೊದಲೇ ಪಶ್ಚಿಮ ಬಂಗಾಲ ಸಿಪಿಐ(ಎಂ) ಕಾರ್ಯದರ್ಶಿ ಸೂರ್ಯಕಾಂತ ಮಿಶ್ರ ಸಂದರ್ಶನವೊಂದರಲ್ಲಿ "ಪಶ್ಚಿಮ ಬಂಗಾಲದಲ್ಲಿ ಒಂದು ಪ್ರತ್ಯಕ್ಷ ಬದಲಾವಣೆ ಕಾಣುತ್ತಿದೆ. ಇಲ್ಲಿ ತ್ರಿಕೋಣ ಸ್ಪರ್ಧೆಯಿರುತ್ತದೆ ಮತ್ತು ಕೇಂದ್ರ ಮತ್ತು ರಾಜ್ಯದ ಆಳುವ ಮಂದಿಯನ್ನು ಸೋಲಿಸುವ ಒಂದು ಸಾಧ್ಯತೆಯೂ ಇದೆ. ನಾವು ಪರ್ಯಾಯ ಧೋರಣೆಗಳನ್ನು ಜಾರಿ ಮಾಡಬೇಕು. ಈ ಪರ್ಯಾಯವನ್ನು ಕೇವಲ ಎಡ, ಪ್ರಜಾಪಸತ್ತಾತ್ಮಕ, ಜಾತ್ಯತೀತ ಶಕ್ತಿಗಳು ಮಾತ್ರವೇ ಕೊಡಬಲ್ಲವು" ಎಂದು ಹೇಳಿದ್ದರು.

ನಿಜ, 2019ರ ಲೋಕಸಭಾ ಚುನಾವಣೆಗಳಲ್ಲಿ ಸನ್ನಿವೇಶ ಬಿಜೆಪಿ ಮತ್ತು ಟಿಎಂಸಿ ನಡುವೆ ಧ್ರುವೀಕರಣಗೊಂಡಿತ್ತು. ಇದರಿಂದಾಗಿ ಎಡ ಮತ್ತು ಕಾಂಗ್ರೆಸಿನ ಬೆಂಬಲ ನೆಲೆಯಲ್ಲಿ 13ಶೇ.ದಷ್ಟು ಕುಸಿತವಾಯಿತು. ಆದರೆ ಈಗ ಪರಿಸ್ಥಿತಿ ಬಹಳಷ್ಟು ಬದಲಾಗಿದೆ.

ಮೊದಲನೆಯದಾಗಿ, ಬಿಜೆಪಿ, ನಂತರದ ಸುಮಾರಾಗಿ ಎಲ್ಲ ಚುನಾವಣೆಗಳಲ್ಲಿ ಸೋಲನ್ನು ಕಂಡಿದೆ. ಅಲ್ಲದೆ ಈಗ ಅದು ವ್ಯಾಪಕ ಜನಾಂದೋಲನಗಳನ್ನು ಎದುರಿಸಬೇಕಾಗಿ ಬಂದಿದೆ. ಇತ್ತ ಪಶ್ಚಿಮ ಬಂಗಾಲದಲ್ಲೂ ಟಿಎಂಸಿ ವಿರುದ್ಧ ಜನಗಳ ಅಸಂತೃಪ್ತಿ ಹೆಚ್ಚುತ್ತಿದೆ. ಎಷ್ಟೇ ಜನಮರುಳು ಸ್ಕೀಮುಗಳನ್ನು ಪ್ರಕಟಿಸಿದರೂ ಜನಗಳ ಅಸಂತೃಪ್ತಿಯನ್ನು ಸರಿಪಡಿಸಲು ಅದಕ್ಕಾಗುತ್ತಿಲ್ಲ. ಜತೆಗೆ ಪ್ರತಿದಿನವೆಂಬಂತೆ ಆ ಪಕ್ಷ ವಿಘನೆಗೊಳ್ಳುತ್ತ ಹೋಗುತ್ತಿದೆ.

ಅಲ್ಲದೆ, ವಿಶೇಷವಾಗಿ, ಕೊವಿಡ್ ಕಾಲದಲ್ಲಿ , ಸರಕಾರಗಳು ಜನಗಳ ಜತೆಗೆ ಇರದಿದ್ದಾಗ, ಎಡಪಕ್ಷಗಳು ಜನಗಳ ಜೊತೆಗಿದ್ದು ಅವರ ನೆರವಿಗೆ ಧಾವಿಸಿವೆ.

ಕೇಂದ್ರದಲ್ಲಾಗಲೀ, ರಾಜ್ಯದಲ್ಲಾಗಲೀ ಅಧಿಕಾರದಲ್ಲಿರುವವರು ಜನಗಳ ಅಗತ್ಯಗಳನ್ನು ಪೂರೈಸುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ಇದೀಗ ಎಡ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಶಕ್ತಿಗಳು ಒಂದು ಪರ್ಯಾಯವನ್ನು ಕೊಡುವ ಅಗತ್ಯವಿದೆ ಎನ್ನುತ್ತಾರೆ ಸೂರ್ಯಕಾಂತ ಮಿಶ್ರ.

ಈ ತಿಳುವಳಿಕೆಯಿಂದಲೇ ಈಗ ಅಲ್ಲಿ ಎಡಪಕ್ಷಗಳು, ಕಾಂಗ್ರೆಸ್ ಮತ್ತು ಐಎಸ್‌ಎಫ್‌ನ ಒಂದು ಸಂಯುಕ್ತ ಮೋರ್ಚಾ ರಚನೆಗೊಂಡಿದೆ. 'ಜನತಾ ಬ್ರಿಗೇಡ್'ನಲ್ಲಿ ಇದು ಗಳಿಸಿರುವ ಬೆಂಬಲದ ಒಂದು ನೋಟ ಕಾಣಸಿಕ್ಕಿದೆ.

"ಹಾಲ್ ಫೆರಾವೊ, ಲಾಲ್ ಫೆರಾವೊ" ಅಲ್ಲಿ ಬಹಳಷ್ಟು ಜನಗಳನ್ನು ಆಕರ್ಷಿಸಿದ ಒಂದು ಘೋಷಣೆ –ಇದರ ಅರ್ಥ ಪರಿಸ್ಥಿತಿ ಬದಲಾಯಿಸಿ, ಕೆಂಪನ್ನು ತನ್ನಿ.

ಈ ಸಂಯುಕ್ತ ಮೋರ್ಚಾದ ಭಾಗವಾಗಿ ಸಿಪಿಐ(ಎಂ) ತನ್ನ 126 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ. ಇವರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಅಭ್ಯರ್ಥಿಗಳು 40 ವರ್ಷಕ್ಕಿಮತ ಕೆಳಗಿನವರು ಎಂಬುದು ಗಮನಾರ್ಹ.

ಜೆಎನ್‌ಯು ನಲ್ಲಿ ದೇಶದ ಗಮನ ಸೆಳೆದ ಆಯಿಷೆ ಘೋಷ್, ಇನ್ನೊಬ್ಬ ಜೆಎನ್‌ಯು ವಿದ್ಯಾರ್ಥಿಮುಖಂಡೆ ದೀಪ್ತಿತಾ ಧರ್, ರಾಜ್ಯದ ಯುವ ಮುಖಂಡರಾದ ಶ್ರಿಜನ್ ಭಟ್ಟಾಚಾರ್ಯ, ಮೀನಾಕ್ಷಿ ಚಟರ್ಜಿ ಯುವ ಅಭ್ಯರ್ಥಿಗಳಲ್ಲಿ ಪ್ರಮುಖರು. ಬಹಳಷ್ಟು ಗಮನ ಸೆಳೆಯಲಿರುವ ಸಿಂಗೂರ್ ನಲ್ಲಿ ಶ್ರೀಜನ್ ಭಟ್ಟಾಚಾರ್ಯ ಮತ್ತು ನಂದಿಗ್ರಾಮ್ ನಲ್ಲಿ ಮುಖ್ಯಮಂತ್ರಿ ಮತ್ತು ಅವರಿಗೆ ಪ್ರತಿಸ್ಪರ್ಧಿಯಾಗಿ ನಿಂತಿರುವ ಆಕೆಯ ಮಾಜಿ ಶಿಷ್ಯ ಇವರಿಬ್ಬರರಿಗೂ ಎದುರಾಗಿ ಮೀನಾಕ್ಷಿ ಚಟರ್ಜಿ ಸ್ಪರ್ಧಿಸಿದ್ದಾರೆ.



ಸಂಯುಕ್ತ ಮೋರ್ಚಾದ ಐಎಸ್‌ಎಫ್ ಕೋಮುವಾದಿ ಎಂದು ಧ್ರುವೀಕರಣದ ಸ್ಪರ್ಧೆಯಲ್ಲಿ ತೊಡಗಿದ ಬಿಜೆಪಿ ಮತ್ತು ಟಿಎಂಸಿ ಮಾತ್ರವಲ್ಲ, ಕೆಲವು ಎಡ ಪಂಥೀಯರು ಅಥವ ಪ್ರಜಾಪ್ರಭುತ್ವವಾದಿಗಳು ಎನಿಸಿಕೊಂಡವರೂ ಹಣೆಪಟ್ಟಿ ಹಚ್ಚಿದ್ದಾರೆ.

ಆದರೆ ಐಎಸ್‌ಎಫ್ ತನಗೆ ನೀಡಿದ 30 ಸೀಟುಗಳ ಪೈಕಿ 20 ಸೀಟುಗಳ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ್ದು ಅವರಲ್ಲಿ ಹತ್ತು ಮಂದಿ ಮುಸ್ಲಿಮೇತರರು–ದಲಿತ, ಬುಡಕಟ್ಟು ವಿಭಾಗಗಳಿಗೆ ಸೇರಿದವರು, ಕೆಲವರು ಮೇಲ್ಜಾತಿಗಳಿಗೆ ಸೇರಿದವರೂ ಇದ್ದಾರೆ ಎಂಬುದು ಗಮನಾರ್ಹ. ವಾಸ್ತವವಾಗಿ ಇದು ದಮನಿತ ವಿಭಾಗಗಳ ಒಂದು ರಂಗ. ಈ ರಂಗ ಸ್ಥಾಪನೆಗೊಂಡ ನಂತರ ಅದರ ಮುಖಂಡರಲ್ಲಿ ಒಬ್ಬರಾದ ಅಬ್ಬಾಸ್ ಸಿದ್ದಿಕ್ಯ ಯವರ ಹೇಳಿಕೆಗಳಲ್ಲಿ ಒಂದಾದರೂ ಕೋಮುವಾದಿ ಎನ್ನಬಹುದಾದ ಹೇಳಿಕೆಯನ್ನು ತೋರಿಸಿ ಎನ್ನುತ್ತಾರೆ ಒಬ್ಬ ಎಡರಂಗದ ಮುಖಂಡರು.

ಒಬ್ಬ ವಿಶ್ಲೇಷಕರು ಐಎಸ್‌ಎಫ್ ರಚನೆಯಾದ್ದರಿಂದ ಎಐಎಂಐಎಂನ ಒವೈಸಿ ಬಿಹಾರದಂತೆ ಬಂಗಾಳದಲ್ಲೂ ಸ್ಪರ್ಧಿಸುವ ವಿಚಾರವನ್ನು ಬಿಡಬೇಕಾಯಿತು, ಈ ಮೂಲಕ ಅಲ್ಲಿ ಆದಂತೆ ಧ್ರುವೀಕರಣಕೋರರಿಗೆ ನೆರವಿನ ಒಂದು ಮೂಲ ಮುಚ್ಚಿ ಹೋಗಿದೆ ಎಂದಿದ್ದಾರೆ.

ಬಿಜೆಪಿಯಲ್ಲಿ ಆಂತರಿಕ ಆಕ್ರೋಶಗಳ ಭುಗಿಲು

ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿಗಳನ್ನು ಪ್ರಕಟಿಸುತ್ತಿರುವಂತೆ ಆ ಪಕ್ಷದೊಳಗೆ ಎದ್ದಿರುವ ಪ್ರತಿಭಟನೆಗಳು ಮುಂದುವರೆಯುತ್ತಲೇ ಇವೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಮಾರ್ಚ್ 15ರಂದು ಕೊಲ್ಕತಾದಲ್ಲಿ ಪಕ್ಷದ ಚುನಾವಣಾ ಕಚೇರಿಯ ಹೊರಗೆ ನೂರಾರು ಬಿಜೆಪಿ ಬೆಂಬಲಿಗರು ಪ್ರತಿಭಟನೆಗಳನ್ನು ನಡೆಸಿದರು. ಹೂಗ್ಲಿ ಮತ್ತು 24ಪರಗಣ ಜಿಲ್ಲೆಯಿಂದ ಬಂದ ಬೆಂಬಲಿಗರು ಪ್ರತಿಭಟನೆಗಳ ಮುಂಚೂಣಿಯಲ್ಲಿದ್ದರು ಎಂದು ವರದಿ ಯಾಗಿದೆ.

ಅಭ್ಯರ್ಥಿಗಳ ಪಟ್ಟಿಗಳಲ್ಲಿ ಪಕ್ಷಾಂತರಿಗಳಿಗೇ, ಅದರಲ್ಲೂ ನಿನ್ನೆ–ಮೊನ್ನೆ ಸೇರಿದವರಿಗೆ ಪ್ರಾಮುಖ್ಯತೆ ನೀಡಲಾಗಿದೆ ಎಂಬುದು ಅವರ ಮುಖ್ಯ ಆಕ್ರೋಶ.


ಪಕ್ಷದ ಕೊಲ್ಕತ ಚುನಾವಣಾ ಕಚೇರಿಗೆ ಪ್ರವೇಶಿಸುತ್ತಿದ್ದಾಗ ಹಿಂದೆ ಟಿಎಂಸಿಯ ಹಿರಿಯ ಮುಖಂಡರಾಗಿದ್ದು, ಈಗ ಬಿಜೆಪಿಯ ಒಬ್ಬ ರಾಷ್ಟ್ರೀಯ ಉಪಾಧ್ಯಕ್ಷರಾಗಿರುವ ಮುಕುಲ್ ರಾಯ್, ಬ್ಯಾರಕ್ ಪುರ್ ನ ಸಂಸತ್ ಸದಸ್ಯ ಅರ್ಜುನ್ ಸಿಂಗ್ ಮತ್ತು ಒಬ್ಬ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಪ್ರಕಾಶ್‌ರವರ ವಿರುದ್ಧ ಘೋಷಣೆ ಕೂಗಿದ ಬಿಜೆಪಿ ಬೆಂಬಲಿಗರು ಪೋಲೀಸ್ ಬ್ಯಾರಿಕೇಡುಗಳನ್ನು ಮುರಿಯಲು ಪ್ರಯತ್ನಿಸಿದರು ಎಂದೂ ವರದಿಯಾಗಿದೆ.

ಬಿಜೆಪಿಯ ಹಲವು ಜಿಲ್ಲಾ ಕಚೇರಿಗಳಿಗೆ ಬೀಗ ಹಾಕಲಾಯಿತು, ಇಲ್ಲವೇ ಅಸ್ತವ್ಯಸ್ತಗೊಳಿಸಲಾಯಿತು. ಕೊಲ್ಕತ, ಹೂಗ್ಲಿ, ಹೌರಾ ಮತ್ತು 24 ಪರಗಣ ಜಿಲ್ಲೆಗಳಲ್ಲಿ ಹಲವೆಡೆ ಟೈರುಗಳನ್ನು ಸುಟ್ಟು ಪ್ರತಿಭಟನೆಗಳು ನಡೆದಿವೆ.

ಉದಾಹರಣೆಗೆ, ಸಿಂಗೂರ್‌ನಿಂದ ನಾಲ್ಕು ಬಾರಿ ಟಿಎಂಸಿ ಶಾಸಕರಾಗಿದ್ದ ರಬೀಂದ್ರನಾಥ್ ಭಟ್ಟಾಚಾರ್ಯ ಈ ಬಾರಿ ಟಿಕೇಟ್ ನಿರಾಕರಿಸಲ್ಪಟ್ಟಾಗ, ಈ 89 ವರ್ಷದ ನಿವೃತ್ತ ಶಾಲಾ ಅಧ್ಯಾಪಕರು ಬಿಜೆಪಿ ಸೇರಿದರು. ಮಾರ್ಚ್ 15ರಂದು ಅವರನ್ನು ಸಿಂಗೂರ್‌ನ ಬಿಜೆಪಿ ಅಭ್ಯರ್ಥಿ ಎಂದು ಪ್ರಕಟಿಸಲಾಗಿದೆ. ತಕ್ಷಣವೇ ಸಿಂಗೂರ್ ನಲ್ಲಿ ಪ್ರತಿಭಟನೆ ಸ್ಫೋಟಗೊಂಡಿತು. ಅಲ್ಲಿ ಪ್ರಚಾರಕ್ಕೆಂದು ಮಧ್ಯಪ್ರದೇಶದಿಂದ ಬಂದಿದ್ದ ಅಲ್ಲಿಯ ವೈದ್ಯಕೀಯ ಶಿಕ್ಷಣ ಮಂತ್ರಿ ವಿಶ್ವಾಸ್ ಸಾರಂಗ್ ಮತ್ತು ಉತ್ತರ ಪ್ರದೇಶದ ಹಿರಿಯ ಬಿಜೆಪಿ ಮುಖಂಡರನ್ನು ಪಕ್ಷದ ಕಚೇರಿಯೊಳಗೆ ನಾಲ್ಕು ಗಂಟೆಗಳ ಕಾಲ ಬೀಗ ಹಾಕಿ ಇಡಲಾಯಿತು

"ನಾನು ಬಿಜೆಪಿಯಲ್ಲಿ 21 ವರ್ಷಗಳಿಂದ ದುಡಿಯುತ್ತಿದ್ದೇನೆ.. ಪಕ್ಷ ನನ್ನನ್ನು ಅಭ್ಯರ್ಥಿಯಾಗಿ ಮಾಡದೆ ನಾನು ಅನರ್ಹ ಎಂದು ಭಾವಿಸುವಂತೆ

ಪುಟ 10 ನೋಡಿ



ಪರ್ಯಾಯ ಸಾಧ್ಯವಿದೆ

ಪುಟ 9 ರಿಂದ

ಮಾಡಿದೆ. ನಾನು ಈ ಪಕ್ಷದಿಂದ ಇನ್ನು ಹೆಚ್ಚೇನನ್ನೂ ನಿರೀಕ್ಷಿಸುವಂತಿಲ್ಲ" ಎನ್ನುತ್ತ ಭಾಸ್ಕರ್ ಭಟ್ಟಾಚಾರ್ಯ ಎಂಬವರು ಪಕ್ಷಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಇವರು ಬಿಜೆಪಿಯ ರಾಜ್ಯಸಮಿತಿಯ ಮಾಜಿ ಸದಸ್ಯರು ಎನ್ನಲಾಗಿದೆ.



ಇನ್ನೊಬ್ಬ ಮಾಜಿ ರಾಜ್ಯಸಮಿತಿ ಸದಸ್ಯ ರಾಜಕಮಲ್ ಪಾಠಕ್ ಎಂಬವರೂ 30ವರ್ಷಗಳು ಪಕ್ಷಕ್ಕಾಗಿ ದುಡಿದ ನಂತರ ಈಗಿನ ಪರಿಸ್ತಿತಿ ತಾನು ರಾಜಕೀಯದಿಂದ ನಿವೃತ್ತಿ ಪಡೆಯುವಂತೆ ಹೇಳುತ್ತಿದೆ ಎಂದು ತನ್ನ ಫೇಸ್ ಬುಕ್‌ನಲ್ಲಿ ಹೇಳಿಕೊಂಡಿದ್ದಾರಂತೆ. ಇದಕ್ಕೆ ಮೊದಲು ಹೂಗ್ಲಿ ಜಿಲ್ಲಾಧ್ಯಕ್ಷ ಸುಬಿರ್ ನಾಗ್ ಪಕ್ಷ ಬಿಟ್ಟಿದ್ದರು.

ಮತ್ತೊಂದೆಡೆಯಲ್ಲಿ, ಈ ಹಿಂದೆ ಟಿಎಂಸಿಯ ಹಿರಿಯ ಮುಖಂಡ ಮತ್ತು ಕೊಲ್ಕತಾ ಮೇಯರ್ ಆಗಿದ್ದ, ಆದರೆ ಕಳೆದ ಲೋಕಸಭಾ ಚುನಾವಣೆಯ ವೇಳೆಯಲ್ಲಿ ಬಿಜೆಪಿ ಸೇರಿದ ಸೊವನ್ ಚಟರ್ಜಿ ತನಗೆ ಈ ಬಾರಿ ಟಿಕೆಟ್ ಕೊಡಲಿಲ್ಲವೆಂದು ಪಕ್ಷ ತ್ಯಜಿಸಿದ್ದಾರಂತೆ.

ಬಿಜೆಪಿಯ ಈ ಪಟ್ಟಿಯಲ್ಲಿ ಮೂವರು ಹಾಲಿ ಸಂಸತ್ ಸದಸ್ಯರ ಹೆಸರುಗಳು ಇರುವುದನ್ನು ಕೂಡ ಬಿಜೆಪಿ ಬೆಂಬಲಿಗರು ಪ್ರತಿಭಟಿಸಸುತ್ತಿದ್ದಾರೆ. ಬಿಜೆಪಿಗೆ ಅರ್ಹ ಅಭ್ಯರ್ಥಿಗಳ ಬರ ಬಂದಿದೆಯೇ ಎಂಬದು ಹಲವರ ಸಂದೇಹ. ರಾಜ್ಯಸಭಾದ ನಾಮನಿರ್ದೇಶಿತ ಸದಸ್ಯರಾಗಿರುವ ಪತ್ರಕರ್ತ ಸ್ವಪನ್ ದಾಸ್ ಗುಪ್ತರವರನ್ನು ಈಗ ಅಭ್ಯರ್ಥಿಯಾಗಿ ಆರಿಸಿರುವುದರಿಂದ, ಅನರ್ಹತೆಯನ್ನು ತಪ್ಪಿಸಿಕೊಳ್ಳಲು ಅವರು ರಾಜ್ಯಸಭಾ ಸದಸ್ಯತ್ವಕ್ಕೆ ಈಗಲೇ ರಾಜೀನಾಮೆ ಕೊಡಬೇಕಾಗಿ ಬಂದಿದೆ.

ಈ ವ್ಯಾಪಕ ಪ್ರತಿಭಟನೆಗಳಿಂದಾಗಿ ಕೇಂದ್ರ ಗೃಹಮಂತ್ರಿ ಅಮಿತ್ ಷಾ ರವರ ಪ್ರಚಾರ ಕಾರ್ಯಕ್ರಮದ ಮೇಲೂ ಪರಿಣಾಮವಾಗಿದೆ ಎಂದು ವರದಿಯಾಗಿದೆ.

ಕೇರಳದಂತಹ ಫಜೀತಿ ಬಿಜೆಪಿಗೆ ಇಲ್ಲಿಯೂ ಆಗಿದೆ. ರಾಜ್ಯ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಸೋವೆಲದ್ರನಾಥ್ ಮಿತ್ರ ರವರ ಪತ್ನಿ ಶಿಖಾ ಮಿತ್ರ ಚೌಧುರಿ ಮತ್ತು ಟಿಎಂಸಿ ಸಸಕಿ ಮಾಲಾಸಾಹಾರವರ ಪತಿ ತರುಣ್ ಸಾಹಾರವನರ ಹೆಸರುಗಳು ಬಿಜೆಪಿ ಪ್ರಕಟಿಸಿರುವ ಪಟ್ಟಿಯುದಲ್ಲಿದ್ದು, ಇವರಿಬ್ಬರೂ ಅಭ್ಯರ್ಥಿಗಳಾಗಲು ನಿರಾಕರಿಸಿದ್ದಾರೆ. ಶಿಖಾ ಅವರು ತಾನೆಂದೂ ಬಿಜೆಪಿ ಸೇರುವುದಿಲ್ಲ ಎಂದರೆ, ಸಾಹಾ ಅವರು ತಾನು ಬಿಜೆಪಿ ಸೇರಿಯೂ ಇಲ್ಲ, ಟಿಕೆಟಂತೂ ಕೇಳಿಯೇ ಇಲ್ಲೆಂದಿದ್ದಾರೆ.

ಇದಲ್ಲದೆ ಭಾರೀ ಪ್ರತಿಭಟನೆಗೊಳಗಾದ ಭಾರತ ಸರಕಾರದ ಮಾಜಿ ಆರ್ಥಿಕ ಸಲಹೆಗಾರರ ಅಶೋಕ್ ಲಹಿರಿಯವರ ಹೆಸರನ್ನು ಪಟ್ಟಿಯಿಂದ ಹಿಂತೆಗೆದುಕೊಳ್ಳಲಾಗಿದೆ.

ಇದುವರೆಗೆ 294 ಕ್ಷೇತ್ರಗಳ ಪೈಕಿ 123 ರ ಅಭ್ಯರ್ಥಿಗಳ ಹೆಸರುಗಳನ್ನಷ್ಟೇ ಪ್ರಕಟಿಸಲಾಗಿದೆ. ಆದರೂ ಇವೆಲ್ಲ 'ತಾತ್ಕಾಲಿಕ' ಎಂದು ಬಿಜೆಪಿ ವಕ್ತಾರ ಶಮಿಕ್ ಭಟ್ಟಾಚಾರ್ಯ ತಳ್ಳಿ ಹಾಕಿದ್ದಾರೆ.

ಒಟ್ಟಿನಲ್ಲಿ ಕೇಂದ್ರದ 'ಆಳುವ' ಪಕ್ಷ ಮತ್ತು ರಾಜ್ಯದ ಆಳುವ ಪಕ್ಷದ ನಿಜ ಬಣ್ಣ ಅಭ್ಯರ್ಥಿಗಳ ಪಟ್ಟಿಯ ಹಂತದಲ್ಲೇ ಬಯಲುಗೊಳ್ಳುತ್ತಿದೆ.

ದಾಖಲೆ ನಿರ್ಮಿಸುವ ನಿರೀಕ್ಷೆಯಲ್ಲಿ

ಪುಟ 8 ರಿಂದ

ಪ್ರಯತ್ನ ನಡೆಸುತ್ತಿರುವ ಬಿಜೆಪಿ 115 ಕ್ಷೇತ್ರದಲ್ಲಿ ಸ್ಪರ್ಧೆಯನ್ನು ಮಾಡುತ್ತಿದೆ. ಮಿತ್ರ ಪಕ್ಷಗಳಿಗೆ 25 ಕ್ಷೇತ್ರಗಳನ್ನು ಬಿಟ್ಟು ಕೊಟ್ಟಿದೆ.

ಚುನಾವಣೆ ಘೋಷಣೆಯಾಗುತ್ತಿದ್ದಂತೆ ಹಲವರು 'ಖ್ಯಾತ'ರನ್ನು ಪಕ್ಷಕ್ಕೆ ಸೇರಿಸಿಕೊಂಡಿದೆ. ಇವರಲ್ಲಿ ಪ್ರಮುಖರೆಂದರೆ ಮೆಟ್ರೋಮ್ಯಾನ್ ಎಂದೇ ಖ್ಯಾತರಾದ ಇ.ಶ್ರೀಧರನ್. ಇವರೇ ಮುಮದಿನ ಮುಖ್ಯಮಂತ್ರಿಗಳು ಎಂದು ಕೇಂದ್ರ ಸಂಪುಟದಲ್ಲಿ ರಾಜ್ಯ ಪ್ರತಿನಿಧಿಯಾಗಿರುವವರು ಅತ್ಯುತ್ಸಾಹದಿಂದ ಘೋಷಿಸಿದ ಬೆನ್ನಲ್ಲೇ ಇಲ್ಲ, ಅಂತಹ ನಿರ್ಧಾರವೇನೂ ಆಗಿಲ್ಲ ಎಂದೂ ಘೋಷಿಸಿದರು!

ಇನ್ನೊಂದು ಫಜೀತಿ ತಂದ ಸಂಗತಿಯೆಂದರೆ, ತಮ್ಮ ಅಭ್ಯರ್ಥಿಯೆಂದು ಆ ಪಕ್ಷ ಪ್ರಕಟಿಸಿದ ವ್ಯಕ್ತಿ ತಾನು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಘೋಷಣೆ ಮಾಡಿರುವುದು. ಎಂಬಿಎ ಪದವೀಧರನಾಗಿರುವ ಆದಿವಾಸಿ ಹುಡುಗ ಮಣಿಕುಟ್ಟೀನ್ ಅವರ ಸ್ಪರ್ಧೆಯನ್ನು ಮಾಡದಿರುವದಕ್ಕೆ ಕಾರಣವನ್ನು ನೀಡಿದ್ದಾರೆ, "ನನ್ನನ್ನು ತಲೆ ಕೆಳಗಾಗಿಸಿ ನೇತಾಡಿಸಿದರೂ ನನ್ನ ಜನಗಳಿಗೆ ದ್ರೋಹ ಎಸಗಲಾರೆ" ಎಂಬ ಅಂಬೆಡ್ಕರ್ ಮಾತನ್ನು ಉಲ್ಲೇಖಿಸಿ ಬಿಜೆಪಿ ಟಿಕೆಟ್ ನಿರಾಕರಿಸಿದ್ದಾರೆ. ನಮ್ಮ ಬೆಂಬಲ ಎಲ್. ಡಿಎಫ್ ಗೆ ಎಂದು ಅವರು ಖಡಕ್ ಉತ್ತರವನ್ನು ಬಿಜೆಪಿಗೆ ನೀಡಿದ್ದಾರೆ.

ಆ ನಂತರ ಮತ್ತೊಂದು ಫಜೀತಿಯನ್ನೂ ಅದು ಎದುರಿಸಬೇಕಾಗಿ ಬಂದಿದೆ. ಚೆಂಗನ್ನೂರು ಕ್ಷೇತ್ರದಿಂದ ಅಭ್ಯರ್ಥಿಯಾಗುವ ಆಸೆ ಇದ್ದ ರಾಜ್ಯದ ಹಿರಿಯ ಆರೆಸ್ಸೆಸ್ ಮುಖಂಡರು ಅದು ಸಿಗದಾಗ ಬಿಜೆಪಿ ಮುಖಂಡರು ಈ ಕ್ಷೇತ್ರವೂ ಸೇರಿದಂತೆ ಕನಿಷ್ಟ 3ಕ್ಷೇತ್ರಗಳಲ್ಲಿ ಎಲ್‌ಡಿಎಫ್‌ನೊಂದಿಗೆ ಶಾಮೀಲಾಗಿದ್ದಾರೆ ಎಂಬ ವಿಚಿತ್ರ ಆರೋಪವನ್ನು ಮಾಡಿದ್ದಾರೆ.

ಈ ನಡುವೆ ಕಾಂಗ್ರೆಸ್ ಮುಖಂಡರೊಬ್ಬರು ಎಲ್‌ಡಿಎಫ್ ಸರಕಾರ ಹಂಚುತ್ತಿರುವ ಆಹಾರದ ಕಿಟ್‌ಗಳು ಕೇಂದ್ರ ಸರಕಾರದ್ದು ಎಂದು ಉದ್ದೇಶ ಪೂರ್ವಕವಾಗಿಯೋ ಅಥವ ಅಲ್ಲವೋ ಹೇಳಿರುವ ಬೆನ್ನಲ್ಲೇ ಒಬ್ಬ ಬಿಜೆಪಿ ಮುಖಂಡರು ತಮಗೆ 35 ಸ್ಥಾನ ಸಿಕ್ಕರೂ ಸಾಕು, ತಮ್ಮದೇ ಸರಕಾರ ಎಂದು ಘೋಷಿಸಿಯೇ ಬಿಟ್ಟಿರುವುದು ಮತ್ತೊಮ್ಮೆ ರಾಜ್ಯದಲ್ಲಿ ಕಾಂಗ್ರೆಸ್–ಬಿಜೆಪಿಯ ಶಾಮೀಲನ್ನು ಹೊರಗಡಹಿದೆಯೋ ಎಂದು ಎಲ್‌ಡಿಎಫ್ ಮುಖಂಡರು ಸಂದೇಹ ವ್ಯಕ್ತಪಡಿಸಿದ್ದಾರೆ.

ಈ ನಡುವೆ, ಈ ಬಾರಿ ಮತ್ತೆ ಎಲ್‌ಡಿಎಫ್ ಅಧಿಕಾರಕ್ಕೆ ಬರಲಿದೆ ಎಂದು ರಾಜಕೀಯ ತಜ್ಞರು, ವಿಶ್ಲೇಷಕರು ಹೇಳುತ್ತಿದ್ದಾರೆ. ಸಮೀಕ್ಷೆಗಳು ಕೂಡಾ ಅದನ್ನೆ ಹೇಳುತ್ತಾ ಇವೆ. ಎಬಿಪಿ –ಸಿವೋಟರ್ ಸಮೀಕ್ಷೆ 2021 ಆಡಳಿತಾರೂಢ ಎಲ್‌ಡಿಎಫ್ (LDF) ಮತ್ತೊಮ್ಮೆ ಅಧಿಕಾರಕ್ಕೇರಲಿದೆ. ಸಿಪಿಐ (ಎಂ) ನೇತೃತ್ವದ ಎಲ್ ಡಿ ಎಫ್ ಸರಳ ಬಹುಮತ ಗಳಿಸಲಿದ್ದು 77 ರಿಂದ 85 ಸ್ಥಾನ ಗಳಿಸಲಿದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ 54 ರಿಂದ 62 ಸ್ಥಾನ ಗಳಿಸಬಹುದು ಹಾಗೂ ಬಿಜೆಪಿ 2 ಸ್ಥಾನ ಗೆಲ್ಲಬಹುದು ಎಂದು ಸಮೀಕ್ಷೆ ಹೇಳ್ತಾ ಇವೆ.

ಎಲ್ಲಕ್ಕಿಂತ ಮುಖ್ಯವಾಗಿ ಕೇರಳ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಸಾಕಷ್ಟು ಒತ್ತನ್ನು ನೀಡಿದೆ. ಕೊವಿಡ್ ಸೇರಿದಂತೆ ಹಲವು ಪ್ರಾಕೃತಿಕ ವಿಕೋಪಗಳನ್ನು ನಿಭಾಯಿಸಿ ವಿಶ್ವಮಟ್ಟದಲ್ಲಿ ಭಾರತಕ್ಕೆ ಹೆಸರನ್ನು ತಂದು ಕೊಟ್ಟಿದೆ ಹಾಗಾಗಿ ಈ ಬಾರಿ ಎಡರಂಗ ಮತ್ತೆ ಅಧಿಕಾರಕ್ಕೆ ಬರಲಿದೆ, ಇತಿಹಾಸವನ್ನು ನಿರ್ಮಾಣ ಮಾಡಲಿದೆ ಎಂಬುದು ಬಹಳಷ್ಟು ಜನರ ನಿರೀಕ್ಷೆ.

ಮೋದಿ VS ದೀದಿ–ವ್ಯಂಗ್ಯಚಿತ್ರಕಾರರು ಕಂಡಂತೆ



ಕೊಬ್ರಾ ಡ್ಯಾನ್ಸರ್ ಆದ ಡಿಸ್ಕೊಡ್ಯಾನ್ಸರ್ ಕೃಪೆ: ಸತೀಶ ಆಚಾರ್ಯ



ನಾನು ಅರ್ಧ ಟಾಗೋರರಂತೆ, ಅರ್ಧ ಪೆರಿಯಾರ್‌ರಂತೆ ಕಾಣುವ ಹಾಗೆ ಮಾಡಿ– ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ಮೋದಿಯ 'ಸೋನಾರ್ ಬಾಂಗ್ಲಾ' ಮತ್ತು ಸೋನಾರರು –ಕೃಪೆ: ರಿಮಿಕ್ಸ್‌ಕಾಮಿಕ್ಸ್


ಭಾಯ್, ನೀವು ಆಕೆಗಿಂತ ಉತ್ತಮ ಪ್ರದರ್ಶನ ಕೊಡಬೇಕು –ಕೃಪೆ: ಪಂಜು ಗಂಗೊಳ್ಳಿ



ಕೃಪೆ: ಸುರೇಂದ್ರನ್ ,ದಿ ಹಿಂದು



ಷಾರವರ ಕಷ್ಟಗಳು –ಕೃಪೆ: ಸುಭಾನಿ, ಡೆಕ್ಕನ್ ಕ್ರಾನಿಕಲ್



ಬಂಡವಾಳಶಾಹಿಯ ಅಭೂತಪೂರ್ವ ಬಿಕ್ಕಟ್ಟು ಮತ್ತು ಕಾರ್ಮಿಕ ಚಳುವಳಿಯಲ್ಲಿ ವಿಭಜನೆ



1928 ರಲ್ಲಿ ಕಾರ್ಮಿಕ ವರ್ಗವು ಭಾರತದ ಸಂಪೂರ್ಣ ಸ್ವಾತಂತ್ರ್ಯವನ್ನು ತನ್ನ ನಿಸ್ಸಂದಿಗ್ಧ ರಾಜಕೀಯ ಗುರಿ ಎಂದು ಘೋಷಿಸಿದಾಗ, ಬೂರ್ಜ್ವಾ ನೇತೃತ್ವದ ರಾಷ್ಟ್ರೀಯ ಕಾಂಗ್ರೆಸ್ ಗೆ ಆ ಗುರಿಯನ್ನು ಘೋಷಿಸುವಷ್ಟು ದೂರ ಹೋಗಲು ಸಾಧ್ಯವಾಗಲಿಲ್ಲ ಮತ್ತು ಅದಕ್ಕಾಗಿ ಅವರು ಇನ್ನೂ ಒಂದು ವರ್ಷ ಕಾಯಬೇಕಾಯಿತು ಎಂಬುದು ವಿಶೇಷ..

ಸಾಮ್ರಾಜ್ಯಶಾಹಿಗಳು ದಾಳಿ ನಡೆಸಲು ಸಮಯ ಕಳೆದುಕೊಳ್ಳಲಿಲ್ಲ ಮತ್ತು ಅದೇ ಸಮಯದಲ್ಲಿ ವಿಭಜನೆ ಸಂಭವಿಸಿತು. ಎರಡು ವಿಭಜನೆಗಳ ನಂತರ ಭಾರತದ ಕಾರ್ಮಿಕ ಚಳವಳಿ ಮೂರು ರಾಷ್ಟ್ರೀಯ ಕೇಂದ್ರಗಳಾಗಿ ವಿಂಗಡಣೆಯಾಯಿತು.-ಇದು ಚಳುವಳಿ ಅದುವರೆಗೆ ಎದುರಿಸದ, ಅತ್ಯಂತ ಅಪಾಯಕಾರಿ ಹಿನ್ನಡೆಯಾಗಿತ್ತು. ಅಭೂತಪೂರ್ವ ಬಿಕ್ಕಟ್ಟು ವಿಶ್ವ ಬಂಡವಾಳಶಾಹಿ ಆರ್ಥಿಕತೆಯನ್ನು ಬೆಚ್ಚಿಬೀಳಿಸಿದಾಗ, ಅದು ತನ್ನೊಡನೆ ತಂದಿದ್ದ ನಿರುದ್ಯೋಗ, ರಿಟ್ರೆಂಚ್‌ಮೆಂಟ್, ವೇತನ ಕಡಿತ ಮತ್ತು ಬೆಲೆ ಏರಿಕೆ ಇಡೀ ಕಾರ್ಮಿಕರ ಜೀವನವನ್ನು ಹಾಳುಮಾಡುವ ದಾಳಿಯ ವಿರುದ್ಧ ಕಠಿಣ ಪ್ರತಿರೋಧವನ್ನು ವ್ಯಕ್ತಪಡಿಸುವುದಕ್ಕಾಗಿ ಕಾರ್ಮಿಕ ವರ್ಗದ ಉನ್ನತ ಮಟ್ಟದ ಸಂಘಟನಾತ್ಮಕ ಐಕ್ಯತೆ ಅತ್ಯಗತ್ಯವಾಗಿದ್ದಾಗ ಕಾರ್ಮಿಕ ವರ್ಗದ ಐಕ್ಯತೆಯು ಕೆಟ್ಟದಾಗಿ ಛಿದ್ರಗೊಂಡಿತ್ತು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ=ಅನುವಾದ: ಸಿ.ಆರ್. ಶಾನಭಾಗ

ಭಾರತದಲ್ಲಿ ಮೇದಿನ

1927 ರ ನವೆಂಬರ್‌ನಲ್ಲಿ ಕಾನ್ಪುರದಲ್ಲಿ ನಡೆದ ಎಐಟಿಯುಸಿ ಯ ಎಂಟನೇ ಅಧಿವೇಶನದ ಪ್ರಧಾನ ಕಾರ್ಯದರ್ಶಿಯ ವರದಿಯು ಮುಂಬೈ ಮತ್ತು ದೇಶದ ಹಲವಾರು ಸ್ಥಳಗಳಲ್ಲಿ ಆ ವರ್ಷದಲ್ಲಿ ಮೇ ದಿನವನ್ನು ಆಚರಿಸಿರುವುದನ್ನು ಉಲ್ಲೇಖಿಸಿದೆ.

ಭಾರತದಲ್ಲಿ ಮೇ-ದಿನವನ್ನು ಆಚರಿಸುವ ಪ್ರಕ್ರಿಯೆ ವಾಸ್ತವವಾಗಿ ಹೆಚ್ಚು ವಿಳಂಬವಾದ ವಿದ್ಯಮಾನವಾಗಿದೆ. ಹತ್ತೊಂಬತ್ತನೇ ಶತಮಾನದ ಆರನೇ ದಶಕದಲ್ಲಿ ಅಮೆರಿಕಾದ ಕಾರ್ಮಿಕ ವರ್ಗವು ಪ್ರಾರಂಭಿಸಿದ ಎಂಟು-ಗಂಟೆಗಳ ಕೆಲಸದ ದಿನದ ಚಳುವಳಿ, 1886 ರ ಮೇ 1 ರಂದು ಚಿಕಾಗೋದಲ್ಲಿ ಕಾರ್ಮಿಕರ ಮುಷ್ಕರದಲ್ಲಿ ಉತ್ತುಂಗಕ್ಕೇರಿತು. ನಂತರದ ಪೋಲೀಸ್ ದೌರ್ಜನ್ಯವು ನಾಲ್ಕು ಕಾರ್ಮಿಕರ ಪ್ರಾಣಗಳನ್ನು ಬಲಿತೆಗೆದುಕೊಂಡಿತು. ಘಟನೆಯ ವಿಚಾರಣೆಯ ನಾಟಕ ನಡೆಯಿತು ಮತ್ತು ಅಮೆರಿಕದ ಕಾರ್ಮಿಕ ವರ್ಗದ ನಾಲ್ಕು ಅಮರ ನಾಯಕರಾದ ಪಾರ್ಸನ್ಸ್, ಸ್ಪೈಸ್, ಫಿಶರ್ ಮತ್ತು ಎಂಗಲ್ ಅವರನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಲಾಯಿತು. ಚಿಕಾಗೋದ ಈ ಘಟನೆಗಳ ಮೂರು ವರ್ಷಗಳ ನಂತರ, ವಿಶ್ವದ ವಿವಿಧ ದೇಶಗಳ ಸಮಾಜವಾದಿ ಚಳವಳಿಯ ಮುಖಂಡರು ಪ್ಯಾರಿಸ್‌ನಲ್ಲಿ 14 ಜುಲೈ 1889 ರಂದು ಭೇಟಿಯಾಗಿದ್ದರು,. ಸಮಾಜವಾದಿಗಳ ಈ ಪ್ಯಾರಿಸ್ ಕಾಂಗ್ರೆಸ್ 1890 ರ ಮೇ 1 ನ್ನು ಅಂತರರಾಷ್ಟ್ರೀಯ ಪ್ರತಿಭಟನಾ ದಿನವಾಗಿ ಆಚರಿಸಲು ವಿಶ್ವ ಕಾರ್ಮಿಕರಿಗೆ ಕರೆ ನೀಡಿತು. ಅದರಂತೆ ಮೇ-ದಿನವನ್ನು 1890 ರಲ್ಲಿ ಯುರೋಪಿನ ವಿವಿಧ ದೇಶಗಳಲ್ಲಿ ಆಚರಿಸಲಾಯಿತು. ಅಂದಿನಿಂದ ಮೇ-ದಿನವನ್ನು ವಿಶ್ವ ಕಾರ್ಮಿಕರು ಪ್ರತಿವರ್ಷ ಕಾರ್ಮಿಕ ವರ್ಗದ ಅಂತರರಾಷ್ಟ್ರೀಯ ಒಗ್ಗಟ್ಟಿನ ದಿನವಾಗಿ ಆಚರಿಸಲು ಪ್ರಾರಂಭಿಸಿದರು.

ಭಾರತದಲ್ಲಿ ಮೇ-ದಿನವನ್ನು ಮೊದಲ ಬಾರಿಗೆ ಸಂಘಟಿತ ರೀತಿಯಲ್ಲಿ 1927 ರಲ್ಲಿ ಮುಂಬೈ, ಕಲ್ಕತ್ತಾ, ಮದ್ರಾಸ್ ಮತ್ತು ಇತರ ಕಾರ್ಮಿಕ ಕೇಂದ್ರಗಳಲ್ಲಿ ಎಐಟಿಯುಸಿ ಯ ನಿರ್ದೇಶನದಲ್ಲಿ ಆಚರಿಸಲಾಗಿದ್ದರೂ, 1927 ಕ್ಕಿಂತ ಮೊದಲು ಮೇ-ದಿನ ಆಚರಣೆಯ ಪ್ರತ್ಯೇಕ ನಿದರ್ಶನಗಳು ದಾಖಲೆಯಲ್ಲಿವೆ. 1926 ರಲ್ಲಿ ಮುಂಬೈಯಲ್ಲಿ ಮೇ-ದಿನವನ್ನು ಆಚರಿಸಲಾಯಿತು. ಪೌರ ಕಾರ್ಮಿಕರು ಆ ವರ್ಷದ ಮೇ-ದಿನದ ಪ್ರದರ್ಶನದ ಮುಖ್ಯ ತಂಡವನ್ನು ರಚಿಸಿದರು, ಆದರೆ 1923 ರಲ್ಲಿ ಮದ್ರಾಸ್‌ನಲ್ಲಿ ಮೇ ದಿನದ ಮೇಳವನ್ನು ಆಯೋಜಿಸುವಲ್ಲಿ ಮೊದಲ ವೈಯಕ್ತಿಕ ಮುತುವರ್ಜಿಯನ್ನು ಕೈಗೊಂಡ ಶ್ರೇಯಸ್ಸು ಮಾರ್ಕ್ಸ್‌ವಾದದಲ್ಲಿ ನಂಬಿಕೆಯುಳ್ಳ ಆರಂಭಿಕರಲ್ಲಿ ಒಬ್ಬರಾಗಿದ್ದ ಸಿಂಗಾರವೇಲು ಚೆಟ್ಟಿಯಾರ್ ಅವರ ಕ್ರಾಂತಿಕಾರಿ ಮನೋಭಾವಕ್ಕೆ ಸಲ್ಲುತ್ತದೆ.

ಮದ್ರಾಸ್‌ನಿಂದ ಪ್ರಕಟವಾದ ದಿ-ಹಿಂದೂ ಪತ್ರಿಕೆ ಮದ್ರಾಸ್‌ನಲ್ಲಿ ಮೇ-ದಿನದ ಆಚರಣೆಯ ಸುದ್ದಿಯನ್ನು ವರದಿ ಮಾಡಿತ್ತು.. ಈ ಪತ್ರಿಕೆಯ ಪ್ರಕಾರ ಮದ್ರಾಸ್‌ನಲ್ಲಿ ಎರಡು ಮೇ-ದಿನದ ಸಭೆಗಳು ನಡೆದವು-ಒಂದು ಸಿಂಗಾರವೇಲು ಚೆಟ್ಟಿಯಾರ್ ಅವರ ಅಧ್ಯಕ್ಷತೆಯಲ್ಲಿ ಹೈಕೋರ್ಟ್ ಎದುರಿನ ಸಮುದ್ರ ತೀರದಲ್ಲಿ ಮತ್ತು ಇನ್ನೊಂದು ಟ್ರಿಪ್ಲಿಕೇನ್ ಬೀಚ್‌ನಲ್ಲಿ ಎಸ್. ಕೃಷ್ಣಸ್ವಾಮಿ ಶರ್ಮಾ ಅಧ್ಯಕ್ಷತೆ ವಹಿಸಿದ್ದರು..

ಕಾರ್ಮಿಕ ವರ್ಗದ ಚಳವಳಿಯಲ್ಲಿ ಕಮ್ಯುನಿಸ್ಟ್ ಪ್ರಾಬಲ್ಯ- ಒಂದು ಹೊಸ ವೈಶಿಷ್ಟ

1926-29ರ ಅವಧಿಯಲ್ಲಿ ಭಾರತದ ವಿವಿಧ ಕೈಗಾರಿಕಾ ಕೇಂದ್ರಗಳನ್ನು ಆವರಿಸಿದ ಕಾರ್ಮಿಕ-ವರ್ಗದ ಚಳವಳಿಯ ಅಲೆಯು ಕಮ್ಯುನಿಸ್ಟರ ನೇತೃತ್ವದಲ್ಲಿ ಎಡ-ನಿಲುವಿನ ನಾಯಕತ್ವದ ಉದಯಕ್ಕೆ ಕಾರಣವಾಯಿತು. ಸಮರಶೀಲ ಹೋರಾಟದ ಕುಲುಮೆಯಲ್ಲಿ ಪರೀಕ್ಷಿಸಲ್ಪಟ್ಟ ಭಾರತದ ಕಮ್ಯುನಿಸ್ಟರು, ಭಾರತದ ಕಾರ್ಮಿಕ ವರ್ಗದ ದೊಡ್ಡ ವಿಭಾಗದ ಅತ್ಯಂತ ವಿಶ್ವಾಸಾರ್ಹ ಮತ್ತು ಪ್ರೀತಿಯ ನಾಯಕರಾಗಿ ಹೊರಹೊಮ್ಮಿದರು. ವಿವಿಧ ಭಾರತೀಯ ರೈಲ್ವೆ ಕಂಪನಿಗಳ ಕಾರ್ಮಿಕರ ಸುದೀರ್ಘ ಮುಷ್ಕರಗಳು, ಮುಂಬಯಿ ಜವಳಿ ಕಾರ್ಮಿಕರ ದೀರ್ಘಕಾಲದ ಮುಷ್ಕರ, ಬಂಗಾಳದ ಸೆಣಬಿನ ಉದ್ಯಮದಲ್ಲಿನ ಯಾತನಾಮಯ ಮುಷ್ಕರಗಳು ಮತ್ತು ಜಮ್ಷೆಡ್ಪುರದ ಉಕ್ಕಿನ ಉದ್ಯಮ ಮತ್ತು ವಿವಿಧ ಭಾಗಗಳಲ್ಲಿ ಸ್ಫೋಟಗೊಂಡ ಅನೇಕ ಪ್ರಬಲ ಹೋರಾಟಗಳು ದೇಶದ ಕಮ್ಯುನಿಸ್ಟರಿಗೆ ಸಮರಶೀಲ ಟ್ರೇಡ್ ಯೂನಿಯನಿಸಂನ ಕಲೆಯಲ್ಲಿ ಅಮೂಲ್ಯವಾದ ಶಿಕ್ಷಣವನ್ನು ನೀಡಿದವು. ಈ ಹೋರಾಟಗಳ ಪ್ರಕ್ರಿಯೆಯಲ್ಲಿ ಬಹು ಎಚ್ಚರಿಕೆಯಿಂದ ನಿರ್ಮಿಸಲ್ಪಟ್ಟ ಐತಿಹಾಸಿಕ ಗಿರಣಿ ಕಾಮಗಾರ್ ಯೂನಿಯನ್ ಮತ್ತು ರೈಲ್ವೆ ಸೆಣಬು ಮತ್ತು ಇತರ ಕೈಗಾರಿಕೆಗಳಲ್ಲಿನ ಕಾರ್ಮಿಕರ ಇತರ ಪ್ರಬಲ ಸಂಘಗಳು, ಕಮ್ಯುನಿಸ್ಟರು ಮತ್ತು ಸಮರಶೀಲ ಎಡಪಂಥೀಯರಿಗೆ ಶ್ರಮಜೀವಿ ಹೋರಾಟದ ಏರುತ್ತಿದ್ದ ಅಲೆಗಳಿಗೆ ಮಾರ್ಗದರ್ಶನ ನೀಡಲು ಮತ್ತು ಅವುಗಳನ್ನು ನಡೆಸಲು ಬಲವಾದ ಸಂಘಟನಾತ್ಮಕ ನೆಲೆಯಾಗಿ ಕಾರ್ಯನಿರ್ವಹಿಸಿದವು.

ಈ ಹೊಸ ವೈಶಿಷ್ಟ್ಯವು ಭಾರತದ ಕಾರ್ಮಿಕ ಸಂಘಗಳನ್ನು ಸಮರಶೀಲಗೊಳಿಸುವ ಪ್ರಕ್ರಿಯೆಯನ್ನು ಹುಟ್ಟುಹಾಕಿತು. ಮುಂಬಯಿಯಲ್ಲೇ ಟ್ರೇಡ್ ಯೂನಿಯನ್ ಸದಸ್ಯತ್ವವು 1926 ರಲ್ಲಿ 59,544 ರಿಂದ 1929 ರಲ್ಲಿ 200,335ಕ್ಕೆ ಏರಿದ್ದು, ಈ ದಿಕ್ಕಿಗೆ ಒಂದು ಸೂಚಕವಾಗಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಷ್ಟ್ರೀಯ ಸುಧಾರಣಾವಾದಿ ಕಾರ್ಮಿಕ ಮುಖಂಡರ ಗೊಂದಲಮಯ ರಾಜಕೀಯ ನಿಲುವು ರಾಷ್ಟ್ರೀಯ ಕಾಂಗ್ರೆಸ್ ಒಟ್ಟಾರೆಯಾಗಿ ಹೆಚ್ಚುತ್ತಿರುವ ಕಾರ್ಮಿಕ ಚಳವಳಿಯ ಬಗ್ಗೆ ಅಷ್ಟೊಂದು ಉತ್ಸಾಹಭರಿತವಲ್ಲದ ಮನೋಭಾವವನ್ನು ಹೊಂದಲು ಕಾರಣವಾಯಿತು. ಕಮ್ಯುನಿಸ್ಟರು ಮತ್ತು ಇತರ ಎಡ ಶಕ್ತಿಗಳು ಇದಕ್ಕೆ ವಿರುದ್ಧವಾಗಿ, ಕಾರ್ಮಿಕರ ಮತ್ತು ರೈತರ ಪಕ್ಷದಲ್ಲಿ ಸಂಘಟಿತರಾದರು ಮತ್ತು ಸ್ವತಂತ್ರ ಮತ್ತು ಸಮರಶೀಲ ಕಾರ್ಮಿಕ ವರ್ಗದ ಚಳವಳಿಯ ಬಗ್ಗೆ ಸಕಾರಾತ್ಮಕ ನಂಬಿಕೆಯೊಂದಿಗೆ ಮುಂದುವರೆದರು ಮತ್ತು ಕಾರ್ಮಿಕರ ಮತ್ತು ಅವರ ಹೋರಾಟಗಳ ರಾಜಕೀಯಕರಣದ ಅಗತ್ಯತೆಯನ್ನು ಅನುಭವಿಸಿದರು.

ಸಾಂವಿಧಾನಿಕ ಪರಿಹಾರಕ್ಕೆ ಒತ್ತು ನೀಡುವ ಮತ್ತು ರಾಷ್ಟ್ರೀಯ-ರಾಜಕೀಯ ಚಳವಳಿಯಲ್ಲಿ ಕಾರ್ಮಿಕ ವರ್ಗದ ಅಧೀನ ಪಾತ್ರದೊಂದಿಗೆ ಹೆಚ್ಚಿನ ಸಂವಿಧಾನಾತ್ಮಕ ಮತ್ತು ಸುಧಾರಣಾವಾದಿ ಹೋರಾಟದ ಹಾದಿ, ಮತ್ತು ಇನ್ನೊಂದು-ಕ್ರಾಂತಿಕಾರಿ ವರ್ಗ ಹೋರಾಟದ ಹಾದಿ ಮತ್ತು ಕಾರ್ಮಿಕ ವರ್ಗದ ಸ್ವತಂತ್ರ ಮತ್ತು ಮುಂಚೂಣಿಯ ರಾಜಕೀಯ ಪಾತ್ರ-ಹೀಗೆ ದೇಶದ ಕಾರ್ಮಿಕ ಚಳವಳಿಯಲ್ಲಿ ಈ ಎರಡು ನಿಲುವಿನ ಕ್ರಮಗಳ ನಡುವೆ ತೀವ್ರವಾದ ವಾಗ್ವಾದ ನಡೆಯಿತು.

ಹೀಗೆ ಸೈದ್ಧಾಂತಿಕವಾಗಿ ಸಜ್ಜುಗೊಂಡ ಕಮ್ಯುನಿಸ್ಟರು ಮತ್ತು ಇತರ ಎಡಪಂಥೀಯರು ಸಮರಶೀಲ ಟ್ರೇಡ್ ಯೂನಿಯನ್ ಆಂದೋಲನವನ್ನು ಸಂಘಟಿಸುವ ಕಾರ್ಯಕ್ಕೆ ಉತ್ಸಾಹದಿಂದ ತಮ್ಮನ್ನು ತಾವು ತೊಡಗಿಸಿಕೊಂಡರು. ತೀಕ್ಷ್ಣವಾದ ಆರ್ಥಿಕ ಹೋರಾಟಗಳ ಜೊತೆಯಲ್ಲಿ, ಕಾರ್ಮಿಕರು ಧೈರ್ಯದಿಂದ ರಾಜಕೀಯ ಕ್ಷೇತ್ರಕ್ಕೂ ಪ್ರವೇಶಿಸಿದರು ಮತ್ತು ರಾಷ್ಟ್ರೀಯ ಸ್ವಾತಂತ್ರ್ಯದ ದಿಕ್ಕಿನಲ್ಲಿ ಕ್ರಾಂತಿಕಾರಿ ಮತ್ತು ನಿಸ್ಸಂದಿಗ್ಧವಾದ ನೀತಿಯನ್ನು ಅಳವಡಿಸಿಕೊಳ್ಳಲು ರಾಷ್ಟ್ರೀಯ ಕಾಂಗ್ರೆಸ್ ಮೇಲೆ ಒತ್ತಡ ಹೇರಿದರು.

ಕಲ್ಕತ್ತಾ ಟ್ರಾಮವೆ ಮೆನ್ಸ್ ಯೂನಿಯನ್, ಬಂಗಾಳ ಸೆಣಬಿನ ಕಾರ್ಮಿಕರ ಸಂಘ, ಪೂರ್ವ ಭಾರತ ರೈಲ್ವೆ ಕಾರ್ಮಿಕ ಸಂಘ ಮತ್ತು ಇತರ ಹಲವಾರು ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ ಮುಜಾಫರ್ ಅಹ್ಮದ್, ಬಂಕಿಮ್ ಮುಖರ್ಜಿ, ಶಿಬ್ನಾಥ್ ಬ್ಯಾನರ್ಜಿ, ಗೋಪೆನ್ ಚಕ್ರವರ್ತಿ, ಧರಣಿ ಗೋಸ್ವಾಮಿ, ರಾಧರಮಣ ಮಿತ್ರ, ಮತ್ತು ಇತರ ಕಮ್ಯುನಿಸ್ಟರು ಮತ್ತು ಕಾರ್ಮಿಕ ಮುಖಂಡರ ನೇತೃತ್ವದಲ್ಲಿ 30,000 ಕಾರ್ಮಿಕರು ಕಾಂಗ್ರೆಸ್ ಅಧಿವೇಶನದ ಸ್ಥಳದತ್ತ ಮುನ್ನಡೆದರು. 'ಜಗತ್ತಿನ ಕಾರ್ಮಿಕರೇ ಒಂದಾಗಿರಿ, 'ಲಾಂಗ್ ಲಿವ್ ಇಂಡಿಪೆಂಡೆಂಟ್ ಇಂಡಿಯನ್ ರಿಪಬ್ಲಿಕ್', 'ಸರಪಳಿಗಳನ್ನು ಹೊರತುಪಡಿಸಿ ನಮಗೆ ಏನೂ ಕಳೆದುಕೊಳ್ಳಬೇಕಾಗಿಲ್ಲ' ಎಂಬ ಕ್ರಾಂತಿಕಾರಿ ಘೋಷಣೆಗಳನ್ನು ಎತ್ತುತ್ತ ಪ್ರತಿಭಟನಾಕಾರರು ಸಮ್ಮೇಳನದ ಪಂಡಲ್‌ಗೆ ತಲುಪಿದರು. ಕಾಂಗ್ರೆಸ್ ಸ್ವಯಂಸೇವಕರ ಪ್ರತಿರೋಧವನ್ನು ನಿರ್ಲಕ್ಷಿಸಿ, ಸಾವಿರಾರು ಪ್ರತಿಭಟನಾಕಾರರು ಕಾನ್ಫರೆನ್ಸ್ ಪಂಡಲ್ ಪ್ರವೇಶಿಸಿ ಬೃಹತ್ ಸಭೆ ನಡೆಸಿದರು. ಸಭೆಯ ಅಧ್ಯಕ್ಷತೆಯನ್ನು ಜವಾಹರಲಾಲ್ ನೆಹರು ವಹಿಸಬೇಕಾಯಿತು ಮತ್ತು ಅದನ್ನು ಉದ್ದೇಶಿಸಿ ಬಂಕಿಮ್ ಮುಖರ್ಜಿ, ಆರ್.ಎಸ್. ನಿಂಬ್ಕರ್ ಮತ್ತು ಇತರ ಪ್ರಮುಖ ಕಾರ್ಮಿಕ ಮುಖಂಡರು ಮಾತನಾಡಿದರು. ಈ ಘಟನೆಯ ಪ್ರಮುಖ ಭಾಗವಾಗಿ ಅಂಗೀಕರಿಸಿದ ನಿರ್ಣಯವು ಹೀಗೆ ಹೇಳಿದೆ:

"ಎಲ್ಲಾ ಕೈಗಾರಿಕೆಗಳ ಕಾರ್ಮಿಕರು ಮತ್ತು ರೈತರ ಸಾಮೂಹಿಕ ಸಭೆಯು, ಸಂಪೂರ್ಣ ಸ್ವಾತಂತ್ರ್ಯವನ್ನು ಗಳಿಸುವವರೆಗೆ ಮತ್ತು ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯಿಂದ ಎಲ್ಲಾ ಶೋಷಣೆಗಳು ನಿಲ್ಲುವ ವರೆಗೂ ನಾವು ಕಾರ್ಮಿಕರು ಮತ್ತು ಭೂಮಿಯ ರೈತರು ವಿಶ್ರಾಂತಿ ಪಡೆಯುವುದಿಲ್ಲ ಎಂದು ಘೋಷಿಸುತ್ತೇವೆ. ಆ ಗುರಿಯನ್ನು ತಮ್ಮ ಮುಂದೆ ಇಟ್ಟುಕೊಳ್ಳಲು ಮತ್ತು ಆ ಉದ್ದೇಶಕ್ಕಾಗಿ ರಾಷ್ಟ್ರೀಯ ಶಕ್ತಿಗಳನ್ನು ಸಂಘಟಿಸಲು ನಾವು ರಾಷ್ಟ್ರೀಯ ಕಾಂಗ್ರೆಸ್‌ಗೆ ಕರೆ ನೀಡುತ್ತೇವೆ."

1928 ರಲ್ಲಿ ಕಾರ್ಮಿಕ ವರ್ಗವು ಭಾರತದ ಸಂಪೂರ್ಣ ಸ್ವಾತಂತ್ರ್ಯವನ್ನು ತನ್ನ ನಿಸ್ಸಂದಿಗ್ಧ ರಾಜಕೀಯ ಗುರಿ ಎಂದು ಘೋಷಿಸಿದಾಗ, ಬೂರ್ಜ್ವಾ ನೇತೃತ್ವದ ರಾಷ್ಟ್ರೀಯ ಕಾಂಗ್ರೆಸ್ ಗೆ ಆ ಗುರಿಯನ್ನು ಘೋಷಿಸುವಷ್ಟು ದೂರ ಹೋಗಲು ಸಾಧ್ಯವಾಗಲಿಲ್ಲ ಮತ್ತು ಅದಕ್ಕಾಗಿ ಅವರು ಇನ್ನೂ ಒಂದು ವರ್ಷ ಕಾಯಬೇಕಾಯಿತು ಎಂಬುದು ವಿಶೇಷ. .

ಸಾಮ್ರಾಜ್ಯಶಾಹಿಗಳು ದಾಳಿ ನಡೆಸಲು ಸಮಯ ಕಳೆದುಕೊಳ್ಳಲಿಲ್ಲ ಮತ್ತು ಅದೇ ಸಮಯದಲ್ಲಿ ವಿಭಜನೆ ಸಂಭವಿಸಿತು.

ಕಾರ್ಮಿಕ ವಿವಾದಗಳ ಶಾಸನ

ಸರಕರವು ಕಾರ್ಮಿಕ ವರ್ಗವನ್ನು ಎದುರಿಸಲು ಸರಕಾರದಿಂದ ಅಸವಾಗಿ ಜಾಣತನದಿಂದ ಕಾರ್ಮಿಕ ವಿವಾದ ಶಾಸನವನ್ನು ರೂಪಿಸಿತು. ರೈಲ್ವೆ ಮತ್ತು ಕೈಗಾರಿಕೆಗಳ ಇತರ ಪ್ರಮುಖ ವಿಭಾಗಗಳ ಕಾರ್ಮಿಕರ ತೀಕ್ಷ್ಣ ಮತ್ತು ಸುದೀರ್ಘ ಮುಷ್ಕರ ಹೋರಾಟಗಳಿಗೆ ಹೆದರಿ, ಸರ್ಕಾರವು 1928 ರ ಸೆಪ್ಟೆಂಬರ್‌ನಲ್ಲಿ ಆತುರದಿಂದ ಕೇಂದ್ರ ವಿಧಾನಸಭೆಯಲ್ಲಿ ಈ ಮಸೂದೆಯನ್ನು ಅಂಗೀಕರಿಸಿತು ಮತ್ತು ಏಪ್ರಿಲ್ 1929 ರಲ್ಲಿ ಜಾರಿಗೆ ತಂದಿತು.

ಕಾರ್ಮಿಕ ವಿರೋಧಿ, ಕೈಗಾರಿಕಾ ವಿವಾದ ಕಾಯ್ದೆ, 1928 ಮೂರು ಭಾಗಗಳನ್ನು ಒಳಗೊಂಡಿತ್ತು. ಮೊದಲನೆಯದು ವಿವಾದಗಳ ಇತ್ಯರ್ಥಕ್ಕಾಗಿ ಸಂಧಾನ ಮಂಡಳಿ ಮತ್ತು ವಿಚಾರಣಾ ನ್ಯಾಯಾಲಯಗಳ ರಚನೆಯನ್ನು ಒದಗಿಸಿತು, ಎರಡನೆಯ ಭಾಗವು 14 ದಿನಗಳ ಸೂಚನೆ ಇಲ್ಲದೆ ಸಾರ್ವಜನಿಕ ಉಪಯುಕ್ತತೆ ಸೇವೆಗಳಲ್ಲಿ ಮುಷ್ಕರ ಅಥವಾ ಬೀಗಮುದ್ರೆಗಳಿಗೆ ದಂಡ ಅಥವಾ ಜೈಲುವಾಸವನ್ನು ಅಥವಾ ಎರಡನ್ನೂ ವಿಧಿಸಿತು ಮತ್ತು ಮೂರನೆಯ ಭಾಗ ಬ್ರಿಟಿಷ್ ಕಾಯಿದೆಯ ಮಾದರಿಯಲ್ಲಿ ರೂಪಿಸಲಾಗಿದ್ದು, ಕಾರ್ಮಿಕರ ಸಾರ್ವತ್ರಿಕ ಮುಷ್ಕರ ಅಥವಾ ಸೌಹಾರ್ದ ಮುಷ್ಕರವನ್ನು ನಿಷೇಧಿಸಿತು, ಆದರೆ ಬ್ರಿಟಿಷರಿಗಿಂತ ಹೆಚ್ಚು ಕಠಿಣ ರೀತಿಯಲ್ಲಿ. ಈ ಕಾಯ್ದೆಯು 3 ತಿಂಗಳ ಜೈಲು ಶಿಕ್ಷೆ ಮತ್ತು ಅಕ್ರಮ ಮುಷ್ಕರಕ್ಕೆ ಸೇರ್ಪಡೆಗೊಂಡ ಅಥವಾ ಸೇರಿಕೊಂಡಿದ್ದಕ್ಕಾಗಿ 200 ರೂ.ದಂಡ ವಿಧಿಸಿತು. ಇದಲ್ಲದೆ, ಮುಷ್ಕರದಲ್ಲಿ ಪಾಲ್ಗೊಳ್ಳಲು ನಿರಾಕರಿಸುವವರಿಗೆ ರಕ್ಷಣೆ ನೀಡುವ ಮತ್ತು ಸಂಘದಿಂದ ಪರಿಹಾರವನ್ನು ಪಡೆಯಲು ಕಾನೂನುಬದ್ಧವಾಗಿ ಅನುವು ಮಾಡಿಕೊಡುವ ನಿಬಂಧನೆಗಳನ್ನು ಕಾಯ್ದೆಯಲ್ಲಿ ಮಾಡಲಾಗಿತ್ತು. ಈ ಕಾಯಿದೆಯು ಟ್ರೇಡ್ ಯೂನಿಯನ್ ಮತ್ತು ದೇಶದ ರಾಜಕೀಯ ಹೋರಾಟದಲ್ಲಿ ಕಾರ್ಮಿಕ ವರ್ಗದ ಸಾರ್ವತ್ರಿಕ ಮುಷ್ಕರವನ್ನು ನಿಷೇಧಿಸಿತು.

1928 ರಲ್ಲಿ ನಡೆದ ಎಐಟಿಯುಸಿಯ ಝರಿಯಾ ಅಧಿವೇಶನವು ಈ ಕಾಯ್ದೆಯನ್ನು ತೀವ್ರವಾಗಿ ಟೀಕಿಸಿತು.

ರಾಯಲ್ ಕಮಿಷನ್ ಆನ್ ಲೇಬರ್ ಇನ್ ಇಂಡಿಯಾ 1929

ಭಾರತದ ಸಮರಶೀಲ ಕಾರ್ಮಿಕ ಚಳವಳಿಯ ಮೇಲೆ ಈ ಸತತ ದಾಳಿಗಳ ನಂತರ ಜುಲೈ 1929 ರಲ್ಲಿ ಜೆ.ಎಚ್. ವಿಟ್ಲೆ ಅವರ ಅಧ್ಯಕ್ಷತೆಯಲ್ಲಿ 'ರಾಯಲ್ ಕಮಿಷನ್ ಆನ್ ಲೇಬರ್ ಇನ್ ಇಂಡಿಯಾ'ವನ್ನು ನೇಮಿಸಲಾಯಿತು. ಭಾರತದಲ್ಲಿನ ಕಾರ್ಮಿಕ ಪರಿಸ್ಥಿತಿಗಳ ಬಗ್ಗೆ ವಿಚಾರಿಸುವ ಮತ್ತು ಅದಕ್ಕೆ ತಕ್ಕಂತೆ ಶಿಫಾರಸುಗಳನ್ನು ಸಲ್ಲಿಸುವ ಕಾರ್ಯವನ್ನು ಆಯೋಗಕ್ಕೆ ವಹಿಸಲಾಯಿತು.. ಆಯೋಗದ ವರದಿ ಮತ್ತು ಶಿಫಾರಸುಗಳನ್ನು 14 ಮಾರ್ಚ್ 1931 ರಂದು ಪ್ರಕಟಿಸಲಾಯಿತು.

ಕಾರ್ಮಿಕ ಕಲ್ಯಾಣದ ಹೆಸರಿನಲ್ಲಿ ಸರ್ಕಾರದೊಂದಿಗೆ ಸಹಕಾರಕ್ಕಾಗಿ ಭಾರತದ ಕಾರ್ಮಿಕ ಚಳವಳಿಯ ಬಲಪಂಥೀಯ ಮುಖಂಡರಿಗೆ ಮುಕ್ತ ಆಮಿಷವೊಡ್ಡುವುದು ಮತ್ತು ಆಯೋಗ ನಡೆಸಲಿದ್ದ ಸುದೀರ್ಘ ವಿಚಾರಣೆಗಳಲ್ಲಿ ಅವರನ್ನು ಸಿಲುಕಿಸುವುದು ಸಾಮ್ರಾಜ್ಯಶಾಹಿಗಳ ಉದ್ದೇಶವಾಗಿತ್ತು. ಆಯೋಗಗಳು,

ಪುಟ 14 ನೋಡಿ

ಫೆಬ್ರುವರಿಯಲ್ಲಿ ಸಗಟು ಹಣದುಬ್ಬರ 4.17%, ಚಿಲ್ಲರೆ ಹಣದುಬ್ಬರ 5.03% ಕೈಗಾರಿಕಾ ಉತ್ಪಾದನೆಯಲ್ಲೂ ಇಳಿಕೆ

ನ್ಯೂಇಂಡಿಯಾ ನ್ಯೂಸ್

ಮಾರ್ಚ್ 12 ರಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್.ಎಸ್..ಒ.) ಬಿಡುಗಡೆ ಮಾಡಿರುವ ಅಂಕಿ-ಅಂಶಗಳ ಪ್ರಕಾರ ಬಳಕೆದಾರರ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರ ದರ ಫೆಬ್ರುವರಿಯಲ್ಲಿ 5.03ಶೇ. ಕ್ಕೆ ಏರಿದೆ. ಜನವರಿಯಲ್ಲಿ ಇದು 4.06ಶೇ. ಇತ್ತು.

ಮಾರ್ಚ್ 15 ರಂದು ಪ್ರಕಟವಾಗಿರುವ ಸಗಟು ಹಣದುಬ್ಬರವೂ ಈ ವರ್ಷ ಸತತ ಎರಡನೇ ತಿಂಗಳೂ ಏರಿ ಕಳೆದ 27 ತಿಂಗಳಲ್ಲೇ ಅತಿ ಹೆಚ್ಚಿನ ಮಟ್ಟಕ್ಕೆ ಏರಿದೆ. ಫೆಬ್ರುವರಿ ತಿಂಗಳಲ್ಲಿ ಇದು 4.17ಶೇ. ಆಗಿದೆ ಎಂದು ಪಿಟಿಐ ವರದಿ ಮಾಡಿದೆ.ಹಿಂದಿನ ತಿಂಗಳು ಜನವರಿಯಲ್ಲಿ ಇದು 2.03ಶೇ. ಇತ್ತು. ಕಳೆದ ವರ್ಷ ಫೆಬ್ರುವರಿಯಲ್ಲಿ ಇದು 2.26ಶೇ. ಇತ್ತು.


ಈ ತೀವ್ರಹಣದುಬ್ಬರ ಆಹಾರ, ಇಂಧನ ಮತ್ತು ವಿದ್ಯುತ್ ಬೆಲೆಯೇರಿಕೆಗಳಿಂದಾಗಿ ಆಗಿದೆ. ಇದು ಅನಿರೀಕ್ಷಿತವೇನಲ್ಲ. ದ್ವಿದಳ ಧಾನ್ಯಗಳ ಬೆಲೆಯೇರಿಕೆ 10.25ಶೇ. ವಾದರೆ, ಹಣ್ಣು-ಹಂಪಲುಗಳ ಬೆಲೆಯೇರಿಏಕ ಪ್ರಮಾಣ 9.48ಶೇ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳಂತೂ ಈಗ ಪ್ರತಿದಿನ ಕಾಣುತ್ತಿರುವಂತೆ 'ಚಾರಿತ್ರಿಕ ಎತ್ತರ'ಗಳನ್ನು ದಾಖಲಿಸುತ್ತಿವೆ.

ಮುಂದಿನ ಮೂರು ತಿಂಗಳಲ್ಲಿ ಸಗಟು ಹಣದುಬ್ಬರ ದರ ಇನ್ನೂ ಏರುವ ವ ಸಂಭವ ಇದೆ ಎಂದು ಐ.ಸಿ.ಆರ್.ಎ. ತಜ್ಞರು ಹೇಳಿರುವುದಾಗಿ ವರದಿಯಾಗಿದೆ.

ಅತ್ತ ಕೈಗಾರಿಕಾ ಉತ್ಪಾದನಾ ರಂಗದಲ್ಲೂ ನಿರಾಶಾದಾಯಕ ಸುದ್ದಿಯೇ. ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಜನವರಿ ತಿಂಗಳಲ್ಲಿ 1,6ಶೇ.ದಷ್ಟು ಸಂಕುಚನಗೊಂಡಿದೆ. ಅದರಲ್ಲೂ ತಯಾರಿಕಾ ವಲಯದಲ್ಲಿ ಈ ಸಂಕುಚನ 2ಶೇ.ದಷ್ಟು.

ಗಣಿಗಾರಿಕೆಯಲ್ಲಿ 3.7ಶೇ., ವಿದ್ಯುತ್ ಉತ್ಪಾದನೆಯಲ್ಲಿ 5.5ಶೇ. ಇಳಿಕೆಯಾಗಿದೆ. ಕಳೆದ ವರ್ಷ, ಅಂದರೆ ಜನವರಿ 2020ರಲ್ಲಿ ಐಐಪಿ 22ಶೇ. ಏರಿಕೆ ಕಂಡಿತ್ತು.

ಇದರ ಜೊತೆಗೇ, ಪ್ರಧಾನಿಗಳ ಅತ್ಯಂತ ಆಪ್ತ ಉದ್ಯಮಿ ಗೌತಮ ಅದಾನಿ ತನ್ನ ಸಂಪತ್ತನ್ನು ಹೆಚ್ಚಿಸಿಕೊಳ್ಳುವಲ್ಲಿ ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿಯೆನಿಸಿಕೊಂಡಿರುವ ಇನ್ನೊಬ್ಬ ಆಪ್ತರಾದ ಮುಕೇಶ್ ಅಂಬಾನಿಯವರನ್ನು ಮಾತ್ರವಲ್ಲ, ಜಗತ್ತಿನ ಇಬ್ಬರು ಅತ್ಯಂತ ಶ್ರೀಮಂತ ವ್ಯಕ್ತಿಗಳಾದ ಜೆಫ್ ಬೆಝೋಸ್ ಮತ್ತು ಎಲನ್ ಮಸ್ಕ್ ಅವರುಗಳನ್ನೂ ಹಿಂದಕ್ಕೆ ಹಾಕಿದ್ದಾರೆ ಎಂದು ವರದಿಯಾಗಿದೆ. 2021ರಲ್ಲಿ ಅಂಬಾನಿಯ ಸಂಪತ್ತಿನಲ್ಲಿ 8.1 ಬಿಲಿಯ ಡಾಲರ್ ಗಳಷ್ಟು ಏರಿಕೆಯಾಗಿದ್ದರೆ, ಅದಾನಿಯ ಸಂಪತ್ತಿನಲ್ಲಿ 16.2 ಬಿಲಿಯ ಡಾಲರ್‌ಗಳ ಹೆಚ್ಚಳವಾಗಿದೆ! (ಇಕನಾಮಿಕ್ ಟೈಮ್ಸ್, ಮಾರ್ಚ್ 12).



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ಆಂದೋಲನ

ಚುನಾವಣಾ ಬಾಂಡ್ ಹೊಸ ಮಾರಾಟಕ್ಕೆ ತಡೆ: ಅರ್ಜಿಯ ವಿಚಾರಣೆ ನಡೆಸಲು ಸುಪ್ರಿಂ ಕೋರ್ಟ್ ಒಪ್ಪಿಗೆ

ಪ್ರಸಕ್ತ ಚುನಾವಣೆಯ ಸಂದರ್ಭದಲ್ಲಿ ಚುನಾವಣಾ ಬಾಂಡ್‌ಗಳ ಇನ್ನೊಂದು ಕಂತಿನ ಮಾರಾಟಕ್ಕೆ ತಡೆ ಹಾಕಬೇಕು ಎಂಬ ಎ.ಡಿ.ಆರ್. (ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್- ಪ್ರಜಾಸತ್ತಾತ್ಮಕ ಸುಧಾರಣೆಗಳ ಸಂಘ) ಅರ್ಜಿಯ ವಿಚಾರಣೆ ನಡೆಸಲು ಸುಪ್ರಿಂ ಕೋರ್ಟ್ ಒಪ್ಪಿಕೊಂಡಿದೆ ಎಂದು ವರದಿಯಾಗಿದೆ.

ಕೇಂದ್ರ ಸರಕಾರ 2017ರಲ್ಲಿ ಈ ಯೋಜನೆಯನ್ನು ಮುಂದಿಟ್ಟಾಗಲೇ ಇದೊಂದು ರಾಜಕೀಯ ಪಕ್ಷಗಳಿಗೆ ಚುನಾವಣಾ ನಿಧಿ ಸಂಗ್ರಹಿಸುವ ಅತ್ಯಂತ ಅಪಾರದರ್ಶಕ ಸ್ಕೀಂ, ಇದನ್ನು ಹಣ ಮಸೂದೆಯಾಗಿ ಸಲ್ಲಿಸಿ ಸರಕಾರ ಪಾಸು ಮಾಡಿಸಿಕೊಂಡಿರುವುದು ಸರಿಯಲ್ಲ ಎಂದು ಎಡಿಆರ್ ಇದರ ಸಿಂಧುತ್ವವನ್ನು ಪ್ರಶ್ನಿಸಿ ಸುಪ್ರಿಂ ಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ಸಲ್ಲಿಸಿತ್ತು.

ಗಮನಾರ್ಹ ಸಂಗತಿಯೆಂದರೆ ಚುನಾವಣಾ ಆಯೋಗ ಮತ್ತು ಭಾರತೀಯ ರಿಝರ್ವ್ ಬ್ಯಾಂಕ್ ಇವರೆಡೂ ರಾಜಕೀಯ ಪಕ್ಷಗಳಿಗೆ ವಂತಿಗೆ ನೀಡುವ ಸಾಧನವಾಗಿ ಚುನಾವಣಾ ಬಾಂಡುಗಳನ್ನು ಪ್ರಕಟಿಸುವುದು ಸರಿಯಲ್ಲ ಎಂದು ಸಲಹೆ ನೀಡಿದ್ದವು.

ಆದರೂ ಜನವರಿ 2018ರಿಂದ ಇದು ಜಾರಿಗೆ ಬಂದರೂ ಸುಪ್ರಿಂ ಕೋರ್ಟ್ ಎಡಿಆರ್‌ನ ಅರ್ಜಿಯನ್ನು ವಿಚಾರಣೆಗೆ ತಗೊಳ್ಳಲಿಲ್ಲ. ಈ ಯೋಜನೆಯ ಅಡಿಯಲ್ಲಿ ಪ್ರತಿವರ್ಷ ಚುನಾವಣಾ ಬಾಂಡ್‌ಗಳನ್ನು ನೀಡುವ ಅವಕಾಶವಿದೆ. ಇದುವರೆಗೆ ಭಾರತೀಯ ಸ್ಟೇಟ್ ಬ್ಯಾಂಕ್ ಚುನಾವಣೆಗಳು ನಡೆಯುವ ಸಂದರ್ಭದಲ್ಲಿ ಹೊಸ ಬಾಂಡುಗಳ ಮಾರಾಟ ನಡೆಸಿದೆ. ಇಂತಹ ಸಂದರ್ಭಗಳಲ್ಲಿ ಎಡಿಆರ್ ಮಾರ್ಚ್ 2019 ರಲ್ಲಿ ಮತ್ತು ನವಂಬರ್ 2019ರಲ್ಲಿ ಈ ಸ್ಕೀಂ ನ್ನು ಪ್ರಶ್ನಿಸಿರುವ ಪಿಐಎಲ್ ಇತ್ಯರ್ಥವಾಗುವ ವರೆಗೆ ಹೊಸ ಬಾಂಡುಗಳನ್ನು ಮಾರಾಟ ಮಾಡದಂತೆ ತಡೆಯಬೇಕು ಎಂದು ಕೇಳಿತ್ತು. ಈ ನಡುವೆ ಎಪ್ರಿಲ್209ರಲ್ಲಿ ಸುಪ್ರಿಂ ಕೋರ್ಟ್ ರಾಜಕೀಯ ಪಕ್ಷಗಳು ಚುನಾವಣಾ ಬಾಂಡುಗಳ ಮೂಲಕ ಸಂಗ್ರಹಿಸಿದ ಮೊತ್ತಗಳ ವಿವರಗಳನ್ನು ಚುನಾವಣಾ ಆಯೋಗಕ್ಕೆ ಸೀಲಾದ ಕವರ್‌ಗಳಲ್ಲಿ ಸಲ್ಲಿಸಬೇಕು ಎಂದಿತ್ತು. ಆದರೆ ನಂತರ ಈ ಬಗ್ಗೆ ವಿಚಾರಣೆಯನ್ನು ನಡೆಸಿಲ್ಲ.

ಈ ನಡುವೆ ಆರ್‌ಟಿಐ ಮೂಲಕ ಸಂಗ್ರಹಿಸಿದ ಮಾಹಿತಿಗಳ ಪ್ರಕಾರ ಇದುವರೆಗೆ 6500 ಕೋಟಿ ರೂ.ಗಳ ಚುನಾವಣಾ ಬಾಂಡುಗಳ ಮಾರಾಟವಾಗಿದ್ದು ಇದರಲ್ಲಿ ಬಹುಪಾಲು. ಆಳುವ ಪಕ್ಷಕ್ಕೇ ಹೋಗಿದೆ ಎಂದು ಖಾತ್ರಿಯಾಗಿದೆ. ಈ ಮೂಲಕ ಈ ಸ್ಕಿಂಗೆ ಪ್ರಜಾಪ್ರಭುತ್ವವಾದಿಗಳ ಆಕ್ಷೇಪ ಸಾಬೀತಾಗಿದೆ.


ಈ ಹಿನ್ನೆಲೆಯಲ್ಲಿ ಸುಪಿಂ ಕೋರ್ಟ್ ಈ ಬಾರಿಯಾದರೂ ಎಡಿಆರ್‌ನ ಅರ್ಜಿಯ ವಿಚಾರಣೆಗೆ ಒಪ್ಪಿರುವುದು ಗಮನಾರ್ಹವಾಗಿದೆ.

3 ಕೋಟಿ ಪಡಿತರ ಕಾರ್ಡುಗಳು ರದ್ದಾಗಿವೆಯೆಂದರೆ ಇದೊಂದು ಗಂಭೀರ ಸಂಗತಿ" - ಸುಪ್ರಿಂ ಕೋರ್ಟ್

ಕೇಂದ್ರ ಸರಕಾರ 3 ಕೊಟಿ ಪಡಿತರ ಕಾರ್ಡುಗಳನ್ನು, ಅದರಲ್ಲೂ ಬಡವರು ಮತ್ತು ಬುಡಕಟ್ಟು ಜನಗಳ ಕಾರ್ಡುಗಳನ್ನು, ಅವನ್ನು ಆಧಾರ್‌ನೊಂದಿಗೆ ಜೋಡಿಸಿಲ್ಲ ಎಂಬ ಏಕೈಕ ಕಾರಣಕ್ಕೆ ರದ್ದು ಮಾಡಿರುವುದಾದರೆ ಅದೊಂದು ಅತ್ಯಂತ ಗಂಭೀರ ಸಂಗತಿ ಎಂದು ಮಾರ್ಚ್ 17ರಂದು ಈ ಕುರಿತ ಝಾರ್ಖಂಡ್‌ನ್ ಕೊಯ್ಲಿ ದೇವಿಯ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಸುಪ್ರಿಂ ಕೋರ್ಟ್ ಟಿಪ್ಪಣಿ ಮಾಡಿದೆ.

ಕೊಯ್ಲಿ ದೇವಿಯ 11 ವರ್ಷದ ಮಗಳು ಸಂತೋಷಿ ಕುಮಾರಿ 2017ರಲ್ಲಿ ಹಸಿವು ತಾಳಲಾರದೆ ಪ್ರಾಣ ನೀಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆಕೆಯ ಕುಟುಂಬದ ಪಡಿತರ ಚೀಟಿಯನ್ನು ಆಧಾರ ಜೋಡಣೆಯಿಲ್ಲವೆಂದು ರದ್ದು ಮಾಡಿದ್ದೇ ಇದಕ್ಕೆ ಕಾರಣ ಎಂದು ಹೇಳಲಾಗಿದೆ.

ಅರ್ಜಿದಾರರ ಪರ ವಕೀಲರಾದ ಕೊಲಿನ್ ಗೊಂಸಾಲ್ವೆಸ್, ಆಧಾರ್ ಮತ್ತು ಬಯೊಮೆಟ್ರಿಕ್ ಜೋಡಣೆಯನ್ನು ಕಡ್ಡಾಯಗೊಳಿಸಿದ್ದರಿಂದ ಸುಮಾರು 4 ಕೋಟಿ ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ ಎಂದು ಕೇಂದ್ರ ಸರಕಾರ ತಿಳಿಸಿರುವುದನ್ನು ನ್ಯಾಯಾಲಯದ ಗಮನಕ್ಕೆ ತರುತ್ತ ಸರಕಾರ ಇವೆಲ್ಲ ಬೋಗಸ್ ಕಾರ್ಡುಗಳು ಎಂದು ಸಲೀಸಾಗಿ ಹೇಳಿ ಬಿಟ್ಟಿದೆ, ಆದರೆ ಇದರಲ್ಲಿ ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಇಂಟರ್ನೆಟ್ ಸೇರಿದಂತೆ ಗುರುತಿಗೆ ಸಂಬಂಧಪಟ್ಟ ತಂತ್ರಜ್ಞಾನದ ಸಮಸ್ಯೆಗಳೇ ನಿಜವಾದ ಕಾರಣಗಳು, ಕೇವಲ ಇದರಿಂದಾಗಿಯೇ ಸುಮಾರು 3 ಕೋಟಿ ಕಾರ್ಡುಗಳು ಹೋಗಿ ಬಿಟ್ಟಿವೆ ಎಂಬುದನ್ನು ನೀವು ಊಹಿಸಬಲ್ಲಿರಾ ಎಂದು ಕೇಳಿದರು ಎಂದು ವರದಿಯಾಗಿದೆ.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ಆಂದೋಲನ

4 ವರ್ಷಗಳಲ್ಲಿ 405 ಶಾಸಕರ ಪಕ್ಷಾಂತರ: 45% ಬಿಜೆಪಿಗೆ

2016 ರಿಂದ 2020 ರ ನಡುವೆ 405 ಎಂ.ಎಲ್.ಎ.ಗಳು ಮತ್ತು 38 ಎಂ.ಪಿ.ಗಳು ಪಕ್ಷಾಂತರ ಮಾಡಿದ್ದಾರೆ. ಇವರಲ್ಲಿ 189 ಶಾಸಕರು, ಅಂದರೆ 44.9% ಮಂದಿ ಬಿಜೆಪಿ ಸೇರಿದ್ದಾರೆ. 16 ರಾಜ್ಯಸಭಾ ಸದಸ್ಯರಲ್ಲಿ 10 ಮಂದಿ ಬಿಜೆಪಿಗೆ ಪಕ್ಷಾಂತರ ಮಾಡಿದರು, ಅಂದರೆ 61.2 %. ಆದರೆ ಪಕ್ಷಾಂತರ ಮಾಡಿದ 12 ಲೋಕಸಭಾ ಸದಸ್ಯರಲ್ಲಿ ಐವರು ಬಿಜೆಪಿ ಬಿಟ್ಟರು, ಒಬ್ಬರು ಬೇರೆ ಪಕ್ಷದಿಂದ ಬಿಜೆಪಿ ಸೇರಿದರು.

ಇದು ಮಾರ್ಚ್ 11ರಂದು ಎ.ಡಿ.ಆರ್.(ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್- ಪ್ರಜಾಸತ್ತಾತ್ಮಕ ಸುಧಾರಣೆಗಳ ಸಂಘ) ಬಿಡುಗಡೆ ಮಾಡಿದ ಅಧ್ಯಯನದಲ್ಲಿ ಹೊರಬಿದ್ದಿರುವ ಕೆಲವು ಸಂಗತಿಗಳು.

ಪಕ್ಷಾಂತರ ಮಾಡಿ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಮತ್ತೆ ತಮ್ಮ ಹೊಸ ಪಕ್ಷದಿಂದ ಚುನಾವಣೆಗೆ/ಮರುಚುನಾವಣೆಗೆ ನಿಲ್ಲುವುದು ಈಗ ಕಾಣುತ್ತಿರುವ ಹೊಸ ಪ್ರವೃತ್ತಿ. ಹೀಗೆ ತಮ್ಮ ಹೊಸ ಪಕ್ಷದಿಂದ ಚುನಾವಣೆಗೆ ಸ್ಪರ್ಧಿಸಿದವರಲ್ಲಿ 225 ಮಂದಿ, ಅಂದರೆ 52%ದಷ್ಟು ಮತ್ತೆ ಗೆದ್ದು ಬಂದಿದ್ದಾರೆ, 48% ಮಂದಿ ಸೋತಿದ್ದಾರೆ.

ಗಮನಾರ್ಹ ಸಂಗತಿಯೆಂದರೆ ಮರುಚುನಾವಣೆಗಳಿಗೆ ನಿಂತ 49 ಪಕ್ಷಾಂತರಿಗಳಲ್ಲಿ 39 ಮಂದಿ ಗೆದ್ದು ಬಂದರು, ಅಂದರೆ 81%, ಆದರೆ ನಿಯಮಿತ ಚುನಾವಣೆಗಳಲ್ಲಿ ಸ್ಪರ್ಧಿಸಿದ 357 ಪಕ್ಷಾಂತರಿಗಳಲ್ಲಿ ಮತ್ತೆ ಗೆದ್ದು ಬಂದವರು 170, ಅಂದರೆ 48%. ಅಂದರೆ ಅರ್ಧಕ್ಕಿಂತ ಕಡಿಮೆ.

ಕರ್ನಾಟಕವಲ್ಲದೆ ಗೋವಾ, ಮಧ್ಯಪ್ರದೇಶ, ಮಣಿಪುರ, ಅರುಣಾಚಲ ಪ್ರದೇಶದ ಸರಕಾರಗಳು ಈ ಪಕ್ಷಾಂತರಗಳಿಂದಾಗಿ ಪತನಗೊಂಡು ಹೆಚ್ಚಿನ ಕಡೆಗಳಲ್ಲಿ ಬಿಜೆಪಿ ಯ , ಅಥವ ಅದು ಸೇರಿರುವ ಸರಕಾರಗಳು ಬಂದವು ಮತ್ತು ಚುನಾವಣೆಗಳಲ್ಲಿ ಯಾರೇ ಗೆಲ್ಲಲಿ, ಸರಕಾರ ಮಾತ್ರ ಬಿಜೆಪಿಯದ್ದೇ ಎಂಬ ಘೋಷಣೆ ಮೂಡಿ ಬಂದಿರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಪಕ್ಷಾಂತರ ಮಾಡಿದ 405 ಶಾಸಕರಲ್ಲಿ 170 (42%) ಕಾಂಗ್ರೆಸಿನಿಂದ ಆರಿಸಿ ಬಂದಿದ್ದವರು; 18 (ಅಂದರೆ 4.4.%) ಮಾತ್ರ ಬಿಜೆಪಿಯಿಂದ ಆರಿಸಿ ಬಂದವರು. ಕಾಂಗ್ರೆಸ್ ಸೇರಿದ ಪಕ್ಷಾಂತರಿಗಳ ಸಂಖ್ಯೆ 38 (9.4%) ಮಾತ್ರ.

ಕಳೆದ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಪಕ್ಷಾಂತರ ಮಾಡಿದ 12 ಸದಸ್ಯರಲ್ಲಿ ಎಲ್ಲರೂ ಸೋತರೆ, 16 ರಾಜ್ಯಸಭಾ ಸದಸ್ಯರಲ್ಲಿ ಎಲ್ಲರೂ ಗೆದ್ದಿದ್ದಾರೆ! ಇವರನ್ನು ಆರಿಸುವವರು ಶಾಸಕರು ತಾನೇ?

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಪಕ್ಷಾಂತರ ಮಾಡಿ ಚುನಾವಣೆಗಳಲ್ಲಿ ಸ್ಪರ್ಧಿಸಿದ ಎಂ.ಎಲ್.ಎ. ಮತ್ತು ಎಂ.ಪಿ.ಗಳ ಘೋಷಿತ ಆಸ್ತಿಗಳಲ್ಲಿ 39% ಏರಿಕೆಯಾಗಿದೆ!

ಒಟ್ಟಿನಲ್ಲಿ, ತಾವೊಂದು ಭಿನ್ನ ಸ್ವರೂಪದ ಪಕ್ಷ ಎನ್ನುತ್ತಿದ್ದವರ 'ಅಚ್ಛೇ ದಿನ್'ಗಳಲ್ಲಿ ಜನಗಳ ಸಾರ್ವಜನಿಕ ಹಿತಗಳಿಗಿಂತ ರಾಜಕಾರಣಿಗಳ ಖಾಸಗಿ ಹಿತಗಳು, ಹಣಬಲ ಮತ್ತು ಅಧಿಕಾರದಾಹದ ಕೈಮೇಲಾಗಿದೆ, ನಮ್ಮ ಸಂಸದೀಯ ಪ್ರಜಾಪ್ರಭುತ್ವದ ನೈತಿಕ ಮಟ್ಟ ಇಳಿಯುತ್ತಿದೆ ಎಂದು ಎ.ಡಿ.ಆರ್. ಟಿಪ್ಪಣಿ ಮಾಡಿದೆ.

ಕರ್ನಾಟಕದಲ್ಲಿ ಪಕ್ಷಾಂತರ ಮಾಡಿ, ಸರಕಾರ ಉರುಳಿಸಿ ಮಂತ್ರಿಗಿರಿ ಗಿಟ್ಟಿಸಿಕೊಂಡವರ ಸಿ.ಡಿ. ಪ್ರಕರಣದ ಸುತ್ತಮುತ್ತಲಿನ ಬೆಳವಣಿಗೆಗಳು ಇದಕ್ಕೊಂದು ಉದಾಹರಣೆ.



ಈ ಬಾರಿಯ ಬಿಜೆಪಿ ಸರಕಾರದ ರಚನೆಯನ್ನು ಸಾಧ್ಯಗೊಳಿಸಿದ ಪಕ್ಷಾಂತರಿಗಳ ಜೊತೆಗೆ ಮುಖ್ಯಮಂತ್ರಿಗಳು

ಮೋದಿ ಸರಕಾರದ ವಿತ್ತ ನೀತಿಯ ಫಜೀತಿ



ಸರ್ಕಾರದ ವಿತ್ತ ನೀತಿಯು ಅತ್ಯಂತ ಸರಳವಾಗಿದೆ: ಪೆಟ್ರೋ ಉತ್ಪನ್ನಗಳ ಮೇಲೆ ತೆರಿಗೆಗಳನ್ನು ಹೆಚ್ಚಿಸಿ ಆದಾಯವನ್ನು ಹೆಚ್ಚಿಸಿಕೊಳ್ಳುವುದು ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮಾರಾಟ ಮಾಡಿ ಆದಾಯವನ್ನು ಹೆಚ್ಚಿಸಿಕೊಳ್ಳುವುದು. ಈ ರೀತಿಯಲ್ಲಿ ಸಂಗ್ರಹಿಸಿದ ಎಲ್ಲ ಹಣವನ್ನೂ ಖರ್ಚು ಮಾಡಿ, ವಿತ್ತೀಯ ಕೊರತೆಯನ್ನು ಒಂದು ಮಿತಿಯೊಳಗೆ ಇಟ್ಟುಕೊಳ್ಳಲಾಗಿದೆ ಎಂದು ಬಿಂಬಿಸಿ ಜಾಗತಿಕ ಹಣಕಾಸು ಬಂಡವಾಳವನ್ನು ಓಲೈಸುವುದು. ಆದರೆ ಖಾಸಗೀಕರಣದ ಮಾರ್ಗವಾಗಿ ಈ ತನಕ ಹೆಚ್ಚಿನ ಹಣ ಬಂದಿಲ್ಲ. ಏಕೆಂದರೆ, ಕಾರ್ಪೊರೇಟ್‌ಗಳು ಇಂತಹ ಉದ್ದಿಮೆಗಳನ್ನು ಮಾರಾಟಕ್ಕಿಟ್ಟ ತಕ್ಷಣದಲ್ಲೇ ಖರೀದಿಸುವ ಆತುರ ತೋರಿಸುತ್ತಿಲ್ಲ. ಆದ್ದರಿಂದ ಪೆಟ್ರೋ ಉತ್ಪನ್ನಗಳ ಮೇಲಿನ ತೆರಿಗೆಗಳನ್ನು ಏರಿಸುವುದೇ ಸರಕಾರದ ಅತ್ಯಂತ ಸಾಮಾನ್ಯ ವಿಧಾನವಾಗಿದೆ. ಇವುಗಳು ಸರಕಾರ ಹೇಳುವಂತೆ ಕೇವಲ ಶ್ರೀಮಂತರ ಖಾಸಗಿ ಬಳಕೆಯ ಉತ್ಪನ್ನಗಳಷ್ಟೇ ಅಲ್ಲ. ಅವುಗಳನ್ನು ಅನೇಕಾನೇಕ ಸಾರ್ವಜನಿಕ ಉಪಯೋಗಗಳಿಗೆ ಬಳಸಲಾಗುತ್ತದೆ. ಆದ್ದರಿಂದ ಇಂತಹ ಏರಿಕೆಗಳಿಂದ ಕಿರು ಉತ್ಪಾದಕರು ಹಿಂಡಿ ಹಿಪ್ಪೆಯಾಗುತ್ತಾರೆ. ಬಡಜನರಿಗೆ ತೊಂದರೆಗಳು ಮತ್ತಷ್ಟು ಹೆಚ್ಚುತ್ತವೆ. ಇವೀಗ ಸರಕಾರದ ವಿತ್ತ ಫಜೀತಿಗಳು– ಇವು ಭಾರತದ ಅರ್ಥವ್ಯವಸ್ಥೆಗೆ ಭಾರಿ ಹಾನಿಯನ್ನು ಉಂಟುಮಾಡುತ್ತವೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಅಧಿಕ ವೆಚ್ಚಗಳನ್ನು ಕೈಗೊಳ್ಳುವ ಮೂಲಕ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವಂಥಹ ಒಂದು ವಿತ್ತ ನೀತಿಯನ್ನು ಬಿಜೆಪಿ ಸರ್ಕಾರವು ಹೊಂದಲು ಬಯಸುತ್ತದೆ. ಆದರೆ, ಈ ನಿಟ್ಟಿನಲ್ಲಿ ಹಣ ಹೊಂದಿಸಿಕೊಳ್ಳುವ ಬಗೆ ಯಾವುದು ಎಂಬುದು ಅದಕ್ಕೆ ಅರ್ಥವಾಗುತ್ತಿಲ್ಲ. ಏಕೆಂದರೆ, ಅತ್ತಿತ್ತ ದೃಷ್ಟಿ ಹರಿಸದಂತೆ ಕುದುರೆಯ ಕಣ್ಣಿಗೆ ಕಟ್ಟುವ ಕಣ್ತಡೆಯನ್ನು ಬಿಜೆಪಿ ಸರ್ಕಾರವು ಕಟ್ಟಿಕೊಂಡಿದೆ. ಸಾಲ ಮಾಡಿ ಹೆಚ್ಚು ಹೆಚ್ಚು ಹಣ ಖರ್ಚು ಮಾಡುವುದನ್ನು, ಅಂದರೆ ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಕ್ರಮವನ್ನು, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಸುತರಾಂ ಒಪ್ಪುವುದಿಲ್ಲ. ತನ್ನ ಅತಿರೇಕದ–ರಾಷ್ಟ್ರವಾದದ ಬಗ್ಗೆ ಎಷ್ಟೇ ಜೋರಾಗಿ ಪ್ರಚುರಪಡಿಸಿಕೊಂಡರೂ ಸಹ, ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಆಜ್ಞಾಪಿಸಿದ ನಿಯಮಗಳನ್ನು ಉಲ್ಲಂಘಿಸುವ ಪೌರುಷವನ್ನು ಅದು ಹೊಂದಿಲ್ಲ. ಹಾಗಾಗಿ, ಸಾಲ ಮಾಡುವ ಮೂಲಕ ಸರ್ಕಾರಿ ವೆಚ್ಚಗಳನ್ನು ಹೆಚ್ಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಅದೇ ಸಮಯದಲ್ಲಿ, ಬಂಡವಾಳಿಗರ ಮೇಲೆ ಸಂಪತ್ತಿನ ತೆರಿಗೆಯನ್ನಾಗಲಿ ಅಥವಾ ಅವರ ಲಾಭದ ಮೇಲೆ ಹೆಚ್ಚಿನ ತೆರಿಗೆಯನ್ನಾಗಲಿ ವಿಧಿಸುವ ಮನಸ್ಸೂ ಇಲ್ಲ. ಬಂಡವಾಳಿಗರಿಗೆ ಸಂಪೂರ್ಣ ತೆರಿಗೆ ರಿಯಾಯಿತಿ ಒದಗಿಸುವುದೇ ಅದರ ಪರಮ ಗುರಿ. ಅದು ಇದಕ್ಕೆ ಪ್ರತಿಯಾಗಿ, ಪಕ್ಷಕ್ಕೆ ಅಪಾರ "ನಿಧಿ" ಪಡೆಯುತ್ತದೆ. ಹೆಚ್ಚು ಹೆಚ್ಚು ಸಂಪನ್ಮೂಲಗಳನ್ನು ಬಂಡವಾಳಿಗರಿಗೆ ಸಮರ್ಪಿಸುವುದರಿಂದ ಅವರು ಹೂಡಿಕೆಯನ್ನು ಹೆಚ್ಚಿಸುತ್ತಾರೆ ಎಂಬುದು ಅದರ ನಂಬಿಕೆ.

ಈ ನಂಬಿಕೆಯು ಎರಡು ಸ್ಪಷ್ಟ ಕಾರಣಗಳಿಂದಾಗಿ ತಪ್ಪಾಗಿದೆ. ಮೊದಲನೆಯದು, ಬಂಡವಾಳಿಗರಿಗೆ ತೆರಿಗೆ ರಿಯಾಯಿತಿ ಕೊಡುವುದರಿಂದ, ತೆರಿಗೆ ಲೆಕ್ಕ ಹಾಕಿದ ನಂತರದ ಅವರಿಗೆ ಸಿಗುವ ಒಟ್ಟು ಲಾಭವೇನೂ ಹೆಚ್ಚುವುದಿಲ್ಲ. ಏಕೆಂದರೆ, ದುಡಿಮೆಗಾರರು ತಮ್ಮ ಆದಾಯದ ಅತಿ ಹೆಚ್ಚು ಭಾಗವನ್ನು ಖರ್ಚು ಮಾಡುತ್ತಾರೆ. ಆದರೆ, ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳದೆ ಬಂಡವಾಳಿಗರಿಗೆ ತೆರಿಗೆ ರಿಯಾಯಿತಿಗಳನ್ನು ಕೊಡುವ ಸಮಯದಲ್ಲೇ ಸರ್ಕಾರಿ ವೆಚ್ಚವನ್ನು ಅಷ್ಟೇ ಪ್ರಮಾಣದಲ್ಲಿ ಕಡಿತಗೊಳಿಸುವುದರಿಂದ, ಬಂಡವಾಳಿಗರಿಗೆ ತೆರಿಗೆ–ನಂತರದ ಲಾಭವು ಹೆಚ್ಚುವುದಿಲ್ಲ. ಅಂದರೆ, ಸರ್ಕಾರದ ವೆಚ್ಚಗಳ ಕಡಿತವು ಬೇಡಿಕೆಯ ಇಳಿಕೆಯಲ್ಲಿ ಪರಿಣಮಿಸಿ, ಬಂಡವಾಳಿಗರ ಲಾಭವೂ ಇಳಿಯುತ್ತದೆ. ಅಂದರೆ, ಬಂಡವಾಳಿಗರಿಗೆ ಕೊಟ್ಟ ತೆರಿಗೆ ರಿಯಾಯಿತಿಯು ಅವರ ತೆರಿಗೆ ನಂತರದ ಲಾಭಗಳನ್ನು ಪ್ರತಿತೋಲನ ಮಾಡುತ್ತದೆ. ಅಂದರೆ, ತೆರಿಗೆ ರಿಯಾಯ್ತಿ ಪಡೆದಷ್ಟು ಮೊತ್ತಕ್ಕೆ ಸಮನಾಗಿ ಅವರ ಲಾಭಗಳು ಇಳಿಕೆಯಾಗುತ್ತವೆ.

ಇಲ್ಲಿ ಒಂದು ಸರಳ ಸೂತ್ರವಿದೆ: ದುಡಿಯುವ ಜನರು ತಮ್ಮ ಇಡೀ ಆದಾಯವನ್ನು ಬಳಕೆ ಮಾಡಿದಾಗ, ಬಂಡವಾಳಗಾರರ ತೆರಿಗೆ–ನಂತರದ ಲಾಭಗಳು, ಅವರು ಹೂಡಿಕೆ ಮಾಡಿದ ಬಂಡವಾಳದ ಮೊತ್ತ, ಅವರ ಉಪಭೋಗದ ಬಳಕೆ ಮತ್ತು ವಿತ್ತೀಯ ಕೊರತೆಗಳ ಮೊತ್ತಕ್ಕೆ ಸಮಾನವಾಗಿರುತ್ತದೆ ಎಂಬುದನ್ನು ವಿದೇಶ ವ್ಯಾಪಾರದ ಲೆಕ್ಕದಿಂದ ಪಡೆಯಬಹುದು. ಬಂಡವಾಳಗಾರರ ಹೂಡಿಕೆಯು ಮೊದಲೇ ನಿರ್ಧರಿತವಾಗಿರುತ್ತದೆ. ಇದ್ದಕ್ಕಿದ್ದಂತೆ ಅದು ಬದಲಾಗುವುದಿಲ್ಲ. ಅವರ ಬಳಕೆಯೂ ಸಹ ಇದ್ದಕ್ಕಿದ್ದಂತೆ ಬದಲಾಗುವುದಿಲ್ಲ. ಹಾಗಾಗಿ, ವಿತ್ತೀಯ ಕೊರತೆಯು ಹೆಚ್ಚಾದಾಗ ಮಾತ್ರ ತೆರಿಗೆ–ನಂತರದ ಲಾಭಗಳು ಹೆಚ್ಚಾಗುತ್ತವೆ. ಆದ್ದರಿಂದ, ತೆರಿಗೆ ರಿಯಾಯಿತಿಗಳು ಮತ್ತು ಅದಕ್ಕೆ ಸಮಾನವಾದ ವೆಚ್ಚಗಳ ಇಳಿಕೆಗಳು ತೆರಿಗೆ–ನಂತರದ ಲಾಭಗಳನ್ನು ಒಟ್ಟಾರೆಯಾಗಿ ಹೆಚ್ಚಿಸುವುದಿಲ್ಲ.

ನಿಜ, ಬಂಡವಾಳಗಾರರ ಪೈಕಿ ಸರ್ಕಾರದ ಕೃಪೆಗೆ ಪಾತ್ರರಾದ ಕೆಲವು ಕಾರ್ಪೊರೇಟ್‌ಗಳ ತೆರಿಗೆ–ನಂತರದ ಲಾಭಗಳು ಹೆಚ್ಚಾಗಬಹುದು. ಆದರೆ, ಉಳಿದ ಕಾರ್ಪೊರೇಟ್‌ಗಳ ಲಾಭಗಳು ಕಡಿಮೆಯಾಗಲೇ ಬೇಕಾಗುತ್ತದೆ. ಒಂದು ವೇಳೆ ತೆರಿಗೆ–ನಂತರ ಹೆಚ್ಚು ಲಾಭ ಪಡೆದ ಬಂಡವಾಳಗಾರರು ಹೆಚ್ಚು ಬಂಡವಾಳ ಹೂಡುತ್ತಾರೆ ಎಂದು ಭಾವಿಸಿದರೂ ಸಹ, ಒಟ್ಟಾರೆ ಹೂಡಿಕೆಯು ಹೆಚ್ಚಾಗುವುದಿಲ್ಲ.

ಎರಡನೆಯದು, ತೆರಿಗೆ–ನಂತರ ಹೆಚ್ಚು ಲಾಭ ಪಡೆದ ಬಂಡವಾಳಗಾರರು ಹೆಚ್ಚು ಬಂಡವಾಳ ಹೂಡುತ್ತಾರೆ ಎಂದು ನಾವು ಈಗ ತಾನೇ ಮಾಡಿದ ಊಹೆಯು ಆಧಾರವಿಲ್ಲದ್ದು. ಹೆಚ್ಚು ಲಾಭಗಳಿಸಿದ ಕಾರಣದಿಂದ ಬಂಡವಾಳಗಾರರು ಹೆಚ್ಚು ಹೂಡಿಕೆ ಮಾಡುವುದಿಲ್ಲ. ಬೇಡಿಕೆ ಹೆಚ್ಚಾದಾಗ ಮಾತ್ರ, ಸ್ಥಾಪಿತ ಸಾಮರ್ಥ್ಯವನ್ನು ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಅವರು ಹೆಚ್ಚು ಬಂಡವಾಳ ಹೂಡುತ್ತಾರೆ. ಹಾಗಾಗಿ, ಎಷ್ಟೇ ತೆರಿಗೆ ರಿಯಾಯಿತಿಗಳನ್ನು ಕೊಟ್ಟರೂ ಸಹ, ಬೇಡಿಕೆ ಹೆಚ್ಚದಿದ್ದರೆ, ಹೂಡಿಕೆ ಮಾಡುವ ಪ್ರಲೋಭನೆಗೆ ಅವರು ಒಳಗಾಗುವುದಿಲ್ಲ. ತೆರಿಗೆ ರಿಯಾಯಿತಿಗಳು ನಿರ್ದಿಷ್ಟ ಕಾರ್ಪೊರೇಟ್‌ಗಳಿಗೆ ಬಹಳ ಅನುಕೂಲವಾಗುತ್ತವೆ, ನಿಜ. ಆದರೆ, ಅವರು ತೆರಿಗೆ ರಿಯಾಯಿತಿಗಳನ್ನು ಸುಮ್ಮನೇ ಜೇಬಿಗಿಳಿಸುತ್ತಾರೆಯೇ ವಿನಃ, ಸಾಮರ್ಥ್ಯ ವೃದ್ಧಿಸುವ ಗೋಜಿಗೆ ಹೋಗುವುದೇ ಇಲ್ಲ.


ಆದರೆ, ತೆರಿಗೆ ರಿಯಾಯಿತಿಗಳು ಬಂಡವಾಳ ಹೂಡಿಕೆಯನ್ನು ಉತ್ತೇಜಿಸುತ್ತವೆ ಎಂಬ ಈ ತಪ್ಪು ಹೇಳಿಕೆಯನ್ನು ಬಂಡವಾಳಗಾರರಿಗೆ ಕೊಡುವ ರಿಯಾಯಿತಿಗಳನ್ನು ಸಮರ್ಥಿಸಿ ಕೊಳ್ಳುವ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತದೆ. ಬಂಡವಾಳಗಾರರ ಮೇಲೆ ಹೆಚ್ಚಿನ ತೆರಿಗೆಗಳನ್ನು ವಿಧಿಸಲಾಗದ ಮತ್ತು ವಿತ್ತೀಯ ಕೊರತೆಯನ್ನು ಹಿಗ್ಗಿಸಲು ಅಸಮರ್ಥವಾಗಿರುವ ಬಿಜೆಪಿ ಸರ್ಕಾರವು ಪರೋಕ್ಷ ತೆರಿಗೆಗಳನ್ನು ಹೆಚ್ಚಿಸುವ ಮೂಲಕ ಸರ್ಕಾರದ ವೆಚ್ಚಗಳನ್ನು ಹೆಚ್ಚಿಸುವ ಕ್ರಮ ಕೈಗೊಂಡಿದೆ. ದುಡಿಯುವ ಜನರ ಮೇಲೆ ನೇರ ತೆರಿಗೆಗಳನ್ನು ವಿಧಿಸುವುದು ಕಷ್ಟವಾಗುತ್ತದೆ (ಏಕೆಂದರೆ ಅವರ ಸಂಖ್ಯೆಯು ಬಹಳ ದೊಡ್ಡದಿದೆ) ಮತ್ತು ಆ ಮೂಲಕ ಬಂದ ಆದಾಯವನ್ನು ಸರ್ಕಾರದ ವೆಚ್ಚಗಳಿಗೆ ಒದಗಿಸಿಕೊಂಡರೆ, ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸಲು ಸಹಾಯವಾಗುವುದಿಲ್ಲ: ಬೇಡಿಕೆಯನ್ನು ಉತ್ತೇಜಿಸುವ ಸಲುವಾಗಿ ಸರ್ಕಾರದ ವೆಚ್ಚಗಳನ್ನು ಈ ರೀತಿಯಲ್ಲಿ ಹೆಚ್ಚಿಸಿಕೊಂಡಾಗ, ದುಡಿಯುವ ಜನರ ಬಳಕೆಯ ಪ್ರಮಾಣವು ಇಳಿಕೆಯಾಗಿ ಬೇಡಿಕೆಯನ್ನು ಕುಗ್ಗಿಸುತ್ತದೆ ಎಂಬುದನ್ನು ಬಿಜೆಪಿ ಸರ್ಕಾರವು ಬಹುಶಃ ಅರ್ಥಮಾಡಿಕೊಂಡಿದೆ ಎಂದು ತೋರುತ್ತದೆ. ಆದ್ದರಿಂದ, ಸರ್ಕಾರವು ಪರೋಕ್ಷ ತೆರಿಗೆಯನ್ನು ಇನ್ನಷ್ಟು ಹೆಚ್ಚಾಗಿ ಅವಲಂಬಿಸಿದೆ.

ಸರಕು ಮತ್ತು ಸೇವಾ ತೆರಿಗೆ ಪದ್ಧತಿಗೆ ಹೊರಳಿದ ನಂತರ, ಬಹುತೇಕ ಸರಕುಗಳ ಮೇಲಿನ ಪರೋಕ್ಷ ತೆರಿಗೆ ದರಗಳನ್ನು ಜಿಎಸ್‌ಟಿ ಕೌನ್ಸಿಲ್ ನಿರ್ಧರಿಸುತ್ತದೆ. ಹಾಗಾಗಿ, ಕೇಂದ್ರ ಸರ್ಕಾರದ ಕೈಗಳು, ಸ್ವಲ್ಪ ಮಟ್ಟಿಗೆ, ಕಟ್ಟಿಹಾಕಲ್ಪಟ್ಟಿವೆ. ಆದರೆ, ಪೆಟ್ರೋ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಹಾಗಾಗಿ, ಹಾಲು ಕರೆಯುವ ಈ ಹಸುವಿನ (ಪೆಟ್ರೋ ಉತ್ಪನ್ನಗಳು) ಹಾಲನ್ನು ಕೇಂದ್ರ ಸರ್ಕಾರವು ಬೇಕಾದಾಗ ಹಿಂಡುತ್ತದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಪರೋಕ್ಷ ತೆರಿಗೆ ದರಗಳನ್ನು ಪದೇ ಪದೇ ಹೆಚ್ಚಿಸಿ, ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಿದೆ.

ಸರ್ಕಾರದ ವಿತ್ತ ನೀತಿಯು ಅತ್ಯಂತ ಸರಳವಾಗಿದೆ: ಪೆಟ್ರೋ ಉತ್ಪನ್ನಗಳ ಮೇಲೆ ತೆರಿಗೆಗಳನ್ನು ಹೆಚ್ಚಿಸಿ ಆದಾಯವನ್ನು ಹೆಚ್ಚಿಸಿಕೊಳ್ಳುವುದು ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮಾರಾಟ ಮಾಡಿ ಆದಾಯವನ್ನು ಹೆಚ್ಚಿಸಿಕೊಳ್ಳುವುದು. (ಈ ಕ್ರಮವನ್ನು ಕುಟುಂಬದ ಬೆಳ್ಳಿ–ಬಂಗಾರದ ಮಾರಾಟ ಎಂದು ಕೆಲವರು ಕರೆಯುತ್ತಾರೆ). ಈ ರೀತಿಯಲ್ಲಿ ಸಂಗ್ರಹಿಸಿದ ಎಲ್ಲ ಹಣವನ್ನೂ ಖರ್ಚು ಮಾಡಿ, ವಿತ್ತೀಯ ಕೊರತೆಯನ್ನು ಒಂದು ಮಿತಿಯೊಳಗೆ ಇಟ್ಟುಕೊಳ್ಳಲಾಗಿದೆ ಎಂದು ಬಿಂಬಿಸಿ ಜಾಗತಿಕ ಹಣಕಾಸು ಬಂಡವಾಳವನ್ನು ಓಲೈಸುವ ಕೆಲಸ ನಡೆಯುತ್ತಿದೆ. ಆದರೆ, ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣದ ಮಾರ್ಗವಾಗಿ ಈ ತನಕ ಹೆಚ್ಚಿನ ಹಣ ಬಂದಿಲ್ಲ. ಏಕೆಂದರೆ, ಕಾರ್ಪೊರೇಟ್‌ಗಳು ಇಂತಹ ಉದ್ದಿಮೆಗಳನ್ನು ಮಾರಾಟಕ್ಕಿಟ್ಟ ತಕ್ಷಣದಲ್ಲೇ ಖರೀದಿಸುವ ಆತುರ ತೋರಿಸುತ್ತಿಲ್ಲ. ಏಕೆಂದರೆ, ಸ್ವಲ್ಪ ಸಮಯ ತಡೆದರೆ ಇನ್ನೂ ಒಳ್ಳೆಯ ಚೌಕಾಸಿ ವ್ಯವಹಾರ ಕುದುರಿಸಬಹುದು ಮತ್ತು ಅತಿ ಕಡಿಮೆ ಬೆಲೆಯಲ್ಲಿ ಒಳ್ಳೆಯ ಬೆಲೆಬಾಳುವ ಉದ್ದಿಮೆಯನ್ನೇ ಎತ್ತಿ ಬುಟ್ಟಿಗೆ ಹಾಕಿಕೊಳ್ಳಬಹುದು ಎಂಬುದು ಕಾರ್ಪೊರೇಟ್‌ಗಳ ಲೆಕ್ಕಾಚಾರ. ಹಾಗಾಗಿ, ಪೆಟ್ರೋ ಉತ್ಪನ್ನಗಳ ಮೇಲಿನ ತೆರಿಗೆಗಳೇ ಈವರೆಗೆ ಆದಾಯವನ್ನು ಕ್ರೋಢೀಕರಿಸಿಕೊಳ್ಳುವ ಅತ್ಯಂತ ಸಾಮಾನ್ಯ ವಿಧಾನವಾಗಿದೆ ಮತ್ತು ಈ ಮೂಲಕ ಗಳಿಸಿದ ಆದಾಯವನ್ನು ಬಳಸಿ ಹೆಚ್ಚಿನ ವೆಚ್ಚಗಳನ್ನು ಕೈಗೊಂಡು ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಬಹುದು ಎಂದು ಸರ್ಕಾರ ಭಾವಿಸಿದೆ.

ಇಂತಹ ಯೋಜನೆಯನ್ನು ಕಾರ್ಯಗತ ಗೊಳಿಸುವಲ್ಲಿ ಎರಡು ಮಿತಿಗಳು ಎದುರಾಗುತ್ತವೆ. ಮೊದಲನೆಯದು, ಜನರ ಮೇಲೆ ಹೇರಲಾಗುವ ಭಾರಿ ಹೊರೆಯ ಅಂಶದ ಹೊರತಾಗಿಯೂ, ಸರ್ಕಾರದ ವೆಚ್ಚವನ್ನು ಹಿಗ್ಗಿಸಲು ಈ ಏಕಮಾತ್ರ ಮೂಲದಿಂದ ಬರುವ ಆದಾಯವು ಸಾಕಾಗುವುದಿಲ್ಲ. ಉದಾಹರಣೆಗೆ, ಪ್ರಸಕ್ತ ವರ್ಷದ ಬಜೆಟ್‌ನಲ್ಲಿ, ಸಾಂಕ್ರಾಮಿಕ ಪೀಡಿತ 2020–21ರ ವರ್ಷದ (ಪರಿಷ್ಕೃತ ಅಂದಾಜಿನ ಪ್ರಕಾರ) ಸರ್ಕಾರದ ಒಟ್ಟು ಸಂಖ್ಯಾತ್ಮಕ ವೆಚ್ಚಗಳು ಶೇ. ಒಂದಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಏರಿಕೆಯಾಗುತ್ತವೆ ಎಂದು ನಿರೀಕ್ಷಿಸಲಾಗಿದೆ. ಅಂದರೆ, ನೈಜ ಅರ್ಥದಲ್ಲಿ ಅಂದರೆ, ಹಣದುಬ್ಬರಕ್ಕೆ ಹೊಂದಿಸಿದ ಲೆಕ್ಕದಲ್ಲಿ, ಸರ್ಕಾರದ ವೆಚ್ಚಗಳು ಕುಸಿದಿವೆ ಎಂದಾಗುತ್ತದೆ. ಸರ್ಕಾರಿ ವೆಚ್ಚಗಳು ಕಡಿಮೆಯಾಗುವ ನಿರೀಕ್ಷೆ ಇರುವಾಗ, ಅದರಲ್ಲೂ ವಿಶೇಷವಾಗಿ ಬೇಡಿಕೆಯ ಅಭಾವದ ಕಾರಣದಿಂದ ಬಂಡವಾಳಗಾರರು ಹೂಡಿಕೆಯನ್ನು ಹೆಚ್ಚಿಸಲೊಲ್ಲದಿರುವಾಗ, ಒಟ್ಟು ಬಳಕೆಯು ಕುಗ್ಗಿ, ಸರ್ಕಾರದ ಆದಾಯವೂ ಇಳಿಯುತ್ತದೆ. ಹಾಗಾಗಿ, ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಸಾಧ್ಯತೆಗಳು ಕ್ಷೀಣಿಸುತ್ತವೆ ಎಂಬುದು ಸ್ಪಷ್ಟವಾಗುತ್ತದೆ.

ಎರಡನೆಯ ಅಂಶವು ಇನ್ನೂ ಹೆಚ್ಚು ಮಹತ್ವದ್ದು. ಪರೋಕ್ಷ ತೆರಿಗೆ ಆದಾಯವನ್ನು ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳಲಾಗಿದೆಯೋ ಅಷ್ಟೇ ಪ್ರಮಾಣದಲ್ಲಿ ಸರ್ಕಾರದ ವೆಚ್ಚಗಳನ್ನು ಹೆಚ್ಚಿಸಿಕೊಂಡರೆ ಒಟ್ಟಾರೆ ಬೇಡಿಕೆ ಹೆಚ್ಚುತ್ತದೆ ಮತ್ತು ಬೇಡಿಕೆಯ ಹೆಚ್ಚಳದಿಂದ ಉತ್ಪಾದನೆ ಮತ್ತು ಉದ್ಯೋಗಗಳೂ ಹೆಚ್ಚುತ್ತವೆ ಎಂಬುದೂ ಸಹ ಒಂದು ತಪ್ಪು ನಂಬಿಕೆ. ಏಕೆಂದರೆ, ವೇತನದಾರರು ಕೊಳ್ಳಬಹುದಾದ ವಸ್ತುಗಳ(wage goods) ಮೇಲೆ ಪರೋಕ್ಷ ತೆರಿಗೆ ಹೇರುವ ಕ್ರಮವೂ ಸಹ ವೇತನದ ಮೇಲೆ ನೇರ ತೆರಿಗೆ ಹೇರುವುದಕ್ಕೆ ಸಮಾನವೇ ಆಗುತ್ತದೆ ಮತ್ತು ಬೇಡಿಕೆಯನ್ನೂ ಸಹ ಕುಗ್ಗಿಸುತ್ತದೆ. ಮತ್ತು, ಸರ್ಕಾರದ ವೆಚ್ಚಗಳ ಹೆಚ್ಚಳದ ಪರಿಣಾಮವನ್ನು ಪ್ರತಿತೋಲನ ಮಾಡುತ್ತದೆ. ಅಂದರೆ, ಸರ್ಕಾರದ ಹೆಚ್ಚಿಸಿಕೊಂಡ ವೆಚ್ಚಗಳು ಒಟ್ಟಾರೆ ಬೇಡಿಕೆಯನ್ನು ಕುಗ್ಗಿಸುವಂತಾಗುತ್ತದೆ. ಮತ್ತೊಂದೆಡೆ, ಹೂಡಿಕೆಯ ಸರಕುಗಳು(investment goods) ಮತ್ತು ಬಂಡವಾಳಗಾರರು ಬಳಸುವ ವಸ್ತುಗಳ ಮೇಲೆ ಪರೋಕ್ಷ ತೆರಿಗೆ ಹೇರಿದರೆ, ಒಟ್ಟಾರೆ ಬೇಡಿಕೆಯನ್ನು ವಿಸ್ತರಿಸಬಹುದು. ಏಕೆಂದರೆ, ಬಂಡವಾಳಗಾರರು



ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಅರ್ಥ ವ್ಯವಸ್ಥೆಯಲ್ಲಿ ಬೇಡಿಕೆಗಳು ತೀವ್ರ ಮಿತಿಗಳಿಗೆ ಒಳಗಾಗಿದ್ದರೂ ಸಹ, ಇತ್ತೀಚಿನ ದಿನಗಳಲ್ಲಿ ಸರಕು-ಸಾಮಗ್ರಿಗಳ ಬೆಲೆಗಳ ಏರಿಕೆಗೆ ಇರುವ ಒಂದು ಮುಖ್ಯ ಕಾರಣವೆಂದರೆ, ಪೆಟ್ರೋ-ಬೆಲೆಗಳ ಏರಿಕೆಯ ಕಾರಣದಿಂದ ಅವುಗಳ ಮೂಲ ಬೆಲೆ/ವೆಚ್ಚಗಳಿಗೆ ಸೇರ್ಪಡೆಯಾದ ಹೆಚ್ಚುವರಿ ವೆಚ್ಚಗಳು. ಆದ್ದರಿಂದ, ಇತ್ತೀಚಿನ ದಿನಗಳಲ್ಲಿ ಉಂಟಾಗಿರುವ ಹಣದುಬ್ಬರಕ್ಕೆ ಸರ್ಕಾರದ ನೀತಿಯೇ ನೇರ ಹೊಣೆ. ಈ ಪರಿಸ್ಥಿತಿಯಲ್ಲಿ, ರಿಸರ್ವ್ ಬ್ಯಾಂಕ್ ಅನುಸರಿಸುವ ತಂತ್ರವೆಂದರೆ, ಬಡ್ಡಿ ದರದ ಏರಿಕೆ. ಪರಿಣಾಮವಾಗಿ, ಬ್ಯಾಂಕ್ ಸಾಲಗಳು ತುಟ್ಟಿಯಾಗುತ್ತವೆ. ದುಬಾರಿ ಸಾಲಗಳ ಕಾರಣದಿಂದಾಗಿ, ಕಿರು ಉತ್ಪಾದನಾ ವಲಯದ ಉತ್ಪನ್ನಗಳ ಬೆಲೆಗಳು ಏರಿಕೆಯಾಗುತ್ತವೆ. ಅವುಗಳನ್ನು ಕೊಳ್ಳುವಷ್ಟು ಹಣ ಜನರ ಬಳಿ ಇಲ್ಲ. ಹಾಗಾಗಿ, ಕಿರು ಉತ್ಪಾದನಾ ವಲಯವು ನೆಲಕಚ್ಚುತ್ತದೆ. ರೈತರೂ ಸೇರಿದಂತೆ ಕಿರು ಉತ್ಪಾದಕರು ಹಿಂಡಿ ಹಿಪ್ಪೆಯಾಗುತ್ತಾರೆ.

ಪುಟ 14 ನೋಡಿ

...ಕಾರ್ಮಿಕ ಚಳುವಳಿಯಲ್ಲಿ ವಿಭಜನೆ



ಪುಟ 11 ರಿಂದ

ಸಮಿತಿಗಳು ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಿಗೆ ಸೇರಲು ಈ ಬಲಪಂಥೀಯ ನಾಯಕತ್ವದ ತೀವ್ರ ಆಸಕ್ತಿಯು ಬಗ್ಗೆ ಸಾಮ್ರಾಜ್ಯಶಾಹಿಗಳಿಗೆ ಚೆನ್ನಾಗಿ ತಿಳಿದಿತ್ತು ಮತ್ತು ಆದ್ದರಿಂದ ಜಾಣತನದಿಂದ ಅವರು ಚಮನ್ ಲಾಲ್ ಮತ್ತು ಎನ್. ಎಂ. ಜೋಶಿ ಅವರನ್ನು ಈ ಆಯೋಗದ ಸದಸ್ಯರನ್ನಾಗಿ ನಾಮಕರಣ ಮಾಡಿದರು.

ಭಾರತದಲ್ಲಿ ಕಾರ್ಮಿಕರ ಕುರಿತಾದ ಈ ರಾಯಲ್ ಕಮಿಷನ್ ವಾಸ್ತವವಾಗಿ ಎಐಟಿಯುಸಿ ಯ ನಾಯಕತ್ವದ ಬಲಪಂಥೀಯ ಮತ್ತು ಎಡಪಂಥೀಯರ ನಡುವಿನ ಭಿನ್ನಾಭಿಪ್ರಾಯದ ವಸ್ತುವಾಗಿ ಮಾರ್ಪಟ್ಟಿತು ಮತ್ತು ಈ ಎರಡು ವಿಭಾಗಗಳ ನಡುವೆ ಉದ್ಭವಿಸಿದ ಪ್ರಚಂಡ ವಿವಾದವು ಅಂತಿಮವಾಗಿ ಎಐಟಿಯುಸಿಯಲ್ಲಿನ ವಿಭಜನೆಗೆ ಮುಖ್ಯ ಕಾರಣಗಳಲ್ಲಿ ಒಂದಾಗಿದೆ.

ಎಐಟಿಯುಸಿಯಲ್ಲಿ ಮೊದಲ ವಿಭಜನೆ :

ಇಂಡಿಯನ್ ಟ್ರೇಡ್ ಯೂನಿಯನ್ ಫೆಡರೇಶನ್ ರಚನೆ

1929 ರ ನವೆಂಬರ್ 28–30 ರಂದು ನಾಗ್ಪುರದಲ್ಲಿ ನಡೆದ ಎಐಟಿಯುಸಿ ಯ ಹತ್ತನೇ ಅಧಿವೇಶನದಲ್ಲಿ ಅಂತಿಮವಾಗಿ ಇದು ಭಾರತದ ಕಾರ್ಮಿಕರ ಪ್ರಧಾನ ರಾಷ್ಟ್ರಮಟ್ಟದ ಸಂಘಟನೆಯಲ್ಲಿ ವಿಭಜನೆಗೆ ಕಾರಣವಾಯಿತು.

ಮೀರತ್ ಪಿತೂರಿ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ, ಕಮ್ಯುನಿಸ್ಟರು ಮತ್ತು ಸಮರಶೀಲ ಕಾರ್ಮಿಕ ನಾಯಕತ್ವದ ಹೆಚ್ಚಿನ ವಿಭಾಗವನ್ನು ಸಕ್ರಿಯ ರಂಗದಿಂದ ಹೊರಗಿಟ್ಟ ಸಮಯದಲ್ಲಿ ಈ ಅಧಿವೇಶನ ನಡೆದಿರುವುದು ಗಮನಾರ್ಹವಾಗಿದೆ.

ಎಐಟಿಯುಸಿ ಅಧಿವೇಶನದಿಂದ ಹೊರನಡೆದ ನಂತರ, ಕೆಲವು ವಿಭಾಗಗಳು 1929 ರ ಡಿಸೆಂಬರ್ 1 ರಂದು ಪ್ರತ್ಯೇಕ ಸಭೆ ನಡೆಸಿ ತಾತ್ಕಾಲಿಕವಾಗಿ ಇಂಡಿಯನ್ ಟ್ರೇಡ್ ಯೂನಿಯನ್ ಫೆಡರೇಶನ್ ಎಂಬ ಹೊಸ ಸಂಘಟನೆಯನ್ನು ರಚಿಸಲು ನಿರ್ಧರಿಸಿದರು. ಈ ಉದ್ದೇಶಕ್ಕಾಗಿ ಸಭೆ ವಿ.ವಿ.ಗಿರಿ ಅವರ ಅಧ್ಯಕ್ಷತೆಯಲ್ಲಿ ತಾತ್ಕಾಲಿಕ ಸಮಿತಿಯನ್ನು ನೇಮಿಸಿತು ಮತ್ತು ಮೂರು ತಿಂಗಳಲ್ಲಿ ಸಮಾವೇಶವನ್ನು ಕರೆಯಲು ನಿರ್ಧರಿಸಿತು. ಹೊಸ ಸಂಘಟನೆಯ ಪ್ರಸ್ತಾವಿತ ಸಂವಿಧಾನವು 'ಕಮ್ಯುನಿಸ್ಟ್ ಪ್ರವೃತ್ತಿಯನ್ನು ಹೊಂದಿರುವ ವ್ಯಕ್ತಿಗಳು ಮತ್ತು ಸಂಘಗಳನ್ನು ಹೊರತುಪಡಿಸಿ', ಸಂಯೋಜನೆ ಹೊಂದುವ ಅಥವಾ ಪ್ರತಿನಿಧಿಸುವ ಎನ್ನುವ ಒಂದು ಷರತ್ತು ಹೊಂದಿರಬೇಕು ಎಂದು ನಿರ್ಧರಿಸಲಾಯಿತು.

ಎಐಟಿಯುಸಿಯಲ್ಲಿ ಎರಡನೇ ವಿಭಜನೆ

– ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ರಚನೆ

ಎಐಟಿಯುಸಿಯೊಳಗೆ ಪ್ರಬುದ್ಧವಾಗಿದ್ದ ವಿಭಿನ್ನ ಪ್ರತಿರೋಧಕ ಸೈದ್ಧಾಂತಿಕ ಪ್ರವೃತ್ತಿಗಳ ಸಂಘರ್ಷವು ಎಐಟಿಯುಸಿಯ ಹತ್ತನೇ ಅಧಿವೇಶನದಲ್ಲಿ ಸಂಭವಿಸಿದ ವಿಭಜನೆಯೊಂದಿಗೆ ಕೊನೆಗೊಳ್ಳಲಿಲ್ಲ. ಬಲ–ಸುಧಾರಣಾವಾದಿಗಳು ಈಗ ಹೊರಗಿದ್ದರೂ, ಎಐಟಿಯುಸಿಯೊಳಗಿನ ಇತರ ಎದುರಾಳಿ ಪ್ರವೃತ್ತಿಗಳು ನಿಲ್ಲುವ ಬದಲು ಸಂಘರ್ಷವನ್ನು ಮುಂದುವರೆಸಿದವು. ಕ್ರಾಂತಿಕಾರಿ ರಾಜಕೀಯ ಸಿದ್ಧಾಂತವನ್ನು ನಂಬಿದ್ದ ನಾಯಕತ್ವವು ಅಂತಿಮವಾಗಿ ಎಐಟಿಯುಸಿಯ ಹೊರಗೆ ಬಂದು ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅನ್ನು ರಚಿಸಬೇಕಾಯಿತು.

ವಿಭಜನೆಗಳು: ಒಂದು ವಿಮರ್ಶಾತ್ಮಕ ವಿಶ್ಲೇಷಣೆ

ಈ ವಿಭಜನೆಗಳ ನಂತರ ಭಾರತದ ಕಾರ್ಮಿಕ ಚಳವಳಿ ಮೂರು ರಾಷ್ಟ್ರೀಯ ಕೇಂದ್ರಗಳಾಗಿ ವಿಂಗಡಣೆಯಾಯಿತು.–ಇದು ಚಳುವಳಿ ಅದುವರೆಗೆ ಎದುರಿಸದ, ಅತ್ಯಂತ ಅಪಾಯಕಾರಿ ಹಿನ್ನಡೆಯಾಗಿತ್ತು. ಅಭೂತಪೂರ್ವ ಬಿಕ್ಕಟ್ಟು ವಿಶ್ವ ಬಂಡವಾಳಶಾಹಿ ಆರ್ಥಿಕತೆಯನ್ನು ಬೆಚ್ಚಿಬೀಳಿಸಿದಾಗ ಮತ್ತು ಅದರ ನಡುಕವು ಅದಾಗಲೇ ಭಾರತದ ವಸಾಹತುಶಾಹಿ ಆರ್ಥಿಕತೆಯನ್ನು ವಿನಾಶದ ಅಂಚಿಗೆ ತಳ್ಳಿದಾಗ ಸಂಘಟನೆಯ ಮತ್ತು ಚಳುವಳಿಯ ಈ ಭಿನ್ನಾಭಿಪ್ರಾಯ ಮತು ್ತವಿಭಜನೆ ಇತಿಹಾಸದ ಅಂತಹ ಒಂದು ಹಂತದಲ್ಲಿ ಕಾರ್ಮಿಕ ವರ್ಗಕ್ಕೆ ಎದುರಾಯಿತು. ಮತ್ತು ಈ ಅನಿರೀಕ್ಷಿತ ಬಿಕ್ಕಟ್ಟು ತನ್ನೊಡನೆ ತಂದಿದ್ದ ನಿರುದ್ಯೋಗ, ರಿಟ್ರೆಂಚ್‌ಮೆಂಟ್, ವೇತನ ಕಡಿತ ಮತ್ತು ಬೆಲೆ ಏರಿಕೆ ಇಡೀ ಕಾರ್ಮಿಕರ ಜೀವನವನ್ನು ಹಾಳುಮಾಡುವ ಬೆದರಿಕೆಯನ್ನು ತಂದಿತು. ಆದ್ದರಿಂದ ಪರಿಸ್ಥಿತಿಯು ಈ ದಾಳಿಯ ವಿರುದ್ಧ ಕಠಿಣ ಪ್ರತಿರೋಧವನ್ನು ವ್ಯಕ್ತಪಡಿಸುವುದಕ್ಕಾಗಿ ಕಾರ್ಮಿಕ ವರ್ಗದ ಉನ್ನತ ಮಟ್ಟದ ಸಂಘಟನಾತ್ಮಕ ಐಕ್ಯತೆಗೆ ಒತ್ತಾಯಿಸಿತು. ಆದರೆ ವಿಷಾದದ ಸಂಗತಿಯೆಂದರೆ, ಈ ನಿರ್ಣಾಯಕ ಕ್ಷಣದಲ್ಲಿ ಕಾರ್ಮಿಕ ವರ್ಗದ ಐಕ್ಯತೆಯು ಕೆಟ್ಟದಾಗಿ ಛಿದ್ರಗೊಂಡಿತ್ತು.

ಮೋದಿ ಸರಕಾರದ ವಿತ್ತ ನೀತಿಯ ಫಜೀತಿ

ಪುಟ 13 ರಿಂದ

ಅಂಥಹ ಸರಕು/ವಸ್ತುಗಳನ್ನು ತಮ್ಮ ಬಳಿ ಇರುವ ಹಣದಿಂದ ಅಥವಾ ಬ್ಯಾಂಕುಗಳಿಂದ ಸಾಲ ಪಡೆಯುವ ಮೂಲಕ ಕೊಳ್ಳುತ್ತಾರೆ. ಅದೇ ಸಮಯದಲ್ಲಿ, ಸರ್ಕಾರದ ವೆಚ್ಚಗಳು ಬೇಡಿಕೆಯನ್ನು ಮತ್ತು ಉತ್ಪಾದನೆಯನ್ನು ಹೆಚ್ಚಿಸುತ್ತವೆ.

ಈಗ ಪ್ರಶ್ನೆ ಏನೆಂದರೆ: ಪೆಟ್ರೋ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕದ ಹೆಚ್ಚಳವನ್ನು ವೇತನದಾರರು ಕೊಳ್ಳುವ ವಸ್ತುಗಳ ಮೇಲಿನ ಪರೋಕ್ಷ ತೆರಿಗೆಯ ಹೆಚ್ಚಳವೆಂದು ವರ್ಗೀಕರಿಸಬೇಕೆ? ಅಥವಾ, ಐಷಾರಾಮಿ ಸರಕುಗಳ ಮೇಲಿನ ತೆರಿಗೆಯ ಹೆಚ್ಚಳವೆಂದು ವರ್ಗೀಕರಿಸಬೇಕೆ? ಪೆಟ್ರೋಲ್ ಮತ್ತು ಡೀಸೆಲ್‌ಅನ್ನು ಕಾರು ಮತ್ತು ಇತರ ಮೋಟಾರು ವಾಹನಗಳನ್ನು ಹೊಂದಿರುವವರು ಬಳಸುತ್ತಾರೆ. ಆದ್ದರಿಂದ, ಅವುಗಳ ಬೆಲೆ ಏರಿಕೆಯು ಬಡವರಿಗೆ ನೋವುಂಟು ಮಾಡಲಾರದು ಎಂಬುದಾಗಿ ಸರ್ಕಾರವು ಸೋಗುಹಾಕುತ್ತದೆ.

ಆದರೆ, ಸರ್ಕಾರದ ಈ ಧೋರಣೆಯು ಸಂಪೂರ್ಣವಾಗಿ ತಪ್ಪು. ಏಕೆಂದರೆ, ವಿದ್ಯುತ್ ಮತ್ತು ಕಲ್ಲಿದ್ದಲು ರೀತಿಯ ಇಂಧನವೇ ಆಗಿರುವ ಪೆಟ್ರೋ ಉತ್ಪನ್ನಗಳು "ಸಾರ್ವತ್ರಿಕ ಮಧ್ಯವರ್ತಿಗಳು". ಅವುಗಳನ್ನು ಕೇವಲ ಖಾಸಗಿ ಬಳಕೆಗಾಗಿ ಮಾತ್ರವಲ್ಲ, ಅನೇಕಾನೇಕ ಉಪಯೋಗಳಿಗೆ ಬಳಸಲಾಗುತ್ತದೆ: ಸಾರ್ವಜನಿಕ ಸಾರಿಗೆ, ಸರಕು ಸಾಗಣೆ, ಮತ್ತು ಮನುಷ್ಯನ ಮೂಲಭೂತ ಅವಶ್ಯಕತೆಯಾದ ಆಹಾರಧಾನ್ಯಗಳ ಉತ್ಪಾದನೆಗೆ ಒಂದು ಲಾಗುವಾಡಾಗಿ ಪೆಟ್ರೋ ಉತ್ಪನ್ನಗಳು ಬಳಕೆಯಾಗುತ್ತವೆ. ಸರಕು–ಸಾಮಗ್ರಿಗಳ ಉತ್ಪಾದನೆಯ ಯಾವುದೇ ಹಂತದಲ್ಲಿ ಲಾಗುವಾಡುಗಳ ವೆಚ್ಚದ ಹೆಚ್ಚಳವು ಸರಕು–ಸಾಮಗ್ರಿಗಳ ಅಂತಿಮ ಬೆಲೆಗಳ ಹೆಚ್ಚಳದಲ್ಲಿ ಕಾಣಿಸಿಕೊಳ್ಳಲೇಬೇಕು. ಪೆಟ್ರೋ–ಉತ್ಪನ್ನಗಳ ಬೆಲೆ ಏರಿಕೆಯಿಂದಾಗಿ, ಬಡಜನರ ಬಳಕೆಯ ವಸ್ತುಗಳೂ ಸೇರಿದಂತೆ ಎಲ್ಲಾ ರೀತಿಯ ಸರಕು–ಸಾಮಗ್ರಿಗಳ ಅಂತಿಮ ಬೆಲೆಗಳು ಅನಿವಾರ್ಯವಾಗಿ ಏರುತ್ತವೆ. ಒಂದು ವೇಳೆ ಅಂತಿಮ ಬೆಲೆಗಳಲ್ಲಿ ಏರಿಕೆ ಕಂಡುಬಂದಿಲ್ಲ ಎಂದರೆ, ರೈತರು ಮತ್ತು ಇತರ ಕಿರು ಉತ್ಪಾದಕರು ಲಾಗುವಾಡುಗಳ ವೆಚ್ಚದ ಹೆಚ್ಚಳವನ್ನು ತಮ್ಮ ಲಾಭದಲ್ಲಿ ಕೊರೆ ಮಾಡಿಕೊಂಡಿರುತ್ತಾರೆ ಎಂದರ್ಥ. ಅಂದರೆ, ರೈತರು ಮತ್ತು ಇತರ ಕಿರು ಉತ್ಪಾದಕರು ಹಿಂಡಿ ಹಿಪ್ಪೆಯಾಗುತ್ತಾರೆ. ಈ ರೀತಿಯಲ್ಲಿ, ಸಾರ್ವತ್ರಿಕ ಮಧ್ಯವರ್ತಿ ಸರಕು–ಸಾಮಗ್ರಿಗಳ ಬೆಲೆ ಏರಿಕೆಯು ಬಡವರನ್ನು ಒಂದಲ್ಲ ಒಂದು ರೀತಿಯಲ್ಲಿ ಘಾಸಿಗೊಳಿಸುತ್ತದೆ.

ಇಲ್ಲಿ ಇನ್ನೂ ಒಂದು ಅಂಶವಿದೆ. ಅರ್ಥ ವ್ಯವಸ್ಥೆಯಲ್ಲಿ ಬೇಡಿಕೆಗಳು ತೀವ್ರ ಮಿತಿಗಳಿಗೆ ಒಳಗಾಗಿದ್ದರೂ ಸಹ, ಇತ್ತೀಚಿನ ದಿನಗಳಲ್ಲಿ ಸರಕು–ಸಾಮಗ್ರಿಗಳ ಬೆಲೆಗಳ ಏರಿಕೆಗೆ ಇರುವ ಒಂದು ಮುಖ್ಯ ಕಾರಣವೆಂದರೆ, ಪೆಟ್ರೋ–ಬೆಲೆಗಳ ಏರಿಕೆಯ ಕಾರಣದಿಂದ ಅವುಗಳ ಮೂಲ ಬೆಲೆ/ವೆಚ್ಚಗಳಿಗೆ ಸೇರ್ಪಡೆಯಾದ ಒಂದು ನಿರ್ದಿಷ್ಟ ಲಾಭಾಂಶದ ಪರಿಣಾಮಗಳು (cost-plus effects). ಆದ್ದರಿಂದ, ಇತ್ತೀಚಿನ ದಿನಗಳಲ್ಲಿ ಉಂಟಾಗಿರುವ ಹಣದುಬ್ಬರಕ್ಕೆ ಸರ್ಕಾರದ ನೀತಿಯೇ ನೇರ ಹೊಣೆ. ಈ ಪರಿಸ್ಥಿತಿಯಲ್ಲಿ, ರಿಸರ್ವ್ ಬ್ಯಾಂಕ್ ಅನುಸರಿಸುವ ತಂತ್ರವೆಂದರೆ, ಬಡ್ಡಿ ದರದ ಏರಿಕೆ. ಪರಿಣಾಮವಾಗಿ, ಬ್ಯಾಂಕ್ ಸಾಲಗಳು ತುಟ್ಟಿಯಾಗುತ್ತವೆ. ದುಬಾರಿ ಸಾಲಗಳ ಕಾರಣದಿಂದಾಗಿ, ಕಿರು ಉತ್ಪಾದನಾ ವಲಯದ ಉತ್ಪನ್ನಗಳ ಬೆಲೆಗಳು ಏರಿಕೆಯಾಗುತ್ತವೆ. ಅವುಗಳನ್ನು ಕೊಳ್ಳುವಷ್ಟು ಹಣ ಜನರ ಬಳಿ ಇಲ್ಲ. ಹಾಗಾಗಿ, ಕಿರು ಉತ್ಪಾದನಾ ವಲಯವು ನೆಲಕಚ್ಚುತ್ತದೆ. ಉತ್ಪಾದಕರು ಹಿಂಡಿ ಹಿಪ್ಪೆಯಾಗುತ್ತಾರೆ. ಬಡಜನರಿಗೆ ತೊಂದರೆಗಳು ಮತ್ತಷ್ಟು ಹೆಚ್ಚುತ್ತವೆ. ಈ ರೀತಿಯಲ್ಲಿ ಸರಕಾರದ ವಿತ್ತ ಫಜೀತಿಗಳು ಭಾರತದ ಅರ್ಥವ್ಯವಸ್ಥೆಗೆ ಭಾರಿ ಹಾನಿಯನ್ನು ಉಂಟುಮಾಡುತ್ತವೆ.

ದೆಹಲಿ ರೈತ ಬಂಡಾಯ ಕಣದಲ್ಲಿ ಎರಡು ದಿನಗಳ ಒಕ್ಕಲು........

ಪುಟ 6 ರಿಂದ

ಸ್ಥಳದಲ್ಲಿಯೇ ಊಟ, ತಿಂಡಿ, ಚಾ ವ್ಯವಸ್ಥೆ ಇರುತ್ತದೆ. ಈ ಬಗ್ಗೆ ಮಕ್ಕಳನ್ನು ಕೇಳಿದಾಗ ನಮಗೆ ಈ ಶಾಲೆ ತುಂಬಾ ಪ್ರಯೋಜನಕಾರಿಯಾಗಿದೆ ಎನ್ನುವ ಉತ್ತರವನ್ನು ಖುಷಿ ಖುಷಿಯಾಗಿ ನೀಡುತ್ತಾ ಊಟದ ಮನೆಯತ್ತ ಓಡುತ್ತಾ ಸಾಗಿದರು.

ನಿಜ......
ಎದೆಗೆ ಬಿದ್ದ ಅಕ್ಷರ
ಭೂಮಿಯಲ್ಲಿ ಭಿತ್ತಿದ ಬೀಜ
ಒಂದಲ್ಲ ಒಂದು ದಿನ
ಮೊಳಕೆ ಹೊಡೆಯುತ್ತವೆ ಎನ್ನುವ
ದೇವನೂರು ಮಹಾದೇವ ಅವರ ಮಾತು ಇಲ್ಲಿ
ಫಲ ನೀಡುತ್ತದೆ.

ಪ್ರತಿ ಹೋರಾಟದ ಕಣವೂ ಒಂದೊಂದು ಬೆಂಕಿಯ ಕುಲುಮೆಯೇ. ಅಂತಹ ಕುಲುಮೆಯಲ್ಲೇ ಒಡಮೂಡಿದ ಮೂರ್ತಿಗಳು ಸಮಾಜಕ್ಕೆ ಬೆಳಕ ನೀಡುತ್ತಲೇ ಬಂದಿವೆ. ಇದು ಇತಿಹಾಸ ನಮಗೆ ಕಲಿಸಿದ ಪಾಠ. ಈ ಹೋರಾಟಗಳನ್ನು ಮುನ್ನಡೆಸುವ ಅತಿ ಪ್ರಮುಖವಾದ ಪ್ರೇರಕ ಶಕ್ತಿಗಳು ಸಿಖ್ ಧರ್ಮದ ಗುರುದ್ವಾರಗಳ ನೇತೃತ್ವದಲ್ಲಿರುವ ಗುರುದ್ವಾರ ಪ್ರಬಂಧಕ ಸಮಿತಿಗಳು. ಇವು ದಾಸೋಹದ ಕೇಂದ್ರಗಳು ಮತ್ತು ಸೇವೆಗೆ ಎತ್ತಿದ ಕೈಗಳು. ಇಲ್ಲಿ ಹೋರಾಟನಿರತ ರೈತರಿಗೆ ಅಲ್ಲಿಗೆ ಆಗಮಿಸುವ ಪ್ರತಿಯೊಬ್ಬರಿಗೂ ನಿರಂತರ ದಾಸೋಹ ಕೇಂದ್ರಗಳನ್ನು, ಇವುಗಳು ನಡೆಸುತ್ತಿವೆ. ಈ ಸಮಿತಿಗಳ ನೂರಾರು ಜನ ಸ್ವಯಂ ಸೇವಕರು ಇಡೀ ಪರಿಸರವನ್ನು ಸ್ವಚ್ಚಗೊಳಿಸುವುದು ಸೇರಿ ಎಲ್ಲಾ ಕರ್ತವ್ಯಗಳನ್ನು ಯಾವ ಮುಜುಗರ ಮತ್ತು ಅಳುಕಿಲ್ಲದೆ ಅತ್ಯಂತ ಹೆಮ್ಮೆ ಮತ್ತು ಶ್ರದ್ದೆಯಿಂದ ನಡೆಸುತ್ತಿರುವುದು ಮತ್ತು ಮಹಿಳೆಯರು ಮತು ಇಡೀ ಕುಟುಂಬದ ಯುವಕರು ನಿರಂತವಾಗಿ ಎಲ್ಲಾ ರೀತಿಯ ಕಾಯಕಯೋಗಿಗಳಾಗಿ ತೊಡಗಿಸಿಕೊಂಡಿರುವುದು ಈ ಚಳವಳಿ ಯಶಸ್ಸಿನ ಹಿಂದಿರುವ ಪ್ರಮುಖ ಅಂಶಗಳು. ಇದಲ್ಲದೇ ಅಲ್ಲದೆ ದೇಶದ ಉದ್ದಗಲಕ್ಕೂ ನೆರವಿನ ಹಸ್ತ ಮತ್ತು ಬೆಂಬಲಗಳು ಭರಪೂರವಾಗಿ ಹರಿದು ಬರುತ್ತಲೇ ಇವೆ.

ಹೀಗಾಗಿ ಈ ಹೋರಾಟ ವರ್ಷಗಟ್ಟಲೇ ಆದರೂ ಸೈ ಮುಂದುವರೆಯುತ್ತದೆ ಮತ್ತು ಅಂತಿಮವಾಗಿ ಗೆಲವು ಸಾಧಿಸುತ್ತದೆ ಎನ್ನುವುದು ಹೋರಾಟಗಾರರ ಒಂದು ದೃಢವಾದ ನಂಬಿಕೆ. ಇಂತಹದೊಂದು ಸ್ಫೂರ್ತಿದಾಯಕ ರೈತ ಬಂಡಾಯ ಕಣದಲ್ಲಿ ಎರಡು ದಿನಗಳ ನಮ್ಮಯ ಒಕ್ಕಲುತನ ಎಂದೆಂದಿಗೂ ಮರೆಯಲಾರದ ಚಿತ್ತಗಳಾಗಿ ಉಳಿಯಲಿವೆ.

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1.	Place of Publication	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
2.	Periodicity of Publication	:	weekly
3.	Printer's Name	:	G.N.NAGARAJ
	(Whether Citizen of India? If Foreigner, State the Country of Origin)	:	Indian
4.	Address	:	No. 12, 18th Cross, Sampangirama Nagar, Bangalore 560027
5.	Editor`s Name	:	G.V.Sriramareddy
	(Whether Citizen of India? If Foreigner, State the Country of Origin)	:	Indian
	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)

I G.N.NAGARAJ, here by declare that the particulars given above are true to the best of my knowledge and belief.

Date : March 20, 2021
Bangalore

Sd/-
G.N.NAGARAJ
Publisher

ಅಮೆರಿಕದಲ್ಲಿ ರೈತರಿಗೆ ಭಾರೀ ಸಬ್ಸಿಡಿಗಳ ಕುರಿತು ಕೇಳಿದ್ದೇವೆ. ಅಲ್ಲಿ ರೈತರಿದ್ದಾರಾ? ರೈತ ಆತ್ಮಹತ್ಯೆಗಳಿವೆಯೇ? ನಾಲ್ಕು ದಶಕಗಳ ಹಿಂದೆ ಇಂದಿನ ನವ-ಉದಾರವಾದದ ಪಿತಾಮಹ ಎನ್ನಿಸಿಕೊಳ್ಳುವ ಅಮೆರಿಕದ ಅಧ್ಯಕ್ಷ ರೇಗನ್ ಕೃಷಿಯನ್ನು ಬಕಾಸುರ ಕೃಷಿ ಕಂಪನಿಗಳಿಗೆ ತೆರೆದದ್ದರ ಪರಿಣಾಮ ಏನಾಯಿತು? ಇಂತಹ ಹಲವು ಪ್ರಶ್ನೆಗಳನ್ನು ಎಬ್ಬಿಸಿ ಉತ್ತರಿಸುವ ಈ ವರದಿಯನ್ನು ಬರೆದಿದ್ದು ಅಮೆರಿಕದ ಲಾಸ್ ಏಂಜೆಲಿಸ್ ನಲ್ಲಿ ನೆಲೆಸಿರುವ ಮಾಜಿ ನಾಸಾ ವಿಜ್ಞಾನಿ ಮತ್ತು ರಾಷ್ಟ್ರೀಯ ಪ್ರಶಸ್ತಿ ಪಡೆದ ಪ್ರಸಿದ್ಧ ಫಿಲಂ 'ಚಿತ್ತಗಾಂಗ್" ನಿರ್ದೇಶಕ-ನಿರ್ಮಾಪಕ. ಆತ ಅಮೆರಿಕದ ಉದ್ದಗಲಕ್ಕೂ 10 ಸಾವಿರ ಕಿ.ಮೀ. ಪ್ರವಾಸ ಮಾಡಿ ಬರೆದ ವರದಿ. ಮೋದಿ ಸರಕಾರ ಅಮೆರಿಕದ ಕೃಷಿ ನೀತಿಗಳನ್ನು ಕಾಪಿ ಮಾಡುತ್ತಿರುವ ಈ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತವಾದ ವರದಿ.

ಅಮೆರಿಕದ ರೈತಾಪಿ ಕೃಷಿಯನ್ನು ನುಂಗಿ ನೊಣೆದ 'ಬಕಾಸುರ' ಕೃಷಿ ಕಂಪನಿಗಳು



ಮೂಲ: ಬೇದಬ್ರತ ಪೈನ್
ಅನುವಾದ: ಕೃಷ್ಣೇಗೌಡ ಟಿ.ಎಲ್

(ಕೃಪೆ: ಟೈಮ್ಸ್ ಆಫ್ ಇಂಡಿಯಾ)

ಅಮೆರಿಕದ ಆತ್ಮದೊಳಗೆ ತಿರುಗಾಡಿ ಬರುವ 10 ಸಾವಿರ ಕಿಲೋಮೀಟರ್‌ಗಳ ಒಂದು ಪ್ರವಾಸವನ್ನು ಜನವರಿ ತಿಂಗಳ ಒಂದು ಮುಂಜಾನೆ ಆರಂಭಿಸಿದೆವು. ಹಿಮಗಟ್ಟಿದ ರಸ್ತೆಗಳ ಮೇಲೆ ಕೊರೆಯುವ ಚಳಿಯಲ್ಲಿ ನಮ್ಮ ಪ್ರಯಾಣವನ್ನು ಆರಂಭ ಮಾಡಿದೆವು. ಪಿ.ಎಚ್.ಡಿ. ಪದವಿಗಾಗಿ ಅಧ್ಯಯನ ಮಾಡುತ್ತಿದ್ದ ಇಬ್ಬರು ತರುಣ ಭೌತಶಾಸ್ತ್ರಜ್ಞರಾದ ಶ್ರಷ್ಟಿ ಅಗರ್ವಾಲ್, ರಾಜಾಶಿಕ್ ತರಾಫ್ದರ್, ರುಮೇಲಾ ಗಂಗೋಪಾಧ್ಯಾಯ ಎಂಬ ರಂಗ ಕಲಾವಿದ ಮತ್ತು ನಾನು ಸೇರಿಕೊಂಡು ಗ್ರಾಮೀಣ ಅಮೆರಿಕದ, ಸರ್ವೋತ್ಕೃಷ್ಟ "ಟ್ರಂಪ್ ದೇಶದ" ಸ್ಥಿತಿಗತಿಗೆ ಸಾಕ್ಷಿಯಾಗಲು ಅಣಿಯಾದೆವು.

ಸಾಂಕ್ರಾಮಿಕ ರೋಗದ ಎಡೆಯಲ್ಲಿ ಮೈನಡುಗಿಸುವ ಚಳಿಯಲ್ಲಿ ರೈತರನ್ನು ಭೇಟಿ ಮಾಡುವುದು ಪ್ರಾಣ ಹಿಂಡುತ್ತಿದ್ದರೂ ಕರಿ-ಬಿಳಿಯರೆನ್ನದೆ, ರಿಪಬ್ಲಿಕನ್-ಡೆಮೋಕ್ರಾಟ್ ಎನ್ನದೆ ರೈತರು ನಮ್ಮನ್ನು ಬರಮಾಡಿಕೊಂಡ ರೀತಿ ನಮ್ಮ ಮೈಮನಗಳನ್ನು ಬೆಚ್ಚಗಾಗಿಸಿತು. ಭಾರತದಂತೆಯೇ ಅಮೆರಿಕದ ರೈತರ ಭೂ ಹಿಡುವಳಿ ಕೂಡ ಸಣ್ಣ ರೈತರಿಂದಲೇ ತುಂಬಿ ಹೋಗಿದೆ ಎಂಬುದು ನಮಗೆ ಆಶ್ಚರ್ಯಕರವಾಗಿ ಕಂಡಿತು. ಎಲ್ಲಾ ರೀತಿಯ ಕೃಷಿಯಲ್ಲಿ ಇಂತಹ ಸಣ್ಣ ರೈತರು ಶೇಕಡ 90 ರಷ್ಟಿದ್ದರೂ ಅವರು ಉತ್ಪಾದನೆ ಮಾಡುವುದು ಮಾತ್ರ ಒಟ್ಟು ಮಾರುಕಟ್ಟೆ ಮೌಲ್ಯದ ಶೇಕಡ 25 ರಷ್ಟನ್ನು ಮಾತ್ರ. ಅಮೆರಿಕದ ಗ್ರಾಮೀಣ ಬಿಕ್ಕಟ್ಟಿನ ಬಗ್ಗೆ ನಮಗೆ ಸಿಕ್ಕ ಮೊದಲ ಕುರುಹು ಇದು.

ಕಳೆದ ದಶಕದಲ್ಲಿ ಸಣ್ಣ ಹಿಡುವಳಿದಾರರ ಆದಾಯದಲ್ಲಿ ನಿರಂತರವಾಗಿ ಕುಸಿತ ಕಂಡುಬರುತ್ತಿದೆ. ಫೆಬ್ರವರಿ 2020 ರಲ್ಲಿ ಕೃಷಿಯಿಂದ ಬರುತ್ತಿರುವ ಅಮೆರಿಕದ ಸರಾಸರಿ ಆದಾಯವು 1,400 ಡಾಲರಿನಷ್ಟು ನಕಾರಾತ್ಮಕವಾಗಿತ್ತು (ಅಂದರೆ ಒಟ್ಟು ನಷ್ಟವಾಗುತ್ತಿತ್ತು). ಬ್ರೆಂಟ್ ಬ್ರೀವರ್ ಎಂಬ ರೈತ ಹೇಳುವಂತೆ ಕಳೆದ ಇಪ್ಪತ್ತು ವರ್ಷಗಳಲ್ಲಿ ಗೋದಿ ಬೆಳೆಯ ಉತ್ಪಾದನಾ ವೆಚ್ಚ ಮೂರು ಪಟ್ಟು ಹೆಚ್ಚಾಗಿದ್ದರೆ ಹೊಲದಿಂದ ಹೊರಹೋಗುವ ಸಂದರ್ಭದಲ್ಲಿ ಗೋಧಿಯ ಬೆಲೆ 1865 ರ ಸಿವಿಲ್ ವಾರ್ ಸಂದರ್ಭದಲ್ಲಿ ಇದ್ದಷ್ಟೇ ಇದೆ.

1950 ರಲ್ಲಿ ಚಿಲ್ಲರೆ ಮಾರುಕಟ್ಟೆಯಲ್ಲಿ ಅಮೆರಿಕದ ರೈತರ ಪಾಲು ಶೇಕಡ 50 ರಷ್ಟು ಇದ್ದದ್ದು ಇವತ್ತು ಶೇಕಡ 15 ಕ್ಕಿಂತ ಕಡಿಮೆಗೆ ಕುಸಿದಿದೆ. ರೈತರ ಸಾಲ 425 ಬಿಲಿಯನ್ ಡಾಲರಿಗೆ ಏರಿಕೆಯಾಗಿದೆ. 1981 ರ ಮಹಾ ಕುಸಿತದ ಸಂದರ್ಭದಲ್ಲಿ ಇದ್ದ ಸಾಲದ ಪ್ರಮಾಣಕ್ಕೆ ಹತ್ತಿರವಾಗುತ್ತಿದೆ. ಸಾಲದ ಸುಸ್ತಿ ಮತ್ತು ದಿವಾಳಿ ಘೋಷಣೆ ಪ್ರಮಾಣ ವಿಪರೀತ ಹೆಚ್ಚಳವಾಗುತ್ತಿವೆ ಹಾಗೆಯೇ ಆತ್ಮಹತ್ಯೆ ಸಹಾಯ ವಾಣಿಗೆ ಬರುತ್ತಿರುವ ಕರೆಗಳು ಕೂಡ ಹೆಚ್ಚಾಗುತ್ತಿವೆ. ಉಳಿದ ಆತ್ಮಹತ್ಯೆ ಪ್ರಮಾಣಕ್ಕೆ ಹೋಲಿಸಿದರೆ ಅಮೆರಿಕದಲ್ಲಿ ರೈತರ ಆತ್ಮಹತ್ಯೆಯ ಪ್ರಮಾಣ 4-5 ಪಟ್ಟು ಹೆಚ್ಚಾಗಿದೆ. ನೀರವ ಕತ್ತಲೆ ಕೋಣೆಯಲ್ಲಿ ಗುಂಡು ತುಂಬಿದ ಬಂದೂಕಿನೊಡನೆ ಒಂಟಿಯಾಗಿ ಕುಳಿತು ಆತ್ಮಹತ್ಯೆ ಸಹಾಯವಾಣಿಗೆ ಕರೆ ಮಾಡಿದ ರೈತನ ಧ್ವನಿಗೆ ನಾವು ಕಿವಿಯಾದೆವು. ಸುಸ್ತಿಯಾಗಿರುವ ಮತ್ತು ದಿವಾಳಿಯೆದ್ದಿರುವ ರೈತರಿಗೆ ಕರೆ ಮಾಡಿ ಸಾಲ ವಸೂಲಿ ಮಾಡಲು ತನ್ನ ಮೇಲಧಿಕಾರಿಗಳು ನೀಡುತ್ತಿದ್ದ ಕಿರುಕುಳ ತಾಳಲಾರದೆ ಸ್ಥಳೀಯ ಬ್ಯಾಂಕ್ ಅಧಿಕಾರಿಯೊಬ್ಬರು ಆತ್ಮಹತ್ಯೆಗೆ ಶರಣಾದ ಬಗ್ಗೆ ತಿಳಿದುಕೊಂಡೆವು ಈ ಅಧಿಕಾರಿಗೆ ಇಲ್ಲಿನ ಜನರ ಬಗ್ಗೆ ಕಳೆದ ಎಂಟು ವರ್ಷಗಳಿಂದ ತಿಳಿದಿತ್ತು.

ಸರಿಸುಮಾರು ಶೇಕಡಾ 80 ರಷ್ಟು ಗ್ರಾಮೀಣ ಕೌಂಟಿಗಳು (ನಮ್ಮ ಜಿಲ್ಲೆಗಳಿಗೆ ಸಮಾನಾರ್ಥಕವಾದ್ದು) ಜನಸಂಖ್ಯೆ ಕುಸಿಯುತ್ತಿದೆ. ಅಯೋವಾದ ಧಾನ್ಯ ಬೆಳೆಯುವ ರೈತ ಜಾರ್ಜ್ ನೈಲ್ಲರ್ ತನ್ನ ನೆರೆ ಹೊರೆಯಲ್ಲಿ ಜನರಿಲ್ಲದೆ ಪಾಳುಬಿದ್ದ ಮನೆಗಳನ್ನು ತೋರಿಸಿದನು. ಕೃಷಿ ಅವನತಿಯತ್ತ ಸಾಗಲು ಆರಂಭಿಸಿದ ನಂತರ ಸ್ಥಳೀಯ ವ್ಯಾಪಾರಗಳಾದ ಬೀಜ ಸರಬರಾಜು, ಧಾನ್ಯ ವರ್ತಕರು, ರಿಪೇರಿ ಅಂಗಡಿಗಳು ಹಾಗೂ ಆಸ್ಪತ್ರೆಗಳು ಕೂಡಾ ಗ್ರಾಮೀಣ ಪ್ರದೇಶದಿಂದ ಜಾಗ ಖಾಲಿ ಮಾಡಲು ಆರಂಭಿಸಿದವು. ಇವತ್ತು ಅಮೆರಿಕದ ಗ್ರಾಮೀಣ ಪ್ರದೇಶಗಳಲ್ಲಿ ಸರಾಸರಿ ವಾರ್ಷಿಕ 1000 ಶಾಲೆಗಳು ಮುಚ್ಚಿ ಹೋಗುತ್ತಿವೆ. ಇಂತಹ ಸ್ಥಿತಿಗೆ ರೊನಾಲ್ಡ್ ರೇಗನ್ ಆರಂಭಿಸಿದ ಕೃಷಿಯನ್ನು "ಎಲ್ಲರಿಗೂ ತೆರೆದು ಬಿಡುವ" ಮತ್ತು ಬಕಾಸುರ ಕಂಪನಿಗಳ ಹುಟ್ಟಿಗೆ ಕಾರಣವಾದ ನೀತಿಗಳೇ ಕಾರಣ ಎಂದು ನಾವು ಮಾತನಾಡಿಸಿದ ಸರಿಸುಮಾರು ಎಲ್ಲಾ ರೈತರು ಅಭಿಪ್ರಾಯ ವ್ಯಕ್ತಪಡಿಸಿದರು.

ರೊನಾಲ್ಡ್ ರೇಗನ್ 1981 ರಲ್ಲಿ ಅಮೆರಿಕದ ಅಧ್ಯಕ್ಷರಾದರು. ಆತ ಮುಕ್ತ ಮಾರುಕಟ್ಟೆ ಮತ್ತು ಉದಾರೀಕರಣದ ಉಗ್ರ ಪ್ರತಿಪಾದಕ. ಕೃಷಿ ಆರ್ಥಿಕತೆಯನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಿ ಸ್ಪರ್ಧಾತ್ಮಕ ಮಾರುಕಟ್ಟೆಯನ್ನು ಸೃಷ್ಟಿಸಲಾಗುತ್ತದೆ ಎಂಬ ಪರಿಹಾರದ ಭ್ರಮೆಯನ್ನು ರೈತರು ಹಾಗೂ ಗ್ರಾಹಕರಿಗೆ ಬಿತ್ತಲಾಯಿತು.

ಮಹಾ ಕುಸಿತ ಕಾಲಘಟ್ಟದ ಜಾಗತಿಕ ಹಿಂಜರಿತವು ಕೃಷಿ ಕುಟುಂಬಗಳ ಮೇಲೆ ಬೀರಬಹುದಾದ ಪರಿಣಾಮಗಳಿಂದ ರಕ್ಷಣೆ ಪಡೆಯಲು ರೂಪಿಸಿದ್ದ ಕೃಷಿ ಬೆಂಬಲ ಬೆಲೆ, ಧಾನ್ಯ ಸಂಗ್ರಹಣಾ ಸಾಲ, ಆದ್ಯತೆಯ ಬೆಲೆ ನಿಗದಿ (ಭಾರತದ ಎಂ.ಎಸ್.ಪಿ ರೀತಿ) ಇವುಗಳನ್ನು ರೇಗನ್ ಆಡಳಿತದಲ್ಲಿ ಕಳಚಿ ಹಾಕಲಾಯಿತು. ರಾತ್ರೋ ರಾತ್ರಿ ಬೆಳಗಿಗೆ ಹೊಲದಲ್ಲೇ ಸಿಗುತ್ತಿದ್ದ ಬೆಲೆ ಇಲ್ಲವಾಗಿತ್ತು, ಭೂಮಿಯ ಬೆಲೆ ಪಾತಾಳ ಮುಟ್ಟಿತ್ತು, ಮತ್ತು ಬಡ್ಡಿಯ ದರ ಗಗನ ಮುಟ್ಟಿತ್ತು. ಸರ್ಕಾರದ ಬೆಂಬಲ ಕಳೆದುಕೊಂಡ 2.5 ಲಕ್ಷ ಸಣ್ಣ ಹಿಡುವಳಿಗಳು ಕಣ್ಣು ಮುಚ್ಚಿದ್ದವು, 10 ಲಕ್ಷಕ್ಕೂ ಹೆಚ್ಚಿನ ಪರಂಪರಾಗತ ರೈತರು ನೆಲೆ ಕಳೆದುಕೊಂಡರು ಮತ್ತು ನೀರವ ಪಟ್ಟಣಗಳು ಗ್ರಾಮೀಣ ಅಮೆರಿಕದ ಕತೆ ಹೇಳುತ್ತಿದ್ದವು.

ರೈತರ ಭೂಮಿ ಏನಾಯಿತು? ನಿರೀಕ್ಷೆಯಂತೆ ಬಕಾಸುರ ಕೃಷಿ ಕಂಪನಿಗಳು ಭೂಮಿಯನ್ನೆಲ್ಲ ಕಬ್ಜ ಮಾಡಿಕೊಂಡವು, ಏಕಮುಖಿ ಒಪ್ಪಂದಗಳ ಅಡಿಯಲ್ಲಿ ಭೂರಹಿತ ರೈತರು ಕೃಷಿ ಕಂಪನಿಗಳಲ್ಲಿ ಕೆಲಸ ಮಾಡಬೇಕಾಯಿತು. ಬೃಹತ್ ಕಾರ್ಪೊರೇಟ್‌ಗಳು ತಮ್ಮ ಅಪಾರ ಹಣಕಾಸಿನ ಸಾಮರ್ಥ್ಯ ಬಳಸಿಕೊಂಡು ಮಾರುಕಟ್ಟೆಯನ್ನು ನಿಯಂತ್ರಿಸಿದವು, ಹೊಲದ ಬದುಕಿನಲ್ಲಿ ಸಿಗುತ್ತಿದ್ದ ಬೆಲೆ ಕುಸಿತ ಕಂಡಿತು, ರೈತರು ಕಷ್ಟ ಪಟ್ಟು ನಿರ್ಮಿಸಿದ್ದ ಆಸ್ತಿಗಳನ್ನು ಮೂರು ಕಾಸಿಗೆ ಮಾರಿದರು, ಸಣ್ಣ ರೈತರು ಕೃಷಿಯಿಂದ ಓಡಿ ಹೋಗುವಂತೆ ಲಾಗುವಾಡುಗಳ ಬೆಲೆ ಹೆಚ್ಚಾಯಿತು. ತನ್ನ 45 ಹಸುಗಳನ್ನು ಹೆಸರಿಡಿದು ಕರೆಯುತ್ತಿದ್ದ ಜಿಮ್ ಗುಡ್‌ಮನ್ 40 ವರ್ಷಗಳ ಕಾಲ ಅವುಗಳೊಡನೆ ಹೆಣಗಾಡಿ ಸಾಧ್ಯವಾಗದೆ ಕೊನೆಗೆ ತನ್ನೆಲ್ಲಾ ಹಸುಗಳನ್ನು ಮಾರಿ ತನ್ನ ಧೈರ್ಯವನ್ನು ಮುಚ್ಚಿ ಬಿಟ್ಟನು.

ಜಿಯೋಲ್ ಗ್ರೀನೋ ಎಂಬ ಮತ್ತೊಬ್ಬ ಹೈನುಗಾರಿಕೆ ಮಾಡುತ್ತಿದ್ದ ಕೃಷಿಕ ಈಗ ಕಾರ್ಖಾನೆಯೊಂದರಲ್ಲಿ 12 ಗಂಟೆಯ ಪಾಳಿಯಲ್ಲಿ ಕೆಲಸ ಮಾಡುತ್ತ, ತನ್ನ ಜಮೀನಿನಲ್ಲಿ ಅಳಿದುಳಿದ ಕೃಷಿಯನ್ನು ಉಳಿಸಿಕೊಳ್ಳುವ ಕನಸು ಕಾಣುತ್ತಿದ್ದಾನೆ. ಧಾನ್ಯ ಬೆಳೆಯುತ್ತಿದ್ದ ತಮ್ಮ ಚಿಕ್ಕ ಜಮೀನನ್ನು ಉಳಿಸಿಕೊಳ್ಳಲು ನೈಲ್ಲರ್ ಬಹಳ ಶ್ರಮ ಪಡುತ್ತಿದ್ದಾನೆ. ಪಾಲು ಬೆಳೆಗಾರನೊಬ್ಬ ತನ್ನ ಟ್ರಾಕ್ಟರ್ ಸಾಲದ ಒಂದು ಕಂತು ಪಾವತಿಸಲು ವಿಳಂಬ ಮಾಡಿದರೆ, ಟ್ರಾಕ್ಟರ್ ತಯಾರಿಸುವ ದೊಡ್ಡ ಕಂಪನಿಯವರು ರೈತನ ಟ್ರಾಕ್ಟರ್ ಜಮೀನಿನಲ್ಲೇ ನಿಲ್ಲುವಂತೆ ರಿಮೋಟ್‌ನಲ್ಲೇ ನಿಯಂತ್ರಿಸುತ್ತಾನೆ.

ಜಾನುವಾರು ಸಾಕುವ ರೈತರ ಪರಿಸ್ಥಿತಿ ಇನ್ನೂ ಶೋಚನೀಯ. ಬೃಹತ್ ಕಂಪನಿಗಳು ತನ್ನ ಅಂಗಡಿಯನ್ನು ಮುಚ್ಚಿಸಲು ಹೇಗೆ ಶಾಮೀಲಾಗಿ ಸಂಚು ಮಾಡಿದರು ಎಂಬುದನ್ನು ಮೈಕ್ ಕ್ಯಾಲಿಕ್ರೇಟ್ ಹೇಳುತ್ತಾರೆ. ಕೆಲವೇ ಕೆಲವು ಬೃಹತ್ ಮಾಂಸ ಸಂಸ್ಕರಣೆ ಮಾಡುವ ಕಂಪನಿಗಳು ಕೋಳಿ, ಕುರಿ, ದನ,ಹಂದಿ ಸಾಗಣೆಯನ್ನು ಸಂಪೂರ್ಣವಾಗಿ ನಿಯಂತ್ರಿಸುತ್ತಿವೆ. ಈಗ ರೈತರು ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡು ಕೇವಲ ಪ್ರಾಣಿಗಳನ್ನು ಸಾಕಿ ಕೊಡುವುದಷ್ಟನ್ನೇ ಮಾಡಬೇಕಾಗಿದೆ. ಈ ಬೃಹತ್ ಕಂಪನಿಗಳೇ ಎಲ್ಲವನ್ನೂ ನಿಯಂತ್ರಿಸುವುದರಿಂದ ರೈತರಿಗೆ ಚೌಕಾಸಿಯ ಅವಕಾಶ ಕೂಡಾ ಇಲ್ಲವಾಗಿದೆ. "ಹೊಲದಿಂದ ಮಾರಾಟದವರೆಗೆ" ಮತ್ತು ಧಾನ್ಯದಿಂದ ದಿನಸಿಯವರೆಗೆ ಪ್ರತಿಯೊಂದನ್ನೂ ಬೃಹತ್ ಕೃಷಿ ಕಂಪನಿಗಳು ನಿಯಂತ್ರಿಸುತ್ತಿವೆ

ಇದೇ ಸಮಯದಲ್ಲಿ ಶೇಕಡಾ 70 ರಷ್ಟು ಕೋಳಿ ಸಾಕಾಣಿಕೆದಾರರು ಬಡತನ ರೇಖೆಗಿಂತ ಕೆಳಗೆ ಬದುಕು ನಡೆಸುತ್ತಿದ್ದಾರೆ. ನಾಲ್ಕು ದೊಡ್ಡ ಕಂಪನಿಗಳು ಮೂರನೇ ಎರಡರಷ್ಟು ಬೀಜ ಮಾರುಕಟ್ಟೆಯನ್ನು, ಶೇಕಡಾ 80 ರಷ್ಟು ರಸಗೊಬ್ಬರ ಮಾರುಕಟ್ಟೆಯನ್ನು, ಧಾನ್ಯ ವ್ಯವಹಾರವನ್ನು, ಹೈನು ಉತ್ಪಾದನೆಯನ್ನು, ಮಾಂಸ ಸರಬರಾಜನ್ನು ಮತ್ತು ಶೇಕಡಾ 100 ರಷ್ಟು ಕೃಷಿ ಯಂತ್ರೋಪಕರಣಗಳ ಮಾರುಕಟ್ಟೆಯನ್ನು ನಿಯಂತ್ರಿಸುತ್ತವೆ. ಇದೇ ಸಮಯದಲ್ಲಿ ಸರ್ಕಾರದ ಹಣ ಸಾಲ ಮನ್ನಾ, ಮಾರುಕಟ್ಟೆ ಸೌಕರ್ಯ ನಿರ್ಮಾಣ ಮತ್ತು ಬೆಳೆ ಸಹಾಯಧನ ಹೆಸರಿನಲ್ಲಿ ಬೃಹತ್ ಕೃಷಿ ಕಂಪನಿಗಳ ಕಡೆ ಹರಿಯುತ್ತಿದೆ. ಅಮೆರಿಕ ಸರ್ಕಾರದ 50 ಶತಕೋಟಿ ಡಾಲರುಗಳ ಸಹಾಯಧನದಲ್ಲಿ ಶೇಕಡಾ 70 ರಷ್ಟು ಹಣ ಮೇಲಿನ ಶೇಕಡ 20 ದೊಡ್ಡ ಕೃಷಿಕರಿಗೆ ಹೋಗುತ್ತಿದೆ. ರಾಜಕೀಯ ಬೆಂಬಲವಿಲ್ಲದೆ ಇಂತಹದ್ದೆಲ್ಲ ನಡೆಯಲು ಸಾಧ್ಯವಿರಲಿಲ್ಲ ಎಂದು ಹೇಳುತ್ತಾರೆ ನಿವೃತ್ತ ಪ್ರೊಫೆಸರ್ ಜಾನ್ ಇ ಇಕೆರ್ಡ್.

ಹೆಚ್ಚಿನ ದಕ್ಷತೆ ಮತ್ತು ಗ್ರಾಹಕರ ಕಲ್ಯಾಣದ ಬಗ್ಗೆ ಮಾತನಾಡುತ್ತಲೇ ರೊನಾಲ್ಡ್ ರೇಗನ್ ಬಕಾಸುರ ಏಕಸ್ವಾಮ್ಯ ಕಂಪನಿಗಳ ಉದಯಕ್ಕೆ ನಾಂದಿ ಹಾಡಿದರು. ರೇಗನ್‌ರವರ ಮಾತುಗಳಲ್ಲೇ ಹೇಳುವುದಾದರೆ "ನಾವು ಜನಗಳಿಗೆ ತಮ್ಮ ಸಾಮರ್ಥ್ಯವನ್ನು ಕ್ರೋಢೀಕರಿಸಿಕೊಳ್ಳಲು ಅವಕಾಶ ನೀಡುತ್ತಿದ್ದೇವೆ. ಏಕೆಂದರೆ ಇದು ಹೆಚ್ಚಿನ ದಕ್ಷತೆಗೆ ಕಾರಣವಾಗಲಿದೆ... ಈ ಹುಡುಗರು ಆ ಸಾಮರ್ಥ್ಯವನ್ನು(ಏಕಸ್ವಾಮ್ಯ ಸಾಮರ್ಥ್ಯ) ಬಳಸಿ ಬೆಲೆಗಳನ್ನು ಇಳಿಸಲಿದ್ದಾರೆ".

ಏಕಸ್ವಾಮ್ಯ ಸಾಮರ್ಥ್ಯ ಆಹಾರದ ಬೆಲೆಗಳನ್ನು ಇಳಿಸಿತೆ? ಕಳೆದ 40 ವರ್ಷಗಳಲ್ಲಿ ಅಮೆರಿಕದಲ್ಲಿ ಆಹಾರ ಪದಾರ್ಥಗಳ ಸರಾಸರಿ ಬೆಲೆಗಳಲ್ಲಿ ಶೇಕಡ 200 ರಷ್ಟು ಹೆಚ್ಚಾಗಿದೆ, ಅದೇ ಅವಧಿಯಲ್ಲಿ ಕೆಳಗಿನ ಶೇಕಡ 90 ರಷ್ಟು ಜನರ ದುಡಿಮೆಯ ಆದಾಯ ಶೇಕಡ 25 ರಷ್ಟು ಮಾತ್ರ ಹೆಚ್ಚಾಗಿದೆ. ಕುಟುಂಬ ಕೃಷಿ ಆಂದೋಲನದ ಜೋ ಮ್ಯಾಕ್ಸ್‌ವೆಲ್ ಅಸಹನೀಯ ಗ್ರಾಮೀಣ ಬಡತನ, ಮಕ್ಕಳ ಹಸಿವು, ಆಹಾರ ಅಭದ್ರತೆಯ ಬಗ್ಗೆ ವಿವರಿಸಿದರು.

ಬಲಿಷ್ಠ ರಾಷ್ಟ್ರವೊಂದರ ಬಗ್ಗೆ ಇಂತಹದ್ದನ್ನು ಕೇಳಲು ಯಾರೂ ಬಯಸುವುದಿಲ್ಲ. ಇಂದು ಗ್ರಾಮೀಣ ಅಮೆರಿಕ ಒಂದು ರೀತಿಯ ಪರಿತ್ಯಕ್ತನಂತೆ, ಘನತೆಯನ್ನು ಕಳೆದುಕೊಂಡಂತೆ ಕಾಣುತ್ತದೆ. ನಾವು ಮರಳುವಾಗ ಸ್ಪಷ್ಟವಾದ ಒಂದಂಶವೆಂದರೆ; ಒಂದು ರೀತಿಯ ಪರಿಹಾರವೆಂಬಂತೆ ಅಮೆರಿಕದ ಕೃಷಿಯನ್ನು ಉದಾರೀಕರಿಸಿದ್ದು, ಕನಿಷ್ಠ ಬೆಂಬಲ ಬೆಲೆಯನ್ನು ಇಲ್ಲದಂತೆ ಮಾಡಿದ್ದು, ಗುತ್ತಿಗೆ ಕೃಷಿ ಪ್ರವರ್ಧಮಾನಕ್ಕೆ ಬಂದದ್ದು ಬೃಹತ್ ಕಂಪನಿಗಳಿಗೆ ಮೃಷ್ಟಾನ್ನ ಭೋಜನವಾಯಿತು. ಬೇರೆಯೆಲ್ಲರಿಗೂ ಅದೊಂದು ನಷ್ಟದ ಬಾಬತ್ತಾಗಿತ್ತು. ■

ನಾಲ್ಕು ದೊಡ್ಡ ಕಂಪನಿಗಳು ಮೂರನೇ ಎರಡರಷ್ಟು ಬೀಜ ಮಾರುಕಟ್ಟೆಯನ್ನು, ಶೇಕಡಾ 80 ರಷ್ಟು ರಸಗೊಬ್ಬರ ಮಾರುಕಟ್ಟೆಯನ್ನು, ಧಾನ್ಯ ವ್ಯವಹಾರವನ್ನು, ಹೈನು ಉತ್ಪಾದನೆಯನ್ನು, ಮಾಂಸ ಸರಬರಾಜನ್ನು ಮತ್ತು ಶೇಕಡಾ 100 ರಷ್ಟು ಕೃಷಿ ಯಂತ್ರೋಪಕರಣಗಳ ಮಾರುಕಟ್ಟೆಯನ್ನು ನಿಯಂತ್ರಿಸುತ್ತವೆ. ಇದೇ ಸಮಯದಲ್ಲಿ ಶೇಕಡಾ 70 ರಷ್ಟು ಕೋಳಿ ಸಾಕಾಣಿಕೆದಾರರು ಬಡತನ ರೇಖೆಗಿಂತ ಕೆಳಗೆ ಬದುಕು ನಡೆಸುತ್ತಿದ್ದಾರೆ. ಫೆಬ್ರವರಿ 2020 ರಲ್ಲಿ ಕೃಷಿಯಿಂದ ಬರುತ್ತಿರುವ ಅಮೆರಿಕದ ರೈತರ ಸರಾಸರಿ ಆದಾಯವು 1,400 ಡಾಲರಿನಷ್ಟು ನಕಾರಾತ್ಮಕವಾಗಿತ್ತು (ಅಂದರೆ ಒಟ್ಟು ನಷ್ಟವಾಗುತ್ತಿತ್ತು). ಉಳಿದ ಆತ್ಮಹತ್ಯೆ ಪ್ರಮಾಣಕ್ಕೆ ಹೋಲಿಸಿದರೆ ಅಮೆರಿಕದಲ್ಲಿ ರೈತರ ಆತ್ಮಹತ್ಯೆಯ ಪ್ರಮಾಣ 4-5 ಪಟ್ಟು ಹೆಚ್ಚಾಗಿದೆ.

JANASHAKTHI KANNADA VARA PATRIKE MARCH 22-28, 2021 Price: Rs. 10/- Date of Publication: 19 MARCH 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಸಾರ್ವಜನಿಕ ರಂಗ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ





ಬ್ಯಾಂಕ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ





ಎಲ್‌ಐಸಿ ಖಾಸಗೀಕರಣ ವಿರೋಧಿಸಿ ವಿಮಾ ನೌಕರರ ದೇಶವ್ಯಾಪಿ ಮುಷ್ಕರ





ದೆಹಲಿ ರೈತ ಬಂಡಾಯ ಕಣದಲ್ಲಿ ಎರಡು ದಿನಗಳ ಒಕ್ಕಲು.... ವರದಿ ಪುಟ 6 ರಲ್ಲಿ





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**